23 June 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಆಡುವ ಮಾತಿನಲ್ಲಿ ಹಿಡಿತವಿರಬೇಕು, ಕೇಳಿದವರು ಕ್ಷಮಿಸಬಹುದೇನೋ ಆದರೆ ಮರೆಯಲಾರರು!

▸ ಸ್ನೇಹಾ ಆನಂದ್

info.varthaman@gmail.com



ಬಿಡದಿ ಸಮಗ್ರ ನಗರ ಯೋಜನೆಗೆ ವಿರೋಧ: ಜೆಡಿಎಸ್‌ನಿಂದ ಪಾದಯಾತ್ರೆ ಪುಟ ಸಂ. 2



ತ್ಯಾಜ್ಯ ವಿಲೇವಾರಿಗೆ ಯದುವೀರ್ ಕಟ್ಟುನಿಟ್ಟಿನ ಕ್ರಮ ಪುಟ ಸಂ. 3



ಯೋಗದ ಜಾಗೃತಿ ಮೂಡಿಸೋಣ: ಜಿಲ್ಲಾಧಿಕಾರಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 205 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸಿಎಂ ಡಿಕೆಗೆ ಎಚ್‌ಡಿಕೆ ಸವಾಲು

## ಬಿಡದಿ ಟೌನ್‌ಶಿಪ್ ಯೋಜನೆ: ಭೈರಮಂಗಲಕ್ಕೆ ಚರ್ಚೆಗೆ ಬನ್ನಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿಚಾರದಲ್ಲಿ ರಾಜ್ಯ ರಾಜಕೀಯದಲ್ಲಿ ಭಾರೀ ಚರ್ಚೆ ನಡೆಯುತ್ತಿರುವ ನಡುವೆಯೇ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಯೋಜನೆಗೂ ನನಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು. ನಿಮಗೆ ಧೈರ್ಯವಿದ್ದರೆ ನನ್ನ ಜೊತೆ ಭೈರಮಂಗಲಕ್ಕೆ ಬನ್ನಿ. ಅಲ್ಲಿನ ರೈತರು ಭೂಮಿ ಕೊಡಲು ಒಪ್ಪಿದ್ದಾರೆಯೇ? ಇಲ್ಲವೇ ಎಂದು ಸಾರ್ವಜನಿಕವಾಗಿಯೇ ಕೇಳೋಣ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸವಾಲು ಹಾಕಿದರು.

ಮಾಜಿ ಶಾಸಕ ಮಾಗಡಿ ಮಂಜುನಾಥ್ ಹಾಗೂ ಜೆಡಿಎಸ್ ಗ್ರೇಟರ್ ಬೆಂಗಳೂರು ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ ಅವರೊಂದಿಗೆ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಎಚ್.ಡಿ. ಕುಮಾರಸ್ವಾಮಿ ಅವರು, ತಮ್ಮ ಅವಧಿಯಲ್ಲಿ ಏನಾಗಿತ್ತು?




ಕಾಂಗ್ರೆಸ್ ನಾಯಕರು ಅಂದಿನ ಸದನದಲ್ಲಿ ಏನು ಹೇಳಿದ್ದರು ಮತ್ತು ಈಗಿನ ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ದಾಖಲೆಗಳ ಸಮೇತ ವಿವರಿಸಿದರು.

ನಾನು 2006ರಲ್ಲಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಐದು ಕಡೆ ಉಪನಗರ ಯೋಜನೆಗಳನ್ನು ಘೋಷಿಸಿದ್ದು ಸತ್ಯ. ಆದರೆ, ಬಿಡದಿ ಟೌನ್‌ಶಿಪ್ ಯೋಜನೆಗೆ 2007ರಲ್ಲೇ ತೆರೆ ಎಳೆದಿದ್ದೆ. ಆ ಸಮಯದಲ್ಲಿ ಸದನದಲ್ಲಿ ಇದೇ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದ್ದರು ಎಂದು ಹೇಳಿದರು. ಇದು ಫಲವತ್ತಾದ ಭೂಮಿ. ರೈತರು ಭೂಮಿ ಕೊಡಬಾರದು. ಇದು ರಿಯಲ್ ಎಸ್ಟೇಟ್ ದಂಧೆ ಎಂದು ಹೇಳಿದ್ದ ಅವರ ಭಾಷಣಗಳ ಪ್ರತಿಗಳು ನನ್ನ ಬಳಿ ಇವೆ ಪುಟ 2ಕ್ಕೆ

### ಸತ್ತವರ ಭೂಮಿಗೂ ಹೆಬ್ಬೆಟ್ಟು?

ಡಿ.ಕೆ.ಶಿವಕುಮಾರ್ ವಿರುದ್ಧ ವೈಯಕ್ತಿಕ ಮಟ್ಟದಲ್ಲಿಯೂ ವಾಗ್ದಾಳಿ ನಡೆಸಿದ ಎಚ್.ಡಿ.ಕುಮಾರಸ್ವಾಮಿ ಅವರು, ಡಿನೋಟಿಫಿಕೇಶನ್ ಮಾಡಿದರೆ ಜೈಲಿಗೆ ಹೋಗಬೇಕಾಗುತ್ತದೆ. ರೈತರ ಭೂಮಿ ಉಳಿಸಿದರೆ ಜೈಲಿಗೆ ಹೋಗಲ್ಲ ಎಂದಿದ್ದಾರೆ. ಆದರೆ ಅಕ್ರಮ ಎಸಗಿದರೆ ಖಂಡಿತ ಜೈಲಿಗೆ ಹೋಗುತ್ತೀರಿ. ಸತ್ತಿರುವ ವ್ಯಕ್ತಿಯ ಹೆಸರಿನಲ್ಲಿ ಬೇನಾಮಿ ಹೆಬ್ಬೆಟ್ಟು ಹಾಕಿಸಿ ಭೂಮಿ ಕಬಳಿಸುವಾಗ ಜೈಲಿಗೆ ಹೋಗುವ ಭಯ ಇರಲಿಲ್ಲವೇ ಎಂದು ವಾಗ್ದಾಳಿ ನಡೆಸಿದರು.

ನಾಗರಬಾವಿಯಲ್ಲಿ ಕಚೇರಿ ಮಾಡಿಕೊಂಡು ಏನೇನು ಮಾಡಿದ್ದೀರಿ ಎಂಬುದು

### ಸವಾಲು ಸ್ವೀಕರಿಸಿದ ಡಿಕೆಶಿ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಚರ್ಚೆಗೆ ಬರುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಕಿರುವ ಸವಾಲನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವೀಕರಿಸಿದ್ದಾರೆ. ಬಿಡದಿ ಯೋಜನೆ ಬಗ್ಗೆ ಚರ್ಚಿಸಲು ನಾನು ಸಹ ಸಿದ್ಧನಿದ್ದೇನೆ. ವಿಧಾನಸೌಧಕ್ಕೆ ಜೂನ್ 26ರಂದು ಬೆಳಗ್ಗೆ 11ಕ್ಕೆ ನಿಮ್ಮ ಐವರು ಜನಪ್ರತಿನಿಧಿಗಳ ಜೊತೆ ಬನ್ನಿ ಎಂದು ಪ್ರತಿ ಸವಾಲು ಹಾಕಿದ್ದಾರೆ.

### ಒಪ್ಪಿಗೆ ನೀಡಲು ರೈತರಿಗೆ ಬೆದರಿಕೆ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದ ಕಡತಗಳ ವಿಲೇವಾರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆಯುತ್ತಿಲ್ಲ. ಬದಲಾಗಿ ನಾಗರಭಾವಿ ಬಳಿಯ ಬಾಡಿಗೆ ಮನೆಯಲ್ಲಿ ಕೆಲವರನ್ನು ಕೂರಿಸಿಕೊಂಡು ಕೆಲಸ ನಡೆಸಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

4,500ಕ್ಕೂ ಹೆಚ್ಚು ರೈತರು ಭೂಸ್ವಾಧೀನ ವಿರೋಧಿಸಿ ಆಕ್ಷೇಪಣೆ ಸಲ್ಲಿಸಿದ್ದರೂ ಒಂದಕ್ಕೂ ಉತ್ತರ ನೀಡಿಲ್ಲ. ಬದಲಾಗಿ ಡಿಸಿ ಕಚೇರಿಗೆ ಕರೆಸಿ ಬೆದರಿಕೆ ಹಾಕಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ರೈತರಿಗೆ ಆಮಿಷ ಒಡ್ಡುತ್ತಿದೆ. ಶೇ.50ರಷ್ಟು ಹಣ ಕೊಡ್ತೀವಿ, ಅಭಿವೃದ್ಧಿ ಆದ ಮೇಲೆ ಸೈಟ್ ಕೊಡ್ತೀವಿ ಎನ್ನುವುದು ಕೇವಲ ಆಮಿಷ. ನೈಸ್ ಯೋಜನೆಯಲ್ಲಿ ರೈತರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ. ಈಗ ಹೊಸ ಯೋಜನೆ ಹೆಸರಲ್ಲಿ ಮತ್ತೊಂದು ಲೂಟಿಗೆ ಸಿದ್ಧತೆ ನಡೆದಿದೆ. ಅಡಿಕೆ, ರೇಷ್ಮೆ ಸೇರಿದಂತೆ ಫಲವತ್ತಾದ ಕೃಷಿ ಭೂಮಿಯನ್ನು ನಾಶಮಾಡಿ ರಿಯಲ್ ಎಸ್ಟೇಟ್ ದಂಧೆಗೆ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದರು.

# ಉದಾಸೀನತೆಯಿಂದ ಅಡ್ಡ ಮತದಾನ

## ಬಿಜೆಪಿ ನಾಯಕರ ವಿರುದ್ಧ ಸದಾನಂದಗೌಡ ಅಸಮಾಧಾನ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿ ಉಂಟಾಗಿರುವ ಆಂತರಿಕ ಭಿನ್ನಮತ ಮತ್ತು ಅಡ್ಡ ಮತದಾನದ (ಕ್ರಾಸ್ ವೋಟಿಂಗ್) ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರು ಸ್ವಪಕ್ಷದ ನಾಯಕರ ವಿರುದ್ಧವೇ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಪಕ್ಷದ ರಾಜ್ಯ ನಾಯಕರ ಉದಾಸೀನತೆಯೇ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲ್ಲಲು ಮತ್ತು ಬಿಜೆಪಿಗೆ ಮುಖಭಂಗವಾಗಲು ಪ್ರಮುಖ ಕಾರಣ ಎಂದು ಹೇಳುವ ಮೂಲಕ ಅವರು ಪಕ್ಷದ ವಲಯದಲ್ಲಿ ದೊಡ್ಡ ಸಂಚಲನ ಮೂಡಿಸಿದ್ದಾರೆ. ಪಕ್ಷದೊಳಗಿನ ವಿಶ್ವಾಸ ದ್ರೋಹಿಗಳನ್ನು ಪತ್ತೆಹಚ್ಚುವ ಕುರಿತು ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ, ಚುನಾವಣೆಗೂ ಮುನ್ನ ಬೆಂಗಳೂರಿನ ಅಪಾರ್ಟ್‌ಮೆಂಟ್ ಒಂದರಲ್ಲಿ ನಡೆದಿದ್ದ ರಹಸ್ಯ ಸಭೆಯ ಸ್ಫೋಟಕ ಮಾಹಿತಿಯನ್ನು ಅವರು ಸಾರ್ವಜನಿಕವಾಗಿ ಬಹಿರಂಗಪಡಿಸಿದ್ದಾರೆ.



### ಅಪಾರ್ಟ್‌ಮೆಂಟ್ ರಹಸ್ಯ ಸಭೆಯ ಕರಾಳ ಸತ್ಯ

ಕಾಂಗ್ರೆಸ್ ಪಕ್ಷವು ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದಾಗಲೇ ನಮ್ಮ ನಾಯಕರು ಎಚ್ಚೆತ್ತುಕೊಳ್ಳಬೇಕಿತ್ತು ಎಂದು ಬೇಸರ ವ್ಯಕ್ತಪಡಿಸಿದ ಸದಾನಂದಗೌಡರು, ಜೂನ್ 13ರಂದು ತಮಗೆ ಹೆಬ್ಬಾಳದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಿಂದ ಬಂದಿದ್ದ ಕರೆಯೊಂದರ ವಿವರ ನೀಡಿದರು. ಕಾಂಗ್ರೆಸ್‌ನ ನಾಲ್ಕು ಪ್ರಮುಖ ನಾಯಕರು ಮತ್ತು ಬಿಜೆಪಿಯ ಕೆಲವು ಶಾಸಕರು ಅಲ್ಲಿ ರಹಸ್ಯ ಸಭೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕ ತಕ್ಷಣವೇ ತಾವು ಅಲರ್ಟ್ ಆಗಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಆರ್. ಅಶೋಕ್ ಅವರಿಗೆ ಕರೆ ಮಾಡಲು ಪ್ರಯತ್ನಿಸಿದ್ದಾಗಿ ತಿಳಿಸಿದರು. ಪುಟ 2ಕ್ಕೆ

### ಎಚ್ಚರಿಸಿದರೂ ಕ್ರಮ ಕೈಗೊಳ್ಳದ ನಾಯಕರು

ಮೊದಲ ಸಭೆಯ ಮರುದಿನವೇ ಅದೇ ಅಪಾರ್ಟ್‌ಮೆಂಟ್ ಪಕ್ಕದ ಮತ್ತೊಂದು ಕಟ್ಟಡದಲ್ಲಿ ಎರಡನೇ ರಹಸ್ಯ ಸಭೆಯೂ ನಡೆದಿತ್ತು. ಆ ಬಾರಿಯೂ ತಾವು ಅದೇ ಪ್ರಧಾನ ಕಾರ್ಯದರ್ಶಿಗೆ ಕರೆ ಮಾಡಿ ಪರಿಸ್ಥಿತಿಯ ಗಂಭೀರತೆಯನ್ನು ಎಚ್ಚರಿಸಿದರೂ ನಮ್ಮ ನಾಯಕರು ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳಲಿಲ್ಲ ಎಂದು ಸದಾನಂದಗೌಡರು ಟೀಕಿಸಿದರು. ಈಗ ಅಡ್ಡಮತದಾನ ನಡೆದು ಪಕ್ಷಕ್ಕೆ ಭಾರಿ ಹಿನ್ನಡೆಯಾದ ಮೇಲೆ, ಅದೇ ಪ್ರಧಾನ ಕಾರ್ಯದರ್ಶಿ ತಮಗೆ ಕರೆ ಮಾಡಿ 'ಅಣ್ಣ ನೀವು ಹೇಳಿದ ಹಾಗೆಯೇ ಆಯ್ತಲ್ಲ' ಎಂದು ಮರುಗಿದರು. ಅದಕ್ಕೆ ತಾವು 'ಹೊಳೆ ದಾಟಿದ ಮೇಲೆ ಮತ್ತೇನು ಚರ್ಚೆ?' ಎಂದು ಬೇಸರದಿಂದಲೇ ಉತ್ತರಿಸಿರುವುದಾಗಿ ಅವರು ಪ್ರಸ್ತಾಪಿಸಿದರು.

### ಸರ್ಕಾರಿ ನೌಕರರಿಗೆ ಗ್ಯಾರಂಟಿಯಿಂದ ಕೋಕ್

**ಬೆಂಗಳೂರು:** ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರನ್ನು ಎಲ್ಲಾ ಗ್ಯಾರಂಟಿ ಯೋಜನೆಗಳಿಂದ ಹೊರಗಿಡಲು ರಾಜ್ಯ ಸರ್ಕಾರ ಮುಂದಾಗಿದೆ.

ಗ್ಯಾರಂಟಿ ಪ್ರಾಧಿಕಾರ ಈ ಬಗ್ಗೆ ಚಿಂತನೆ ನಡೆಸಿದೆ. ಸರ್ಕಾರಿ ನೌಕರರ ಕುಟುಂಬಗಳನ್ನು ಗ್ಯಾರಂಟಿ ಯೋಜನೆಗಳಿಂದ ಕಡಿತಗೊಳಿಸುವ ಬಗ್ಗೆ ಚರ್ಚಿಸುತ್ತಿದೆ. ಸದ್ಯ ಪ್ರಾಧಿಕಾರವು ಸರ್ಕಾರಿ ನೌಕರರಿಗೆ ಸ್ವಯಂ ಪ್ರೇರಿತವಾಗಿ ಗ್ಯಾರಂಟಿ ಸೌಲಭ್ಯ ಬಿಟ್ಟುಕೊಡಿ ಎಂದು ಸಲಹೆ ನೀಡಿದೆ.

ಈ ಕುರಿತು ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಮಾತನಾಡಿ, ಜಿಎಸ್‌ಟಿ ವ್ಯಾಪ್ತಿಗೆ ಬರುವವರಿಗೆ ಹಾಗೂ ಐಟಿ ಪಾವತಿದಾರರಿಗೆ ಕೊಡಬಾರದು ಅಂತಿದೆ. ಈ ಕುರಿತು ಸರ್ಕಾರಿ ನೌಕರರ ಜೊತೆ ಚರ್ಚೆ ಮಾಡುತ್ತೇವೆ. ಸರ್ಕಾರದ ಗ್ಯಾರಂಟಿ ಯೋಜನೆ ಫಲಾನುಭವಿಗಳು ಸ್ವಯಂಪ್ರೇರಿತವಾಗಿ ಬಿಟ್ಟುಕೊಡಲು ಸರ್ಕಾರಿ ನೌಕರರ ಸಂಘ ಮತ್ತು ಇತರೆ ಸಂಘಗಳೊಂದಿಗೆ ಚರ್ಚೆ ಪುಟ 2ಕ್ಕೆ

# ಕೋಚಿಂಗ್ ಸೆಂಟರ್‌ಗೆ ಬೆಂಕಿ: 15 ಮಂದಿ ಸಾವು

**ನವದೆಹಲಿ:** ಉತ್ತರಪ್ರದೇಶದ ಲಖನೌದ ಪುರಾಣಿ ಪ್ರದೇಶದ ಕೋಚಿಂಗ್ ಸೆಂಟರ್ ನಲ್ಲಿ ಭಾರಿ ಬೆಂಕಿ ಪರಿಣಾಮ 15 ಮಂದಿ ಸಜೀವ ದಹನವಾಗಿದ್ದಾರೆ. ಕೆಲವರು ಪ್ರಾಣವನ್ನು ಉಳಿಸಿಕೊಳ್ಳಲು ಹಲವರು ಕಟ್ಟಡದಿಂದ ಜಿಗಿದಿದ್ದಾರೆ.

ಅಗ್ನಿಶಾಮಕ ದಳ ಮತ್ತು ಪೊಲೀಸ್ ತಂಡಗಳು ತಕ್ಷಣ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಬೆಂಕಿಯಲ್ಲಿ ಸಿಕ್ಕಿಬಿದ್ದವರನ್ನು ಸ್ಥಳಾಂತರಿಸುವಲ್ಲಿ ಆಡಳಿತಕ್ಕೆ ಸಹಾಯ ಮಾಡಿದರು. ಕಂಪ್ಯೂಟರ್ ಕೋಚಿಂಗ್ ಸೆಂಟರ್ ನಲ್ಲಿ ಬೆಂಕಿ ಹೊತ್ತಿಕೊಂಡಿದ್ದು ಇನ್ನೂ ಒಳಗೆ ಸಿಲುಕಿಕೊಂಡಿದ್ದಾರೆ ಎನ್ನಲಾಗಿದೆ.

ದಟ್ಟವಾದ ಹೊಗೆಯಿಂದಾಗಿ ರಕ್ಷಣಾ ಕಾರ್ಯಾಚರಣೆ ಸವಾಲಾಗಿ ಪರಿಣಮಿಸಿದ್ದರಿಂದ ಅಗ್ನಿಶಾಮಕ ಸಿಬ್ಬಂದಿ ಪಕ್ಕದ ಕಟ್ಟಡದ ಗೋಡೆಯನ್ನು ಒಡೆದು ಅದರ ಮೂಲಕ ಈ ಕಟ್ಟಡದ ಒಳಗೆ ಪ್ರವೇಶಿಸಿದ್ದರು. ಮೂರು ಅಂತಸ್ತಿನ ಈ ಕಟ್ಟಡದ ನೆಲಮಹಡಿಯಲ್ಲಿ ಸಾಕುಪ್ರಾಣಿಗಳ ಅಂಗಡಿ ಮತ್ತು ಮೇಲಿನ ಮಹಡಿಯಲ್ಲಿ ಅನಿಮೇಷನ್ ಸೆಂಟರ್



ಇತ್ತು. ಮೃತದೇಹಗಳನ್ನು ಸಮೀಪದ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲಖನೌದಲ್ಲಿ ಸಂಭವಿಸಿದ ಬೆಂಕಿ ಅವಘಡದ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಾಹಿತಿ ನೀಡಿದ್ದಾರೆ. ಗಾಯಾಳುಗಳಿಗೆ ತಕ್ಷಣ ಮತ್ತು ಸರಿಯಾದ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ.

# ಯುವತಿ, ತಂದೆ–ತಾಯಿ ಆತ್ಮಹತ್ಯೆ

## ಮದುವೆ ನಿಶ್ಚಯವಾಗಿದ್ದ ಮಗಳಿಗೆ ಯುವಕನ ಕಿರುಕುಳಕ್ಕೆ ಬೇಸತ್ತು ಕೃತ್ಯ

**ಮೈಸೂರು:** ಮದುವೆ ನಿಶ್ಚಯವಾಗಿದ್ದ ಯುವತಿ ಮತ್ತು ತಂದೆ, ತಾಯಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಟಿ.ನರಸೀಪುರ ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಜೂನ್ 24ರಂದು ಬುಧವಾರ ದಾಂಪತ್ಯ ಜೀವನಕ್ಕೆ ಕಾಲಿಡಬೇಕಿದ್ದ ಯುವತಿಯ ಕುಟುಂಬದ ಸದಸ್ಯರು ಡೆತ್ ನೋಟ್ ಬರೆದಿಟ್ಟು ಸಾವಿಗೆ ಶರಣಾಗಿದ್ದಾರೆ. ಯುವತಿ ರಕ್ಷಿತಾ (21) ಹಾಗೂ ಆಕೆಯ ತಂದೆ ಶಿವಣ್ಣ(54), ತಾಯಿ ನಾಗರತ್ನ (44) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಮ್ಮ ಮೂವರ ಸಾವಿಗೂ ಉಲ್ಲಾಸ್ ಗೌಡ ಕಾರಣನೆಂದು ಡೆತ್‌ನೋಟ್‌ನಲ್ಲಿ ಬರೆದಿಟ್ಟಿದ್ದಾರೆ. ತಮ್ಮ ಗ್ರಾಮದ ಉಲ್ಲಾಸ್ ಗೌಡ ಮಗಳಿಗೆ ಕಿರುಕುಳ ನೀಡುತ್ತಿದ್ದ ಹಿನ್ನೆಲೆಯಲ್ಲಿ ಮೂವರು ವಿಷಸೇವಿಸಿ ಒಟ್ಟಿಗೆ ಪ್ರಾಣಬಿಟ್ಟಿದ್ದಾರೆ.

ಕುಟುಂಬ ಅಂದುಕೊಂಡಂತೆ ನಡೆದಿದ್ದರೆ ಜೂನ್ 24ರಂದು ರಕ್ಷಿತಾ ವಿವಾಹ ನಡೆಯಬೇಕಿತ್ತು. ಆದರೆ ಈಗ ಮದುವೆ ಸಂಭ್ರಮದಲ್ಲಿರಬೇಕಿದ್ದ ಮನೆಯಲ್ಲೀಗ ಸೂತಕ ಆವರಿಸಿದೆ.

ಮೂರು ತಿಂಗಳ ಹಿಂದೆ ರಕ್ಷಿತಾಗೆ ಮದುವೆ ನಿಶ್ಚಯವಾಗಿತ್ತು. ಅವರ ನಿಶ್ಚಿತಾರ್ಥದ ಸಮಯದಲ್ಲಿ ಉಲ್ಲಾಸ್ ಗೌಡ ಓಡಾಡಿಕೊಂಡಿದ್ದ. ಆದರೆ ಒಂದು ವಾರದ ಹಿಂದೆ ರಕ್ಷಿತಾಳನ್ನು ಲವ್ ಮಾಡುತ್ತಿದ್ದೇನೆ ಮದುವೆ ಮಾಡಿಕೊಡಿ ಎಂದು ಆಕೆಯ ಪೋಷಕರ ಬಳಿ ಉಲ್ಲಾಸ್ ಕೇಳಿದ್ದ ಎನ್ನಲಾಗಿದೆ. ಆಗ ಬೈದು ಬುದ್ಧಿ ಮಾತು ಹೇಳಿದ್ದರು. ಅಷ್ಟಕ್ಕೂ ಕೇಳದೇ ಗಲಾಟೆ ಮಾಡಿದ್ದ. ರಾತ್ರಿ ಗ್ರಾಮದಲ್ಲಿ ಹಿರಿಯರನ್ನು ಸೇರಿಸಿ ನ್ಯಾಯ ಪಂಚಾಯತಿ ಮಾಡಿದ್ದರು.

ಬಳಿಕ ಈ ಹಿಂದೆ ರಕ್ಷಿತಾ ತನಗೆ ಕಳುಹಿಸಿದ್ದ ಕೆಲವು ಮೆಸೇಜ್ ಹಾಗೂ ಫೋಟೋಗಳನ್ನು ಪುಟ 2ಕ್ಕೆ



### ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ ಆದೇಶ

**ಬೆಂಗಳೂರು:** ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಒಸಿಯಿಂದ ವಿನಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ. 15 ದಿನಗಳವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ.

ವಿದ್ಯುತ್ ಸಂಪರ್ಕಕ್ಕೆ ಒಸಿಯಿಂದ ವಿನಾಯಿತಿ ಅನುಷ್ಠಾನಕ್ಕೆ ಸಚಿವ ಸಂಪುಟದಲ್ಲಿ ಗ್ರೀನ್ ಸಿಗ್ನಲ್ ಸಿಕ್ಕಿತ್ತು. ಜಿಬಿಎ, ಮಹಾನಗರ ಪಾಲಿಕೆ, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 2400 ಚದರ ಅಡಿಗಳವರೆಗೆ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆ ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳಿಗೆ ಅನ್ವಯ ಆಗಲಿದೆ.

ಜಿ+3 ಅಂತಸ್ತಿನ ಕಟ್ಟಡ, ಸ್ಟಿಲ್ಟ್ ಪಾರ್ಕಿಂಗ್+4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳು, ಪೂರ್ಣಗೊಂಡು ಪುಟ 2ಕ್ಕೆ

### ಕೆಲವೆಡೆ 3 ದಿನ ಮಳೆ

**ಬೆಂಗಳೂರು:** ರಾಜ್ಯದಾದ್ಯಂತ ದುರ್ಬಲ ಮುಂಗಾರು ಮುಂದುವರಿಯಲಿದೆ. ಆದರೂ ಕರಾವಳಿ, ಒಳನಾಡು ಜಿಲ್ಲೆಗಳಲ್ಲಿ ಮೂರು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ 7 ದಿನಗಳ ಕಾಲ ಕರ್ನಾಟಕದಲ್ಲಿ ದುರ್ಬಲ ಮುಂಗಾರು ಇರಲಿದೆ. ಕೆಲವೆಡೆ ಗುಡುಗು, ಸಿಡಿಲು ಸಹಿತ ಜೋರಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಕರಾವಳಿ ಜಿಲ್ಲೆಗಳಲ್ಲಿ ಜೂನ್ 22ರಿಂದ 24 ರವರೆಗೆ ಹಾಗೂ ಒಳನಾಡು ಜಿಲ್ಲೆಗಳಲ್ಲಿ ಜೂನ್ 22, 23 ಮತ್ತು 25ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಮಾಹಿತಿ ನೀಡಿದೆ.



# ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆ

## ಅಧಿಕಾರಿಗಳಿಗೆ ಸಚಿವ ಪರಮೇಶ್ವರ್ ಸೂಚನೆ

**ಬೆಂಗಳೂರು:** ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ಕಂದಾಯ ಸಚಿವ, ಡಿಸಿಎಂ ಜಿ.ಪರಮೇಶ್ವರ್ ಸೂಚನೆ ನೀಡಿದರು.

ಕಂದಾಯ ಇಲಾಖೆ ವಿವಿಧ ಯೋಜನೆ ಅನುಷ್ಠಾನ ಕುರಿತು ವಿಧಾನಸೌಧದಲ್ಲಿ ಸೋಮವಾರ ಪ್ರಗತಿ ಪರಿಶೀಲನೆ ನಡೆಸಿದ ಅವರು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ವಿಳಂಬ ಆಗಬಾರದು. ಜೇಷ್ಠತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಿ. ಪಾರದರ್ಶಕವಾಗಿ ಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿದರು.



ಬಾಕಿ ಉಳಿದಿರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡಬೇಕು. ಜೊತೆಗೆ, ಇಲಾಖೆಯ ಎಲ್ಲ ಕಾರ್ಯಗಳ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಗುರಿ ಸಾಧನೆಯತ್ತ ಗಮನ ಹರಿಸಬೇಕು. ಸಾರ್ವಜನಿಕರಿಗೆ ಪುಟ 2ಕ್ಕೆ

# 'ಮಾರಿಕೊಂಡವರಿಗೆ' ನೋವು: ನಟ ಪ್ರಕಾಶ್ ರಾಜ್ ವ್ಯಂಗ್ಯ

**ಬೆಂಗಳೂರು:** ಬಹುಭಾಷಾ ನಟ ಪ್ರಕಾಶ್ ರಾಜ್ ವಿವಿಧ ರಾಜ್ಯಗಳಲ್ಲಿ ನಾಲ್ಕು ಮತದಾರರ ಗುರುತಿನ ಚೀಟಿ ಪಡೆದಿದ್ದಾರೆ ಎಂಬ ಆರೋಪದಡಿ ಅವರ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿದೆ ಎಂದು ಹಲವು ಸುದ್ದಿ ವಾಹಿನಿಗಳು ಮತ್ತು ಅಂತರ್ಜಾಲದಲ್ಲಿ ವರದಿಗಳು ಪ್ರಕಟವಾಗಿತ್ತು.



ಇದಕ್ಕೆ ಖಾರವಾಗಿ ಪ್ರತಿಕ್ರಿಯೆ ನೀಡಿರುವ ಖ್ಯಾತ ನಟ ಪ್ರಕಾಶ್ ರಾಜ್ ಅವರು, ತಮ್ಮ ಬಗ್ಗೆ ಬಂದಿರುವ ಈ ವರದಿಗಳನ್ನು ತಳ್ಳಿಹಾಕಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಸ್ಪಷ್ಟನೆ ನೀಡಿದ್ದಾರೆ. ತಮ್ಮ ವಿರುದ್ಧ ವಾರಂಟ್ ಹೊರಡಿಸಿರುವ ಬಗ್ಗೆ ಬರೆದ ವರದಿಗಳನ್ನು ಹಂಚಿಕೊಂಡಿರುವ ನಟ, 'ಸುಳ್ಳುಸುದ್ದಿ ಸೃಷ್ಟಿಸುವುದರಲ್ಲಿ ಕಾರ್ಯನಿರತರಾದ ಮಾರಿಕೊಂಡವರು. ಪಾಪ ಅವರಿಗೆ ತುಂಬಾ ನೋವಾಗಿರಬೇಕು. ಆದರೆ, ಅವರನ್ನು ಬ್ಯುಸಿಯಾಗಿಟ್ಟಿದ್ದಕ್ಕೆ ಪುಟ 2ಕ್ಕೆ

# 'ಪುಸ್ತಕ ಮನೆ'ಗೆ 2 ಎಕರೆ ಭೂಮಿ, 5 ಕೋಟಿ ಅನುದಾನ

## ಅಂಕೇಗೌಡರು ಸಂಗ್ರಹಿಸಿರುವ 20 ಲಕ್ಷ ಪುಸ್ತಗಳ ಸಂರಕ್ಷಣೆಗೆ ಸಿಎಂ ಡಿಕೆಶಿ ಉಡುಗೊರೆ

**ಬೆಂಗಳೂರು:** ಪದ್ಮಶ್ರೀ ಪುರಸ್ಕೃತ ಕನ್ನಡಿಗ ಮಂಡ್ಯದ ಅಂಕೇಗೌಡರ ಕನಸಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಡುಗೊರೆ ನೀಡಿದ್ದಾರೆ.

'ಪುಸ್ತಕ ಮನೆ' ಅಂಕೇಗೌಡರು ಸಂಗ್ರಹಿಸಿರುವ ಅಪರೂಪದ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ರಕ್ಷಣೆಗೆ ಹೈಟೆಕ್ ಗ್ರಂಥಾಲಯ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ 5 ಕೋಟಿ ರೂಪಾಯಿ ಅನುದಾನ ಮತ್ತು 2 ಎಕರೆ ಜಮೀನು ನೀಡಲು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸೋಮವಾರ ಮಹತ್ವದ ಆದೇಶ ಹೊರಡಿಸಿದ್ದಾರೆ.

ವಿಧಾನಸೌಧದ ಮುಖ್ಯಮಂತ್ರಿ ಕಚೇರಿಯಲ್ಲಿ ಅಂಕೇಗೌಡ ಅವರು ಸೋಮವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತನಾಡಿದರು. ಈ ಸಂದರ್ಭದಲ್ಲಿ ಅಂಕೇಗೌಡರು ತಮ್ಮ ಪುಸ್ತಕ ಮನೆಯ ಇತಿಹಾಸ ಹಾಗೂ ಅಲ್ಲಿರುವ ಲಕ್ಷಾಂತರ ಜ್ಞಾನ ಭಂಡಾರವನ್ನು ಸಂರಕ್ಷಿಸಲು ಎದುರಿಸುತ್ತಿರುವ ಸವಾಲುಗಳನ್ನು ಮುಖ್ಯಮಂತ್ರಿ ಡಿಕೆಶಿ ಮುಂದೆ ವಿವರಿಸಿದರು.



### ಅಂಕೇಗೌಡರ ಸಾಧನೆ ಏನು?

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಹರಳಹಳ್ಳಿಯಲ್ಲಿರುವ 'ಪುಸ್ತಕದ ಮನೆ'ಯನ್ನು ಸಾರ್ವಜನಿಕರ ಓದಿಗೆ ತೆರೆದಿಟ್ಟಿರುವ ಎಂ.ಅಂಕೇಗೌಡರು ಸುಮಾರು ನಾಲ್ಕು ಲಕ್ಷ ಪುಸ್ತಕಗಳು, ನಾಣ್ಯ, ಅಂಚೆ ಚೀಟಿ ಮತ್ತು ಲಗ್ನಪತ್ರಿಕೆಗಳ ಅಪರೂಪದ ಸಂಗ್ರಹ ಮಾಡಿದ್ದಾರೆ.

ಪಾಂಡವಪುರ ತಾಲ್ಲೂಕಿನ ಚಿನಕುರಳಿಯ ಅವರು, ಮೈಸೂರು ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಂಡಕ್ಟರ್ ಆಗಿದ್ದರು. ಸಂಜೆ ಕಾಲೇಜಿನಲ್ಲಿ ಓದಿ ಬಿ.ಎ ಪದವಿ ಪಡೆದರು. ಬಳಿಕ, ಅಂಚೆ ಮತ್ತು ತೆರಪಿನ ಮೂಲಕ ಕನ್ನಡದಲ್ಲಿ ಎಂ.ಎ. ಪದವಿ ಗಳಿಸಿದರು. ಸಕ್ಕರೆ ಕಾರ್ಖಾನೆಯಲ್ಲಿ ಅಧಿಕಾರಿಯಾಗಿದ್ದರು. ತಮ್ಮ ಸಂಬಳದ ಹೆಚ್ಚಿನ ಹಣವನ್ನು ಪುಸ್ತಕ ಕೊಳ್ಳುವುದಕ್ಕೇ ಬಳಸುತ್ತಿದ್ದರು. ಪುಸ್ತಕಗಳ ಸಂಗ್ರಹಕ್ಕಾಗಿ ತಮ್ಮ ನಿವೇಶನವನ್ನೂ ಮಾರಾಟ ಮಾಡಿದ್ದರು. ತಮ್ಮ ಸಂಬಳದ ಬಹುಪಾಲನ್ನು ಪುಸ್ತಕಗಳಿಗೇ ಮೀಸಲಿಟ್ಟಿದ್ದರು. ಗ್ರಾಮೀಣ ಪ್ರದೇಶದ ಪುಸ್ತಕ ಪ್ರಿಯರಿಗೆ ಸ್ಫೂರ್ತಿ ಯಾಗಿದ್ದಾರೆ. ಅಂಕೇಗೌಡರ ಸಾಧನೆಯನ್ನು ಗುರುತಿಸಿದ್ದ ಕೇಂದ್ರ ಸರ್ಕಾರ 2026ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ

ಅಂಕೇಗೌಡ ಅವರ ಅಪ್ರತಿಮ ಸಾಹಿತ್ಯ ಸೇವೆ ಹಾಗೂ ಜ್ಞಾನದ ದಾಹವನ್ನು ಮನಗಂಡ ಮುಖ್ಯಮಂತ್ರಿಗಳು ಬೃಹತ್ ಗ್ರಂಥಾಲಯ ಅಭಿವೃದ್ಧಿಗೆ ಅಗತ್ಯವಿರುವ ಭೂಮಿ ಮತ್ತು ಆರ್ಥಿಕ ನೆರವನ್ನು ಘೋಷಿಸಿ ಸಹಿ ಮಾಡಿ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಪುಟ 2ಕ್ಕೆ

# ಬಿಜೆಪಿಯವರು ಧರ್ಮಸ್ಥಳದಲ್ಲಿ ಸತ್ಯ ಹೇಳುತ್ತಾರೆಯೇ?: ಪ್ರಿಯಾಂಕ್

**ಬೆಂಗಳೂರು:** ಬಿಜೆಪಿಯವರು ರಾಮನ ಹೆಸರಿನಲ್ಲಿಯೇ ಲೂಟಿ ಮಾಡುವವರು ಇನ್ನು ಧರ್ಮಸ್ಥಳ ಮಂಜುನಾಥ ಸ್ವಾಮಿ ಹೆಸರಿನಲ್ಲಿ ಸತ್ಯ ಹೇಳುತ್ತಾರೆಯೇ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದ್ದಾರೆ.

ವಿಧಾನ ಪರಿಷತ್ ಚುನಾವಣೆ ಅಡ್ಡಮತದಾನದ ಹಿನ್ನೆಲೆಯಲ್ಲಿ ಬಿಜೆಪಿ ಶಾಸಕರಿಂದ ಧರ್ಮಸ್ಥಳ ಮಂಜುನಾಥ ಸ್ವಾಮಿ ಸನ್ನಿಧಿ ಮುಂದೆ ಆಣೆ ಪ್ರಮಾಣ ಮಾಡಿಸುತ್ತೇವೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರಿಗೆ ಅವರ ಪಕ್ಷವನ್ನು ನೋಡಿಕೊಳ್ಳಲು ಹೇಳಿ. ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯರು ಅವರಿಗೆ ಅನುಭವ ಕೂಡ ಇದೆ. ಪಕ್ಷದಲ್ಲಿ ನಾಯಕರು, ಶಾಸಕರು, ಕಾರ್ಯಕರ್ತರನ್ನು ಶಿಸ್ತಿನ ಹಾದಿಯಲ್ಲಿ ನಡೆಸುವ ಅಧಿಕಾರ ಅವರಿಗಿದೆ. ಬಿಜೆಪಿಗೆ ಶಿಸ್ತೇ ಇಲ್ಲ, ಅದಕ್ಕಾಗಿ ಅಡ್ಡ ಮತದಾನ ಮಾಡಿದ್ದಾರೆ ಎಂದು ಟೀಕಿಸಿದರು.



ಕಾಂಗ್ರೆಸ್ ನವರ ಒಗ್ಗಟ್ಟು ನೋಡಿಯೇ ಬಿಜೆಪಿಯ 7–8 ಮಂದಿ ವಿಧಾನ ಪರಿಷತ್ ಚುನಾವಣೆಯಲ್ಲಿ ನಮಗೆ ಮತ ಹಾಕಿದರು. ಜೆಡಿಎಸ್ ನವರು ಹಾಕಿದ ಒಬ್ಬ ಅಭ್ಯರ್ಥಿಗೆ ಬಿಜೆಪಿಯವರ ಒಪ್ಪಿಗೆ ಕೂಡ ಇತ್ತು. ಹಾಗಾದರೆ ಜೆಡಿಎಸ್ ನಲ್ಲಿ ಬಿಜೆಪಿಯಲ್ಲಿ ಒಗ್ಗಟ್ಟು ಇದೆಯೇ, ನಿಮ್ಮ ಮನೆ ಒಡೆದು ಮನೆಯೊಂದು ಮೂರು ಬಾಗಿಲು ಆಗಿದೆ. ಹಾಗಿರುವಾಗ ನೀವ್ಯಾಕೆ ಕಾಂಗ್ರೆಸ್ ವಿಚಾರದಲ್ಲಿ ತಲೆ ಹಾಕುತ್ತೀರಿ ಎಂದು ಪ್ರಶ್ನಿಸಿದರು.

ಎಂಎಲ್ಸಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಪುಟ 2ಕ್ಕೆ

## ಮೊದಲ ಪುಟದಿಂದ

### ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆ

ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತಷ್ಟು ವೇಗ ನೀಡಬೇಕು ಎಂದು ಸೂಚನೆ ನೀಡಿದರು.

ಕಂದಾಯ ಇಲಾಖೆ ಕಾರ್ಯಕ್ಷಮತೆ ಹೆಚ್ಚಿಸಲು ಸಹಾಯಕ ಆಯುಕ್ತರಿಗೆ (ಎಸಿ) ಹೆಚ್ಚಿನ ಜವಾಬ್ದಾರಿ ನೀಡಬೇಕು. ಪರವಾನಗಿ ಇರುವ ಭೂಮಾಪಕರ ಸಮಸ್ಯೆಗಳ ಕುರಿತು ಗಮನ ಹರಿಸಬೇಕೆಂದು ಸೂಚಿಸಿದರು. ಇ-ಪೌತಿ ಖಾತೆ ಸೇರಿದಂತೆ ಇಲಾಖೆಯ ಎಲ್ಲ ಆನ್‌ಲೈನ್ ಮತ್ತು ಸಾರ್ವಜನಿಕ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ನಾಗರಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಸೇವೆಗಳ ವಿತರಣೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಕಾಪಾಡಬೇಕು ಎಂದರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಭೂ ದಾಖಲೆ, ಖಾತೆ ಬದಲಾವಣೆ, ಸರ್ವೆ ಕಾರ್ಯ, ಮ್ಯೂಟೇಷನ್ ಹಾಗೂ ಇತರೆ ಕಂದಾಯ ಸೇವೆಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆ ಮಾಡುವ ನಿಟ್ಟಿನಲ್ಲಿ ನಿರಂತರ ಮೇಲ್ವಿಚಾರಣೆ ನಡೆಸಬೇಕು ಎಂದು ನಿರ್ದೇಶನ ನೀಡಿದರು.

### ಯುವತಿ, ತಂದೆ-ತಾಯಿ ಆತ್ಮಹತ್ಯೆ

ಇಟ್ಟುಕೊಂಡು ಆಕೆಗೆ ನಿರಂತರವಾಗಿ ಮಾನಸಿಕ ಹಿಂಸೆ ಹಾಗೂ ಕಿರುಕುಳ ನೀಡುತ್ತಿದ್ದ. ಅಷ್ಟಕ್ಕೇ ನಿಲ್ಲಿಸದೆ ರಕ್ಷಿತಾಳ ಮದುವೆ ನಿಶ್ಚಯವಾಗಿದ್ದ ಯುವಕನಿಗೂ ಆ ಮೆಸೇಜ್ ಹಾಗೂ ಫೋಟೋಗಳನ್ನು ಕಳುಹಿಸಿದ್ದ. ಇದರಿಂದ ಅವಮಾನಕ್ಕೊಳಗಾದ ಕುಟುಂಬಸ್ಥರು ಡೆತ್‌ನೋಟ್ ಬರೆದಿಟ್ಟು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ವರುಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

### 'ಮಾರಿಕೊಂಡವರಿಗೆ' ನೋವು

ನನಗೆ ಸಂತೋಷವಾಗಿದೆ' ಎಂದು ನಟ ಕಾಲೆಳೆದಿದ್ದಾರೆ. ವರದಿಗಳ ಪ್ರಕಾರ, ವಕೀಲ ದಿಲೀಪ್ ಕುಮಾರ್ ಅವರು ನಟ ಪ್ರಕಾಶ್ ರಾಜ್ ವಿರುದ್ಧ ನಾಲ್ಕು ಮತದಾರರ ಗುರುತಿನ ಚೀಟಿಗಳನ್ನು ಹೊಂದಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಸಮನ್ಸ್ ನೀಡಿದರೂ ನಟ ನ್ಯಾಯಾಲಯಕ್ಕೆ ಹಾಜರಾಗದ ಹಿನ್ನೆಲೆ ಈ ಹಿಂದೆಯೂ ಎರಡು ಬಾರಿ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿತ್ತು. ಇದರ ಹೊರತಾಗಿಯೂ ಅವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ. ನ್ಯಾಯಾಲಯ ಮತ್ತೊಂದು ಬಾರಿ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ ಎಂದು ಸುದ್ದಿಯಾಗಿತ್ತು.

### 'ಪುಸ್ತಕ ಮನೆ'ಗೆ 2 ಎಕರೆ ಭೂಮಿ,

ಅಂಕೇಗೌಡರ ಭೇಟಿ, ಸೌಜನ್ಯದ ಮಾತುಕತೆಯನ್ನು ಸಿಎಂ ಡಿ. ಕೆ.ಶಿವಕುಮಾರ್ ಅವರು, ತಮ್ಮ ಸೋಷಿಯಲ್ ಮೀಡಿಯಾದಲ್ಲಿ ವಿಶ್ವಮಾನವ ಕುವೆಂಪು ಅವರು ತಮ್ಮ ಆತ್ಮಕಥೆ 'ನೆನಪಿನ ದೋಣಿಯಲ್ಲಿ' ಮೊದಲ ಬಾರಿಗೆ ಗ್ರಂಥಾಲಯಕ್ಕೆ ಭೇಟಿ ನೀಡಿದಾಗ ಆದ ಅನುಭವವನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಟ್ಟದ್ದನ್ನು ಸ್ಮರಿಸಿ ಬರೆದಿದ್ದಾರೆ.

ಓದಿನ ಜ್ಞಾನದ ದಾಸೋಹವನ್ನು ಲಕ್ಷಾಂತರ ಪುಸ್ತಕಗಳ ಸಂಗ್ರಹದ ಮೂಲಕ ನಾಡಿಗೆ ಉಣಬಡಿಸುತ್ತಿರುವ ಮಹಾನ್ ಚೇತನ, ಪದ್ಮಶ್ರೀ ಪುರಸ್ಕೃತರು ಹಾಗೂ ಪುಸ್ತಕ ಮನೆಯ ರೂವಾರಿಗಳಾದ ಅಂಕೇಗೌಡ ವಿಧಾನ ಸೌಧದಲ್ಲಿ ನನ್ನನ್ನು ಭೇಟಿಯಾಗಿ ಸಮಾಲೋಚಿಸಿದರು. ಪುಸ್ತಕ ಲೋಕದ ಈ ಅನನ್ಯ ಸಾಧಕರೊಂದಿಗಿನ ಭೇಟಿ ಅತ್ಯಂತ ಅರ್ಥಪೂರ್ಣವಾಗಿತ್ತು ಎಂದು ಬರೆದುಕೊಂಡಿದ್ದಾರೆ.

### ಧರ್ಮಸ್ಥಳದಲ್ಲಿ ಸತ್ಯ ಹೇಳುತ್ತಾರೆಯೇ

ಮೊದಲ ಹಂತದಲ್ಲಿಯೇ ಆರಿಸಿ ಬಂದಿದ್ದಾರೆ. ಬಸನಗೌಡ ಪಾಟೀಲ್ ಯತ್ನಾಳ್ ವೋಟ್ ಹಾಕಿರದಿದ್ದರೆ ಬಿಜೆಪಿಗೆ ಒಂದೇ ಸೀಟು ಬರುತ್ತಿತ್ತು. ನಿಮ್ಮ ಮನೆಯನ್ನು ಪರಿಶೀಲಿಸಿ. ಇಲ್ಲದಿದ್ದರೆ ಇನ್ನು ಆರು ತಿಂಗಳಲ್ಲಿ ಇನ್ನೂ 10 ಮಂದಿ ಕಿತ್ತು ಬರುತ್ತಾರೆ ಎಂದು ಟೀಕಿಸಿದರು.

### ಸತ್ತವರ ಭೂಮಿಗೂ ಹೆಬ್ಬೆಟ್ಟು?

ನಮಗೆ ಗೊತ್ತಿದೆ. ಚುನಾವಣೆ ಗೆಲ್ಲಲು ಹಣ ಲೂಟಿ ಮಾಡಬಹುದು ಎಂದುಕೊಂಡಿದ್ದೀರಿ. ಆದರೆ ಇದಕ್ಕೆ ತಕ್ಕ ಉತ್ತರ ನೀಡುವ ಕಾಲ ಬರುತ್ತದೆ ಎಂದು ಎಚ್ಚರಿಕೆ ನೀಡಿದರು.

### ಒಸಿ ವಿನಾಯಿತಿ ಆದೇಶ

2026ರ ಮೇ 31ರ ಒಳಗಾಗಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಅಥವಾ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಿಸಿರುವ ಪ್ರಕರಣಗಳಿಗೆ ಅನ್ವಯಿಸಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆ, ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ, ರೇಷ್ಮೆ ಗೂಡಿನ ಮನೆ.. ಇವುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಿ ಸರ್ಕಾರ ಆದೇಶಿಸಿದೆ

### ಉದಾಸೀನತೆಯಿಂದ ಅಡ್ಡ ಮತದಾನ

ಆದರೆ ಅವರಿಬ್ಬರೂ ಸಂಪರ್ಕಕ್ಕೆ ಸಿಗದ ಕಾರಣ, ರಾಜ್ಯ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಕರೆ ಮಾಡಿ ವಿಷಯ ಮುಟ್ಟಿಸಿದಾಗ ಅವರು ಕೇವಲ 'ಸರಿ ನೋಡ್ತೇನೆ' ಎಂದು ಹಗುರವಾಗಿ ಪರಿಗಣಿಸಿದರು ಎಂದು ಗಂಭೀರ ಆರೋಪ ಮಾಡಿದರು.

ಧರ್ಮಸ್ಥಳದಲ್ಲಿ ಆಣೆ-ಪ್ರಮಾಣದ ರಾಜಕೀಯಕ್ಕೆ ತೀವ್ರ ಆಕ್ಷೇಪ

ಇದೇ ವೇಳೆ ಅಡ್ಡ ಮತದಾನ ಮಾಡಿದವರನ್ನು ಪತ್ತೆ ಹಚ್ಚಲು ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡಿಸುವ ನಾಯಕರ ತೀರ್ಮಾನಕ್ಕೆ ಸದಾನಂದಗೌಡರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ತಾವು ರಾಜ್ಯಾಧ್ಯಕ್ಷರಿಗೆ ಕರೆ ಮಾಡಿ ಸ್ಪಷ್ಟವಾಗಿ ಎಚ್ಚರಿಕೆ ನೀಡಿರುವುದಾಗಿ ಹೇಳಿದ ಅವರು, ಯಾವುದೇ ಕಾರಣಕ್ಕೂ ಧರ್ಮ ಕ್ಷೇತ್ರಕ್ಕೆ ರಾಜಕೀಯವನ್ನು ತೆಗೆದುಕೊಂಡು ಹೋಗಬಾರದು ಎಂದು ಒತ್ತಿ ಹೇಳಿದರು. ದೇವರ ಹತ್ತಿರವೂ ರಾಜಕೀಯ ಒಯ್ಯುವುದಾದರೆ ದೇವರೇ ರಾಜಕೀಯ ಮಾಡಲಿ, ನಮ್ಮಿಂದ ರಾಜಕೀಯ ಮಾಡಲು ಸಾಧ್ಯವಾಗದಿದ್ದರೆ ಇಡೀ ವ್ಯವಸ್ಥೆಯನ್ನೇ ದೇವರಿಗೇ ಬಿಟ್ಟುಬಿಡಿ ಎಂದು ನಾಯಕರಿಗೆ ನೇರವಾಗಿಯೇ ತರಾಟೆಗೆ ತೆಗೆದುಕೊಂಡಿರುವುದಾಗಿ ಅವರು ತಿಳಿಸಿದರು.

### ಸಿಎಂ ಡಿಕೆಗೆ ಎಚ್‌ಡಿಕೆ ಸವಾಲು

ಹೊರಡಿಸಿದ್ದು ಕಾಂಗ್ರೆಸ್ ಸರ್ಕಾರ. ಜೂನ್ 10ರಂದು ಅಂತಿಮ ಅಧಿಸೂಚನೆಯನ್ನೂ ಇದೇ ಸರ್ಕಾರ ಹೊರಡಿಸಿದೆ. ಹಾಗಿದ್ದಾಗ ಇದರಲ್ಲಿ ನನ್ನ ಪಾತ್ರ ಎಲ್ಲಿದೆ? ನನಗೆ ಅಷ್ಟು ಆಸಕ್ತಿ ಇದ್ದಿದ್ದರೆ 2018ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗಲೇ ಯೋಜನೆ ಜಾರಿಗೊಳಿಸಬಹುದಿತ್ತಲ್ಲವೇ? ಎಂದು ತಿರುಗೇಟು ನೀಡಿದರು.

ಯಾರೋ ನಾಲ್ಕು ಜನರಿಂದ ಬ್ಯಾನರ್ ಹಾಕಿಸಿ ರೈತರು ಜಮೀನು ಕೊಡ್ತಾರೆ ಅನ್ನಿಸಬೇಡಿ. ಡಿ.ಕೆ. ಶಿವಕುಮಾರ್ ಅವರೇ, ಧೈರ್ಯವಿದ್ದರೆ ನನ್ನ ಜೊತೆ ಭೈರಮಂಗಲಕ್ಕೆ ಬನ್ನಿ. ಅಲ್ಲಿನ ಸಣ್ಣ ರೈತರು ಭೂಮಿ ಕೊಡಲು ಸಮ್ಮತಿಸಿದ್ದಾರಾ ಇಲ್ಲವಾ ಅಂತ ಜನರ ಮುಂದೆ ಕೇಳೋಣ ಎಂದು ನೇರ ಸವಾಲು ಹಾಕಿದರು.

### ನೌಕರರಿಗೆ ಗ್ಯಾರಂಟಿಯಿಂದ ಕೋಕ್

ನಡೆಸುವುದು ಕೂಡ ಗ್ಯಾರಂಟಿ ಪ್ರಾಧಿಕಾರದ ಅಜೆಂಡಾ ಆಗಿದೆ ಎಂದು ತಿಳಿಸಿದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ ಪ್ರತಿಕ್ರಿಯೆ ನೀಡಿ, ಗ್ಯಾರಂಟಿ ಪ್ರಾಧಿಕಾರ ನಮ್ಮ ಬಳಿ ಚರ್ಚೆ ಮಾಡಿದರೆ ನಮ್ಮ ಅಭಿಪ್ರಾಯ ತಿಳಿಸುತ್ತೇವೆ. ಗ್ಯಾರಂಟಿ ಕೊಡಿ ಅಂತಾ ನಾವು ಕೇಳಿರಲಿಲ್ಲ. ಅವರೇ ಕೊಟ್ಟಿದ್ದಾರೆ. ಈಗ ವಾಪಾಸ್ ತೆಗೆದುಕೊಳ್ಳುತ್ತೇವೆ ಅಂತಿದ್ದಾರೆ. ಶಕ್ತಿ ಯೋಜನೆಯಿಂದ ಮಹಿಳಾ ನೌಕರರಿಗೆ ಅನುಕೂಲ ಆಗುತ್ತಿದೆ. ನಮ್ಮ ಬಳಿ ಚರ್ಚೆ ಮಾಡಿದಾಗ ನಮ್ಮ ಅಭಿಪ್ರಾಯ ತಿಳಿಸುತ್ತೇವೆ ಎಂದು ಹೇಳಿದರು.

---

ಬಿಡದಿ ಸಮಗ್ರ ನಗರ ಯೋಜನೆಗೆ ವಿರೋಧ

# ಜೆಡಿಎಸ್‌ನಿಂದ ಪಾದಯಾತ್ರೆ

## ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ 9 ಗ್ರಾಮಗಳಲ್ಲಿ ಪಾದಯಾತ್ರೆ

### । ರಾಜ್ಯಕಾಂಗ್ರೆಸ್ ಸರ್ಕಾರದ ವಿರುದ್ಧ ದಳಪತಿಗಳ ರಣಕಹಳೆ ।

## ಎಚ್.ಡಿ.ಕೆ ಬೇನಾಮಿ ಆಸ್ತಿ ಸಾಬೀತು ಪಡಿಸಲು ನಿಖಿಲ್ ಸವಾಲು




ರಾಮನಗರ: ಗ್ರೇಟರ್ ಬೆಂಗಳೂರು ಸಮಗ್ರ ಉಪ ನಗರ ಯೋಜನೆ ವಿರೋಧಿಸಿ ನಿಖಿಲ್ ಕುಮಾರ ಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಮತ್ತು ಯೋಜನೆ ವಿರೋಧ ವ್ಯಕ್ತಪಡಿಸಿರುವ ಸಾವಿರಾರು ನಾಗರೀಕರು ಸುಮಾರು 11 ಕಿಮೀ ಪಾದಯಾತ್ರೆ ನಡೆಸುವ ಮೂಲಕ ರಾಜ್ಯ ಸರ್ಕಾರಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

ಬಿಡದಿ ಸಮಗ್ರ ನಗರ ಯೋಜನೆ ಸಂಬಂಧ ಭೂಸ್ವಾಧೀನಕ್ಕೆ ಗುರುತಿಸಲಾಗಿರುವ ಗ್ರಾಮಗಳಲ್ಲಿ ಪರ-ವಿರೋಧ ಇದೆ. ಬೈರಮಂಗಲದಲ್ಲಿ ನಿರಂತರ ಹೋರಾಟ ನಡೆಯುತ್ತಿದೆ. ಈ ನಡುವೆ ರಾಜ್ಯ ಸರ್ಕಾರ ಮೂರು ಗ್ರಾಮಗಳಲ್ಲಿ ಗುರುತಿಸಲಾಗಿರುವ ಭೂಮಿಯ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಈ ಮಧ್ಯೆ ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ.ಬಾಲಕೃಷ್ಣ ನೇತೃತ್ವದಲ್ಲಿ 7 ಮಂದಿ ಭೂಮಾಲೀಕರಿಗೆ ಪರಿಹಾರದ ಚೆಕ್‌ಗಳನ್ನು ಸಾಂಕೇತಿಕವಾಗಿ ವಿತರಿಸಲಾಗಿದೆ. ರಾಜ್ಯ ಸರ್ಕಾರ ಹಾಗೂ ವಿಪಕ್ಷಗಳ ಜಂಗೀಕುಸ್ತಿ ನಡುವೆಯೇ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆದ ಮೊದಲ ಹಂತದ ಪಾದಯಾತ್ರೆಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ರೈತರಿಂದ ವ್ಯಾಪಕ ಬೆಂಬಲ ವ್ಯಕ್ತವಾಗಿದೆ.

#### ನಮ್ಮ ಭೂಮಿ-ನಮ್ಮ ಹಕ್ಕು ಪಾದಯಾತ್ರೆ

ಭಾನುವಾರ ಬೆಳಿಗ್ಗೆ ನಿಖಿಲ್ ಕುಮಾರಸ್ವಾಮಿ ಬಿಡದಿ ಹೋಬಳಿ ಅಂಚಿಪುರ ಗ್ರಾಮಕ್ಕೆ ಆಗಮಿಸಿದ ವೇಳೆ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ಮೊದಲು ಅಂಚಿಪುರ ಗ್ರಾಮದ ಶಕ್ತಿ ದೇವತೆ ಮಾರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ನಿಖಿಲ್ ಕುಮಾರಸ್ವಾಮಿ ನಂತರ ಪಕ್ಷದ ಕಾರ್ಯಕರ್ತರು ಮತ್ತು ರೈತರೊಂದಿಗೆ ನಮ್ಮ ಭೂಮಿ - ನಮ್ಮ ಹಕ್ಕು ಘೋಷಣೆಯೊಂದಿಗೆ ಹೆಜ್ಜೆ ಹಾಕಿ ಪಾದಯಾತ್ರೆಗೆ ಚಾಲನೆ ನೀಡಿದರು.

#### ಕುಮಾರಸ್ವಾಮಿರವರ ಬೇನಾಮಿ ಆಸ್ತಿ ಸಾಬೀತು ಪಡಿಸಿ- ನಿಖಿಲ್ ಸವಾಲು

ಪಾದಯತ್ರೆ ನಡುವೆ ಮರೆವೇಗೌಡನದೊಡ್ಡಿಯಲ್ಲಿ ನಿಖಿಲ್ ಕುಮಾರಸ್ವಾಮಿ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದರು. ಕೇಂದ್ರ ಸಚಿವ ಕುಮಾರ ಸ್ವಾಮಿ ಅವರು ಬೇನಾಮಿ ಆಸ್ತಿ ಹೊಂದಿರುವುದನ್ನು ಸಾಬೀತು ಮಾಡಲಿ ಎಂದು ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಸವಾಲು ಹಾಕಿದರು.

ಎಚ್.ಡಿ.ಕುಮಾರಸ್ವಾಮಿ ಅವರು ಈ ಭಾಗದಲ್ಲಿ 100ಎಕರೆ ಬೇನಾಮಿ ಹೊಂದಿದ್ದಾರೆ ಅಂತ ಸ್ಥಳೀಯ ಶಾಸಕರು (ಎಚ್.ಸಿ.ಬಾಲಕೃಷ್ಣ) ಆರೋಪಿಸಿದ್ದಾರೆ. ಅದನ್ನು ಸಾಬೀತು ಮಾಡಿದರೆ ಆ ಭೂಮಿಯನ್ನು ದಾನ ಮಾಡುತ್ತೇವೆ ಎಂದರು.

ಕೇತಗಾನಹಳ್ಳಿ ಗ್ರಾಮದಲ್ಲಿ 1985ರಲ್ಲಿ ನಮ್ಮ ತಂದೆ ಜಾಗ ಖರೀದಿ ಮಾಡಿದ್ದಾರೆ. ಯಾರ ತಲೆ ಹೊಡೆದು ಅದನ್ನು ಖರೀದಿ ಮಾಡಿಲ್ಲ. ಸಿನಿಮಾ ಹಂಚಿಕೆ ಮಾಡಿದ ಹಣದಲ್ಲಿ ಆ ಜಮೀನನ್ನು ಖರೀದಿ ಮಾಡಿದ್ದೇವೆ ಎಂದು ತಿಳಿಸಿದರು.

#### ಕೃಷಿ ವಲಯ ಬದಲಾಯಿಸುವ ಸವಾಲು

ತದ ನಂತರ ಪಾದಯಾತ್ರೆ ವೇಳೆ ಮಾತನಾಡಿದ ಅವರು ಕೃಷಿ ವಲಯ ಬದಲಾಯಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೇ ಇದೆ. ಆದರೆ ಬದಲಾಯಿಸಲು ಬರುವುದಿಲ್ಲ ಎಂದು ಮುಖ್ಯಮಂತ್ರಿ ಸುಳ್ಳು ಹೇಳುತ್ತಿದ್ದಾರೆ. ವಲಯ ಬದಲಾದರೆ ಎಕರೆ ಭೂಮಿ ಬೆಲೆ 10 ಕೋಟಿ ಆಗುತ್ತದೆ. ಆದರೆ, ನೀವು 2.55 ಕೋಟಿಗೆ ರೈತರ ಭೂಮಿ ಕಸಿಯುತ್ತಿದ್ದೀರಿ. ಇದು ಬಿಲ್ಡರ್‌ಗಳಿಗೆ ಲಾಭ ಮಾಡಿಕೊಡುವ ಸಂಚು ಎಂದು ಆರೋಪಿಸಿದರು.

ಇಂದಿನ ಪಾದಯಾತ್ರೆ ಪಕ್ಷ, ರಾಜಕಾರಣದ ಲಾಭ-ನಷ್ಟಕ್ಕೆ ಸಂಬಂಧಿಸಿದಲ್ಲ. ರೈತರ ಹಿತ ಕಾಯುವ ಸಲುವಾಗಿ ಮಾಡುತ್ತಿರುವ ಪಾದಯಾತ್ರೆ. ಇದು ಆರಂಭ ಅಷ್ಟೇ. ಇಲ್ಲಿ ಫಲವತ್ತಾದ ಭೂಮಿ ಇದೆ, ಕೆಲವು ದಲ್ಲಾಳಿಗಳು ವ್ಯವಸ್ಥಿತವಾಗಿ ನಿಮ್ಮ ಭೂಮಿಯನ್ನು ಹೊಡೆಯಲು ಸಂಚು ರೂಪಿಸುತ್ತಿದ್ದಾರೆ ಎಂದು ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಅರಕಲಗೂಡು ಕ್ಷೇತ್ರ ಶಾಸಕ ಎ.ಮಂಜು, ಹುಣಸೂರು ಕ್ಷೇತ್ರ ಶಾಸಕ ಜಿ.ಡಿ.ಹರೀಶ್ ಕುಮಾರ್, ಕೆ.ಆರ್.ಪೇಟೆ ಕ್ಷೇತ್ರ ಶಾಸಕ ಎಚ್.ಟಿ.ಮಂಜು , ದೇವದುರ್ಗ ಕ್ಷೇತ್ರ ಶಾಸಕಿ ಕರೇಮ್ಮ, ಮಾಜಿ ಶಾಸಕರಾದ ಡಾ.ಕೆ. ಅನ್ನದಾನಿ, ಸುರೇಶ್ ಗೌಡ ಅವರೆಲ್ಲರು ನಿಖಿಲ್ ಅವರೊಂದಿಗೆ ಕಾಲ್ನಡಿಗೆಯಲ್ಲಿ ಸಾಗಿದರು.

ಅಂಚಿಪುರದಿಂದ ಆರಂಭವಾದ ಪಾದಯಾತ್ರೆ ಅಂಚಿಪುರ ಕಾಲೊನಿ ಮಾರ್ಗವಾಗಿ ಬನ್ನಿಗಿರಿ ಗ್ರಾಮಕ್ಕೆ ಮಧ್ಯಾಹ್ನ ಪ್ರವೇಶಿಸಿತು. ನಿಖಿಲ್ ಕುಮಾರಸ್ವಾಮಿ , ಸುರೇಶ್ ಬಾಬು ಸೇರಿದಂತೆ ಎಲ್ಲ ನಾಯಕರು ಭೋಜನ ಸೇವಿಸಿ ಕೆಲಕಾಲ ವಿಶ್ರಾಂತಿ ಪಡೆದರು.

ಆನಂತರ ಮರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಮೂಲಕ ಪಾದಯಾತ್ರೆಯೂ ಹೊಸೂರು ಗ್ರಾಮ ಪ್ರವೇಶಿಸಿತು. ರಾತ್ರಿ ಹೊಸೂರಿನಲ್ಲಿ ಬಹಿರಂಗ ಸಭೆಯೊಂದಿಗೆ 11 ಕಿಲೋ ಮೀಟರ್ ಗಳ ಮೊದಲ ಹಂತದ ಪಾದಯಾತ್ರೆ ಸಮಾಪ್ತಿಗೊಂಡಿತು.

### ನೀವು ಗುಂಡು ಹೊಡೆದರೆ, ನಾವು ಎದೆಯೊಡ್ಡುತ್ತೇವೆ – ಎ.ಮಂಜುನಾಥ್

ನಿಖಿಲ್ ಕುಮಾರಸ್ವಾಮಿ ನೇತೃತ್ವದ ಪಾದಯಾತ್ರೆಯಲ್ಲಿ ಸಾರ್ವಜನಿಕರ ಸಭೆಯಲ್ಲಿ ಮಾತನಾಡಿದ ಜೆಡಿಎಸ್ ಕೋರ್ ಕಮಿಟಿ ಸದಸ್ಯ ಹಾಗೂ ಮಾಗಡಿ ಕ್ಷೇತ್ರದ ಮಾಜಿ ಶಾಸಕ ಎ.ಮಂಜುನಾಥ್, ಭೂಮಿಯನ್ನು ಉಳಿಸಿಕೊಳ್ಳಲು ನಾವೇ ಕೇಸ್ ಹಾಕಿಸಿಕೊಳ್ಳಲು, ಜೈಲಿಗೆ ಹೋಗಲು ಸಿದ್ಧರಿದ್ದೇವೆ. ನೀವು ಗುಂಡು ಹೊಡೆದರೆ ಎದೆಯೊಡ್ಡಲೂ ಸಿದ್ಧರಿದ್ದೇವೆ. ರೈತರಿಗೆ ನ್ಯಾಯ ದೊರಕಿಸಿಕೊಡುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದರು. ಟೌನ್ ಶಿಪ್ ಯೋಜನೆ ವಿರುದ್ಧ ಹೋರಾಟ ಮಾಡುತ್ತಿದ್ದೇವೆ ಎಂಬ ಕಾರಣಕ್ಕೆ ನನ್ನ ಮೇಲೆ ಆರು ಕೇಸು ಹಾಕಿಸಿದ್ದಾರೆ. ಇಷ್ಟೇ ಅಲ್ಲ ರೈತ ಮಹಿಳೆಯರು ಮತ್ತು ಯುವಕರ ಮೇಲೂ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಕಿಡಿಕಾರಿದರು. ಒಂದೂವರೆ ವರ್ಷದಿಂದ ರೈತರು ಹೋರಾಟ ಮಾಡುತ್ತಿದ್ದಾರೆ. ಇದು ಪಂಚೇಂದ್ರಿಗಳನ್ನು ಕಳೆದುಕೊಂಡಿರುವ ಸರ್ಕಾರಕ್ಕೆ ಕಾಣುತ್ತಿಲ್ಲ. ಆದರೆ, ಸುಳ್ಳು ಹೇಳಿ ಫಲವತ್ತಾದ ಕೃಷಿ ಭೂಮಿಯನ್ನು ಕಬಳಿಸಲು ಹುನ್ನಾರ ನಡೆಸುತ್ತಿದೆ. ರೈತರ ಸಮಾಧಿ ಮೇಲೆ ಟೌನ್ ಶಿಪ್ ನಿರ್ಮಿಸಲು ಹೊರಟಿದ್ದಾರೆ ಎಂದು ಕಿಡಿಕಾರಿದರು. ಕಾಂಗ್ರೆಸ್ ಮುಖಂಡರುಗಳೇ ಏಜೆಂಟ್ ಗಳಾಗಿ ರೈತರ ಭೂಮಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿಸಿದ್ದಾರೆ. ಇದರ ಹಿಂದೆ ಮುಖ್ಯಮಂತ್ರಿಗಳ ಕೈವಾಡ ಇದೆ. ಬಲವಂತವಾಗಿ ಭೂಮಿ ಕಸಿದುಕೊಳ್ಳಲು ಮುಂದಾಗಿರುವ ರಾಜ್ಯ ಸರ್ಕಾರ ಮನೆ ಹಾಳು ಕೆಲಸ ಮಾಡುತ್ತಿದೆ ಎಂದು ಎ. ಮಂಜುನಾಥ್ ಟೀಕಿಸಿದರು.

### ಜೆಡಿಎಸ್ ಬಾವುಟ ಬಳಸಿಲ್ಲ


ಅಂಚಿಪುರದಿಂದ ಹೊಸೂರುವರೆಗೆ 8 ಗ್ರಾಮಗಳಲ್ಲಿ ನಡೆದ ಪಾದಯಾತ್ರೆಯಲ್ಲಿ ಎಲ್ಲಿಯೂ ಜೆಡಿಎಸ್ ಪಕ್ಷದ ಬಾವುಟಗಳ ಬಳಕೆಯಾಗಲಿಲ್ಲ ಎಂಬುದು ವಿಶೇಷವಾಗಿತ್ತು. ಜೆಡಿಎಸ್ ಯುವ ಘಟಕ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಶಾಸಕರು, ಮುಖಂಡರು ಹಾಗೂ ಕಾರ್ಯಕರ್ತರೆಲ್ಲರು ಹೆಗಲ ಮೇಲೆ ಹಸಿರು ಶಾಲು ಹಾಕಿಕೊಂಡು ಹೆಜ್ಜೆ ಹಾಕಿದರು.

### ಯೋಜನೆ ಕೈ ಬಿಟ್ಟರೆ, ನಮ್ಮ ಭೂಮಿ ಶಾಲೆ-ಆಸ್ಪತ್ರೆಗೆ ದಾನ

ನಮ್ಮ ತಾಯಿ ಹೆಸರಲ್ಲಿ 27 ಎಕರೆ, ನನ್ನ ಹೆಸರಲ್ಲಿ 5ಎಕರೆ ಜಾಗವನ್ನು ಕೋವಿಡ್ ಸಮಯದಲ್ಲಿ ಖರೀದಿ ಮಾಡಿದ್ದೇವೆ. ನಮ್ಮ ಜಾಗದಲ್ಲಿ ಕಮರ್ಷಿಯಲ್ ಬಿಲ್ಡಿಂಗ್ ಕಟ್ಟಿಲ್ಲ. ರೈತರಿಗೆ ಅನುಕೂಲ ಮಾಡಲು ಹಾಲಿನ ಉತ್ಪನ್ನಗಳ ಉತ್ಪಾದನೆಗೆ ಅದನ್ನು ಬಳಸಲು ಇಟ್ಟಿದ್ದೆ. ಅದನ್ನು ಶಾಲೆ ಅಥವಾ ಆಸ್ಪತ್ರೆಗೆ ದಾನ ಮಾಡುತ್ತೇವೆ. ನೀವು ಟೌನ್ ಶಿಪ್ ಯೋಜನೆಯನ್ನು ಕೈಬಿಡುತ್ತೀರಾ ಎಂದು ಸವಾಲು ಹಾಕಿದರು.

---

# ಅಭಿವೃದ್ಧಿಗೆ ಹೆಚ್ಚಿನ ಒತ್ತು



ಗುಂಡ್ಲುಪೇಟೆ:- ಕ್ಷೇತ್ರದ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಎಂದು ಶಾಸಕ ಎಚ್ ಎಂ ಗಣೇಶ ಪ್ರಸಾದ್ ತಿಳಿಸಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ದಲ್ಲಿ 3.60 ಕೋಟಿ ವೆಚ್ಚದಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ಹಾಗೂ ಡಕ್. ಸ್ಲ್ಯಾಬ್.ನಿರ್ಮಾಣ ಕಾಮ ಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು ಹಿಂದಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವನಾಂದ ಪಾಟೀಲ್ ರವರು ಗುಂಡ್ಲುಪೇಟೆ ಗೆ ಅಗಮಿಸಿದ ಸಂದರ್ಭದಲ್ಲಿ ಮಾರುಕಟ್ಟೆ ಪ್ರಾಂಗಣ ದಲ್ಲಿ ರಸ್ತೆ ನಿರ್ಮಾಣಕ್ಕೆ ಮನವಿ ಮಾಡಿದ ಹಿನ್ನ ಲೆಯಲ್ಲಿ ಗುಂಡ್ಲುಪೇಟೆ ಮಾರುಕಟ್ಟೆಗೆ 3.60 ಕೋಟಿ ಶುದ್ಧ ಕುಡಿಯುವ ಘಟಕ ನಿರ್ಮಾಣಕ್ಕೆ 6 ಲಕ್ಷ ರೂ ಹಾಗೂ ತೆರಕಣಾಂಬಿ ಉಪ ಮಾರುಕಟ್ಟೆಗೆ 1.50 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ.

ನಾನು ಶಾಸಕ ನಾಗಿ ಮೂರು ವರ್ಷ ಪೂರೈ ಸಿದ್ದು ನನ್ನ ಅವದಿಯಲ್ಲಿ ಬೇಗೂರಿನ ಹತ್ತಿ ಮಾರು ಕಟ್ಟೆಗೆ 6ಕೋಟಿ ಕೋಲ್ಡ್ ಸ್ಟೋರೇಜ್ ನಿರ್ಮಾಣಕ್ಕೆ 9ಕೋಟಿ ಹಾಗೂ ರಸ್ತೆ ನಿರ್ಮಾಣಕ್ಕೆ ಸೇರಿದಂತೆ ಒಟ್ಟು ಎಪಿಎಂಸಿಗೆ 21 ಕೋಟಿ ಹೆಚ್ಚಿನ ಅನುದಾನ ತರಲಾಗಿದೆ ಯಾರೇ ಏನೇ ಟೀಕೆ ಮಾಡಿದರು ನಾನು ಅಭಿವೃದ್ಧಿ ಕೆಲಸಗಳಿಂದ ಉತ್ತರ ನೀಡುತ್ತೇನೆ ಟೀಕೆಗಳ ಬಗ್ಗೆ ತಲೆಕೆಡಿಸಿಕೂಳ್ಳುವುದಿಲ್ಲ ಎಂದರು

ಕೃಷಿ ಉತ್ಪನ್ನ ಮಾರುಕಟ್ಟೆ ಮುಖ್ಯ ಪ್ರಾಂಗಣ ದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು ರೈತರು ಹಾಗೂ ವ್ಯಾಪಾರಸ್ಥರ ಬಹುದಿನಗಳ ಬೇಡಿಕೆಯಂತೆ 3.60 ಕೋಟಿ ವೆಚ್ಚದಲ್ಲಿ ಗುಣಮಟ್ಟದ ಸಿ ಸಿ ರಸ್ತೆ ಮತ್ತು ಚರಂಡಿ ಡಕ್. ಸ್ಲ್ಯಾಬ್ ನಿರ್ಮಾಣ ಮಾಡಲಾಗುವುದು ಎಂದರು ಸಿ ಸಿ ರಸ್ತೆ ನಿರ್ಮಾಣದಿಂದ ಮಾರುಕಟ್ಟೆ ಪ್ರಾಂಗಣದಲ್ಲಿ ಮಳೆಗಾಲದಲ್ಲಿ ನೀರು ಸಂಚಾರ ವ್ಯವಸ್ಥೆ ಸುಧಾರಣೆಯಾಗಲಿದೆ ಮತ್ತು ಸಮಸ್ಯೆ ಗೆ ಶಾಶ್ವತ ಪರಿಹಾರ ದೂರೆಯಲಿದೆ ರೈತರು ತಮ್ಮ ಕೃಷಿ ಉತ್ಪನ್ನಗಳು ಸುಲಭವಾಗಿ ಮಾರುಕಟ್ಟೆಗೆ ತರಲು ಅನುಕೂಲವಾಗಿದೆ ಎಂದು ತಿಳಿಸಿದರು

ಎಪಿಎಂಸಿ ಅಧ್ಯಕ್ಷ ರಂಗೂಪುರ ನಾಗರಾಜ್. ಚಾಮುಲ್ ನಿರ್ದೇಶಕ ಎಚ್ ಎಸ್ ನಂಜುಂಡ ಪ್ರಸಾದ್.ಎಪಿಎಂಸಿ ಮಾಜಿ ಅಧ್ಯಕ್ಷ ಕಮರಹಳ್ಳಿ ರವಿ ಉಪಾಧ್ಯಕ್ಷ ರಾಜು. ಎಪಿಎಂಸಿ ಕಾರ್ಯದರ್ಶಿ ಶ್ರೀಧರ್.ನಿರ್ದೇಶಕರಾದ ಮಾಡ್ರಹಳ್ಳಿ ಮಹದೇವಪ್ಪ ಅರಸಶೆಟ್ಟಿ ಬಿಪಿ.ರಾಜಶೇಖರ್. ಮಡಿವಾಪ್ಪ. ಶಿವ ನಾಗಪ್ಪ. ಕುಮಾರ್ ಸ್ವಾಮಿ.ಎಚ್ ಎನ್ ಬಸವ ರಾಜ್. ಶಿವಣ್ಣ ಹೊಸೂರು. ಶ್ರೀನಿವಾಸ್ ಕಣ್ಣಪ್ಪ ಹಾಫ್ ಕಾಮ್ಸ ಅಧ್ಯಕ್ಷ ನಾಗೇಶ್. ಮಧುಸೂದನ್ ಪ್ರದೀಪ್. ಇನ್ನು ಇತರರು ಇದ್ದರು

---

# ಎನ್‌ಐಇಐಟಿ ಉದ್ಯೋಗ ಕೊಡುವಂತೆ ಆಗ್ರಹಿಸಿ ಪ್ರತಿಭಟನೆ





ಮೈಸೂರು: ಬಾಕಿ 12 ತಿಂಗಳುಗಳ ವೇತನ ಮತ್ತು ಸರ್ಕಾರದ ಆದೇಶದಂತೆ ಉದ್ಯೋಗ ಕೊಡುವಂತೆ ಆಗ್ರಹಿಸಿ ಎನ್‌ಐಇಐಟಿ ಖಾಯಂ ನೌಕರರ ಹಕ್ಕು ಹೋರಾಟ ಸಮಿತಿಯಿಂದ ಎನ್‌ಐಇ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸಂಸ್ಥೆ ಕಟ್ಟಿದ 76 ಸಿಬ್ಬಂದಿಗಳನ್ನು ಅಕ್ರಮ ವಜಾವನ್ನು ರದ್ದುಗೊಳಿಸುವಂತೆ ಉನ್ನತ ಶಿಕ್ಷಣ ಇಲಾಖೆ ಏ.27ರಲ್ಲಿ ಆದೇಶ ಮಾಡಿದೆ. ಸರ್ಕಾರದ ಆದೇಶವನ್ನು ವಿವೇಚನಾರಹಿತ ಎಂದು ಧಿಕ್ಕರಿಸಿದೆ. ವಿಟಿಯುಗೆ ವಿಲೀನಗೊಳಿಸುವಾಗ ಎಲ್ಲಾ ಖಾಯಂ ಸಿಬ್ಬಂದಿಗಳನ್ನು ರಕ್ಷಿಸಲಾಗುವುದು ಎಂದು ಲಿಖಿತವಾಗಿ ಮುಚ್ಚಳಿಕೆ ನೀಡಿ ಅನುಮತಿ ಸಿಕ್ಕ ಕೂಡಲೇ ದ್ರೋಹ ಬಗೆದಿದೆ ಆರೋಪಿಸಿದರು. ಸಿವಿಲ್ ನ್ಯಾಯಾಲಯದ ಕಡ್ಡಾಯ ಪೂರ್ವಾನುಮತಿ ಪಡೆಯದೆ ಸಾರ್ವಜನಿಕ ಟ್ರಸ್ಟ್ 25 ಎಕರೆ ಕ್ಯಾಂಪಸ್ ಅನ್ನು ಎನ್‌ಐಇ ಸೊಸೈಟಿಗೆ ಕಾನೂನುಬಾಹಿರವಾಗಿ ವರ್ಗಾಯಿಸಿ ಆಸ್ತಿ ಕಬಳಿಸುತ್ತಿದೆ. ಲಾಭದ ದುರಾಸೆಗಾಗಿ ಅನುದಾನಿತ ಕೋರ್ಸ್‌ಗಳನ್ನು ಮುಚ್ಚಿ, ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವ ಮೂಲಕ ಶಿಕ್ಷಣವನ್ನು ವ್ಯಾಪಾರೀಕರಣ ಮಾಡುತ್ತಿದೆ ಎಂದರು. ತಡೆ ಹಿಡಿದಿರುವ 12 ತಿಂಗಳ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದ್ದಾರೆ. ವಿಧಾನ ಪರಿಷತ್ ಸದಸ್ಯ ವಿವೇಕಾನಂದ ನೌಕರರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

---

ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿ ಎದುರು ಪ್ರತಿಭಟನೆ

# ವಿದ್ಯುತ್ ಖಾಸಗೀಕರಣ ಖಂಡಿಸಿ ರೈತರ ಆಗ್ರಹ



ಮೈಸೂರು: 15 ಜಿಲ್ಲೆಗಳಿಗೆ ವಿದ್ಯುತ್ ಸರಬರಾಜು ಮಾಡಲು ಟಾಟಾ ಪವರ್ ಕಾರ್ಪೋರೇಷನ್ ಕೋರಿರುವ ಪರವಾನಗಿಯನ್ನು ಕೊಡಬಾರದೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯಿಸಿದೆ.

ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು ಆಕ್ಷೇಪಣಾ ಪತ್ರ ಮತ್ತು ಸ್ಥಳೀಯ ಸಮಸ್ಯೆಗಳನ್ನು ಇತ್ಯರ್ಥ ಪಡಿಸಬೇಕೆಂದು ಆಗ್ರಹಿಸಿದರು. ಜನ ಸಾಮಾನ್ಯರ ತೆರಿಗೆ ಹಣದಿಂದ ಸ್ಥಾಪನೆಯಾಗಿರುವ ಸರ್ಕಾರಿ ಸ್ವಾಮ್ಯದ ವಿದ್ಯುತ್ ಪ್ರಸರಣ ಮತ್ತು ವಿದ್ಯುತ್ ಉತ್ಪಾದನಾ ಇಲಾಖೆಗಳನ್ನು ಯಾವುದೇ ಕಾರಣಕ್ಕೂ ಖಾಸಗಿ ಒಡೆತನಕ್ಕೆ ಬಿಟ್ಟುಕೊಡಬಾರದು ಎಂದು ಒತ್ತಾಯಿಸಿದರು. ರಾಜ್ಯದ ಜನರು ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಮೂಲ ಮಾಲೀಕರಾಗಿರುತ್ತಾರೆ. ಮಾಲೀಕರು ಒಪ್ಪದೇ ಹೊರತು ಯಾವುದೇ ಸಂಸ್ಥೆಯನ್ನು ಖಾಸಗೀಕರಣಕ್ಕೆ ಹಸ್ತಾಂತರ ಮಾಡುವಂತಿಲ್ಲ. ಮೂಲಭೂತ ಸೌಕರ್ಯಗಳ ವಲಯಗಳ ಖಾಸಗೀಕರಣ ಜನ ವಿರೋಧಿ ಹಾಗೂ ಬಂಡವಾಳ ಶಾಹಿಗಳ ಪರವಾದ ನಿಲುವಾಗಿರುತ್ತದೆ ಎಂದು ಪ್ರತಿಭಟನಾಕಾರರು ಆಕ್ಷೇಪಿಸಿದರು.

ಖಾಸಗಿ ಕಂಪನಿಗಳಿಗೆ ಲಾಭ ಮಾತ್ರ ಮೂಲ ಉದ್ದೇಶವಾಗಿರುತ್ತದೆ ಹೊರತು ರಾಜ್ಯದ ಸಾಮಾನ್ಯ ಜನರಾಗಲಿ ಅಥವಾ ಆ ಸಂಸ್ಥೆಗೆ ಕೆಲಸ ಮಾಡುವ ನೌಕರರಾಗಲಿ ಮಾನ್ಯತೆ ಇರುವುದಿಲ್ಲ. ಖಾಸಗೀಕರಣದಿಂದ ಜನಪರ ಸರ್ಕಾರಗಳು ಸಾಮಾಜಿಕ ಬದ್ಧತೆಯ ಕಾಳಜಿ ಇರದ ಯಾವ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ದಿನದಂದೇ 2400 ಸ್ಕ್ವೇರ್ ಫೀಟ್ ಒಳಗಡೆ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಪಡೆಯಲು ಯಾವುದೇ ರೀತಿಯಾದ ಕ್ಲಿಯರೆನ್ಸ್ ಬೇಕಾಗಿರುವುದಿಲ್ಲ ಎಂದು ಘೋಷಣೆ ಮಾಡಿರುತ್ತಾಎ. ಆದರೆ, ಮೈಸೂರಿನ ನಗರ ಮತ್ತು ಕಂದಾಯ ಪ್ರದೇಶದಲ್ಲಿ 2400 ಒಳಗಡೆ ಇರುವ ವಿಸ್ತೀರ್ಣದ ಮನೆಗಳಿಗೆ 50 ಸಾವಿರದಿಂದ 1 ಲಕ್ಷ ದವರೆಗೆ ಲಂಚದ ಬೇಡಿಕೆಯನ್ನು ಚೆಸ್ಕಾಂ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇಟ್ಟಿರುತ್ತಾರೆ. ಇದರ ಬಗ್ಗೆ ತ್ವರಿತವಾಗಿ ಕ್ರಮವನ್ನು ಕೈಗೊಳ್ಳಬೇಕು. ಮೈಸೂರಿನ ಸೆಸ್ಕ್ ವಿರುದ್ಧ ನೂರಾರು ಕೋಟ ಹಗರಣದ ದೋಷಾರೋಪ ವರದಿಯಾಗಿದ್ದು, ಅದರ ಮೇಲೆ ಏನು ಕ್ರಮಕೈಗೊಂಡಿದೆ ಎಂಬುದು ತಿಳಿದುಬಂದಿಲ್ಲ. ಇಲಾಖೆಯಲ್ಲಿ ದೊಡ್ಡ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದ ಪುತ್ರನಿಗೆ ಟೆಂಡರ್ ಕೊಡಲಾಗಿದೆ. ಯಾವುದೇ ಬ್ಯಾಂಕ್ ಗ್ಯಾರಂಟಿಗಳಿಲ್ಲದೆ ಟೆಂಡರ್ ಅನ್ನು ಕೊಟ್ಟು ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಇದರಿಂದ ಸುಮಾರು 100 ಕೋಟಿ ರೂ. ಹಗರಣ ಮಾಡಿರುವ ದೋಷಾರೋಪ ಇರುವುದಾಗಿ ರೈತರು ಆರೋಪಿಸಿದರು. ಸಂಘದ ರಾಜ್ಯ ಅಧ್ಯಕ್ಷೀಯ ಮಂಡಳಿ ಸದಸ್ಯ ಹೊನ್ನೂರು ಪ್ರಕಾಶ್, ಮುಖಂಡರಾದ ಶಿರಮಳ್ಳಿ ಮಂಜುನಾಥ್, ಸಿದ್ದಲಿಂಗಪುರ ಮೋಹನ್‌ಕುಮಾರ್, ಗಳಿಗರಹುಂಡಿ ವೆಂಕಟೇಶ್ ಭಾಗವಹಿಸಿದ್ದರು.

## ಮಣ್ಣಿನ ಪರೀಕ್ಷೆ ಆಧರಿಸಿ ರೈತರು ಸಮತೋಲಿತ ಗೊಬ್ಬರ ಬಳಕೆ ಮಾಡಿ

**ಮಧುಲತಾ ಹೆಚ್.ಬಿ. ಕಿವಿಮಾತು**



ಮೈಸೂರು:- ಮಣ್ಣು, ನೀರಿನ ಸಂರಕ್ಷಣೆ ಸುಸ್ಥಿರ ಕೃಷಿಗೆ ಬುನಾದಿ ಹಾಗೂ ಮಣ್ಣಿನ ಪರೀಕ್ಷೆ ಆಧರಿಸಿ ರೈತರು ಸಮತೋಲಿತ ಗೊಬ್ಬರ ಬಳಕೆ ಮಾಡಬೇಕು. ಸಾವಯವ ಗೊಬ್ಬರ, ಹಸಿರು ಗೊಬ್ಬರ ಮತ್ತು ಬೆಳೆ ಪರಿವರ್ತನೆ ಪದ್ಧತಿಗಳನ್ನು ಅನುಸರಿಸಬೇಕೆಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರಾದ ಮಧುಲತಾ ಹೆಚ್.ಬಿ ಅವರು ತಿಳಿಸಿದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರ, ನಾಗನಹಳ್ಳಿ, ವತಿಯಿಂದ 2026-27ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (ಖಿಪಿಗಿಜ) ಟಿ.ನರಸೀಪುರ ತಾಲ್ಲೂಕು ಬನ್ನೂರು ಹೋಬಳಿಯ ತುರಗನೂರು ಗ್ರಾಮದಲ್ಲಿ ?ಭತ್ತದಲ್ಲಿ ಸಮತೋಲಿತ ರಸಗೊಬ್ಬರ ಬಳಕೆ ಮತ್ತು ಸಮಗ್ರ ಪೀಡೆ ನಿರ್ವಹಣೆ?? ತರಬೇತಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಾವಯವ ಕೃಷಿ ಸಂಶೋಧನಾ ಕೇಂದ್ರದ ಹಿರಿಯ ಕ್ಷೇತ್ರ ಅಧೀಕ್ಷಕರಾದ ಡಾ.ಉಮಾಶಂಕರ್ ಕುಮಾರ್ ಅವರು ರೋಗ ಬಂದ ಮೇಲೆ ಚಿಕಿತ್ಸೆ ಕೊಡುವುದಕ್ಕಿಂತ ಬಿತ್ತನೆಗೆ ಮುನ್ನ ತಡೆಯುವುದೇ ಜಾಣತನ ಎಂದು ಹೇಳಿದರು. ಭತ್ತವನ್ನು ಕಾಡುವ ಪ್ರಮುಖ ರೋಗಗಳಾದ ಬೆಂಕಿ ರೋಗ, ದುಂಡಾಣು ಅಂಗಮಾರಿ ರೋಗ, ಕಂದುಚುಕ್ಕಿ ರೋಗ, ಉದುಬತ್ತಿ ರೋಗ, ತೆನೆ ಕವಚ ಕೊಳೆ ರೋಗಗಳನ್ನು ಆರಂಭಿಕ ಹಂತದಲ್ಲೇ ತಡೆಗಟ್ಟಲು ಬಿತ್ತನೆಗೆ ಮುನ್ನ ಕಡ್ಡಾಯವಾಗಿ ಬೀಜೋಪಚಾರ ಮಾಡಬೇಕು. ಬೆಂಕಿ ರೋಗ ಮತ್ತು ಕಂದುಚುಕ್ಕಿ ರೋಗ ನಿಯಂತ್ರಣಕ್ಕೆ ಪ್ರತಿ ಕಿಲೋ ಗ್ರಾಂ ಬಿತ್ತನೆ ಬೀಜಕ್ಕೆ 0.4 ಗ್ರಾಂ ಕಾರ್ಬೆಂಡಾಜಿಂ ಅಥವಾ 3 ಗ್ರಾಂ ಟ್ರೈಸೈಕ್ಲೊಜಾಲ್ ಅಥವಾ ಟ್ರೈಫ್ಲಾಕ್ಸಿ ಸ್ಟ್ರೋಬಿನ್ ಬಳಸಿ ಬೀಜೋಪಚಾರ ಮಾಡಬೇಕು. ಬ್ಯಾಕ್ಟೀರಿಯಾ ಅಂಗಮಾರಿ ರೋಗದ ತಡೆಗೆ ಪ್ರತಿ ಕೆಜಿ ಬಿತ್ತನೆ ಬೀಜಕ್ಕೆ 0.5ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ ಮಿಶ್ರಣ ಮಾಡುವುದು ಅತ್ಯಗತ್ಯ. ಬಿತ್ತನೆ ಬೀಜವನ್ನು ಪ್ಲಾಸ್ಟಿಕ್ ಹಾಳೆ ಅಥವಾ ಗೋಣಿ ಚೀಲದ ಮೇಲೆ ಹರಡಿ, ನೀರು ಚಿಮುಕಿಸಿ ಸ್ವಲ್ಪ ಒದ್ದೆ ಮಾಡಿ ನಂತರ ನಿಗದಿತ ಔಷಧವನ್ನು ಹಾಕಿ ಹದವಾಗಿ ಮಿಶ್ರಣ ಮಾಡಿ 3 ರಿಂದ 8 ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ ಬಿತ್ತನೆಗೆ ಬಳಸಬೇಕೆಂದು ತಿಳಿಸಿದರು.

# ತ್ಯಾಜ್ಯ ವಿಲೇವಾರಿಗೆ ಕಟ್ಟುನಿಟ್ಟಿನ ಕ್ರಮ

## ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಯದುವೀರ್ ನಿರ್ದೇಶನ

ಮಡಿಕೇರಿ: ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳು ಪರಿಣಾಮಕಾರಿಯಾಗಿ ಅರ್ಹ ಫಲಾನುಭವಿಗಳನ್ನು ತಲುಪುವಂತೆ ಅಧಿಕಾರಿಗಳು ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ. ಮಡಿಕೇರಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯಲ್ಲಿ ಹಲವು ಪ್ರಮುಖ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಮಡಿಕೇರಿ ನಗರದ ಪಾರಂಪರಿಕ ಕಸ ಮತ್ತು ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಮಳೆ ಅಥವಾ ಇತರ ಯಾವುದೇ ಸಬೂಬುಗಳನ್ನು ನೀಡದೆ ವೈಜ್ಞಾನಿಕವಾಗಿ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ನಗರಸಭೆ ಪೌರಾಯುಕ್ತರಿಗೆ ಸಂಸದರು ನಿರ್ದೇಶನ ನೀಡಿದರು.

### ಕಸದ ನಿರ್ವಹಣೆಗೆ ಜನಪ್ರತಿನಿಧಿಗಳ ಆಕ್ರೋಶ

ಸಭೆಯಲ್ಲಿ ಭಾಗವಹಿಸಿದ್ದ ವಿಧಾನಪರಿಷತ್ ಸದಸ್ಯರಾದ ಎಸ್.ಎಲ್. ಭೋಜೇಗೌಡ ಹಾಗೂ ಸುಜಾ ಕುಶಾಲಪ್ಪ ಅವರು ಸಂಸದರ ನಿರ್ದೇಶನಕ್ಕೆ ಧ್ವನಿಗೂಡಿಸಿ, ಅಧಿಕಾರಿಗಳು ಕಥೆ ಹೇಳುವುದನ್ನು ಬಿಟ್ಟು ಕಡ್ಡಾಯವಾಗಿ ಫಲಿತಾಂಶ ತೋರಿಸಬೇಕು ಎಂದು ತರಾಟೆಗೆ ತೆಗೆದುಕೊಂಡರು. ಜಿಲ್ಲೆಯ ಹೋಂಸ್ಟೇ





ಹಾಗೂ ರೆಸಾರ್ಟ್‌ಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಮತ್ತು ರಸ್ತೆ ಬದಿಗಳಲ್ಲಿ ಕಸ ಎಸೆಯುವುದನ್ನು ತಡೆಯಬೇಕು ಎಂದು ಸುಜಾ ಕುಶಾಲಪ್ಪ ಒತ್ತಾಯಿಸಿದರು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶೇ. 100 ರಷ್ಟು ಕಸ ವಿಲೇವಾರಿಗೆ ಒತ್ತು ನೀಡಲಾಗಿದ್ದು ಅಗತ್ಯವಿರುವ ಕಡೆ ಡಸ್ಟ್‌ಬಿನ್ ಇಡಲಾಗಿದೆ ಎಂದು ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ವಿವರಿಸಿದರು. ಈ ಕುರಿತು ಮುಂದಿನ ಸಭೆಯ ವೇಳೆಗೆ ಸಮಗ್ರ ವರದಿ ನೀಡುವಂತೆ ಸಂಸದರು ಅಧಿಕಾರಿಗಳಿಗೆ ಗಡುವು ವಿಧಿಸಿದರು.

### ಅಮೃತ್ ಹಾಗೂ ಜಲಜೀವನ್ ಮಿಷನ್ ಯೋಜನೆಗಳ ಪ್ರಗತಿ ಪರಿಶೀಲನೆ

ಅಮೃತ್ 2.0 ಯೋಜನೆಯಡಿ ಜಿಲ್ಲೆಯ ಮಡಿಕೇರಿ, ಕುಶಾಲನಗರ ಸೇರಿದಂತೆ ವಿವಿಧೆಡೆ 45 ಕೋಟಿ ರೂಪಾಯಿ ವೆಚ್ಚದಲ್ಲಿ ಕುಡಿಯುವ ನೀರು ಪೂರೈಕೆ ಕಾಮಗಾರಿ ನಡೆಯುತ್ತಿದ್ದು, ಶೇ.70ರಷ್ಟು ಪ್ರಗತಿಯಾಗಿದೆ ಎಂದು ಎಂಜಿನಿಯರ್ ಜಯಕುಮಾರ್ ಸಭೆಗೆ ಮಾಹಿತಿ ನೀಡಿದರು. ಇಷ್ಟು ಹೆಚ್ಚು ಮಳೆ ಬೀಳುವ ಕೊಡಗು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಟ್ಯಾಂಕರ್ ಬಳಸುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ಸಂಸದರು, ಜಲಮೂಲಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದರು. ಜಲಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೂ ನಲ್ಲಿ ನೀರು ನೀಡುವ ಕಾಮಗಾರಿ ಪೂರ್ಣಗೊಂಡ ನಂತರ ಸ್ಥಳೀಯ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಪಂಚನಾಮೆ ನಡೆಸಿ ಗ್ರಾಮ ಪಂಚಾಯಿತಿಗಳಿಗೆ ವರದಿ ನೀಡಬೇಕು ಎಂದು ಸೂಚಿಸಿದ ಸಂಸದರು, ಈ ಯೋಜನೆಗಳಲ್ಲಿ ವಿಳಂಬ ಧೋರಣೆ ಅನುಸರಿಸಿದರೆ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

### ಶಿಕ್ಷಣ ಮೂಲಸೌಕರ್ಯ ವೃದ್ಧಿಗೆ ಸೂಚನೆ

ಜಿಲ್ಲೆಯಲ್ಲಿ ಹೆಚ್ಚುವರಿ ಬಿಎಸ್‌ಎನ್‌ಎಲ್ ಟವರ್‌ಗಳ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಕಂದಾಯ ಮತ್ತು ಅರಣ್ಯ ಇಲಾಖೆಗಳು ಶೀಘ್ರವಾಗಿ ಒದಗಿಸಬೇಕು ಎಂದು ಸಂಸದರು ಸೂಚಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ನಬಾರ್ಡ್ ನೆರವಿನೊಂದಿಗೆ ಹೊಸದಾಗಿ ಹಾಸ್ಟೆಲ್ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಯಿತು. ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಮತ್ತು ಮೂಲಸೌಲಭ್ಯ ಒದಗಿಸುವಂತೆ ಸುಜಾ ಕುಶಾಲಪ್ಪ ಹಾಗೂ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಸಮವಸ್ತ್ರ ಮತ್ತು ಪಠ್ಯಪುಸ್ತಕ ವಿತರಿಸುವಂತೆ ಭೋಜೇಗೌಡ ಅವರು ಅಧಿಕಾರಿಗಳಿಗೆ ಒತ್ತಾಯಿಸಿದರು. ಅಲ್ಲದೆ, ಜಿಲ್ಲೆಯಲ್ಲಿ ಪ್ರಸ್ತುತ ಇರುವ 7 ಪಿಎಂಶ್ರೀ ಶಾಲೆಗಳ ಜೊತೆಗೆ ಇನ್ನಷ್ಟು ಶಾಲೆಗಳ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

### ಮಾನವ-ವನ್ಯಮೃಗ ಸಂಘರ್ಷ ನಿಯಂತ್ರಣ ಮತ್ತು ಕೃಷಿ ಚಟುವಟಿಕೆ

ಜಿಲ್ಲೆಯ ಪ್ರಮುಖ ಸಮಸ್ಯೆಯಾದ ಕಾಡಾನೆ ಹಾಗೂ ಮಾನವ ಸಂಘರ್ಷವನ್ನು ತಡೆಯಲು ಪಕ್ಷಾತೀತವಾಗಿ ಎಲ್ಲರೂ ಒಟ್ಟಾಗಿ ಕಾರ್ಯಯೋಜನೆ ರೂಪಿಸಬೇಕು ಎಂದು ಸಂಸದ ಯದುವೀರ್ ಒಡೆಯರ್ ಕರೆ ನೀಡಿದರು. ಕೇಂದ್ರ ಸರ್ಕಾರ ದಿಂದ ಕರ್ನಾಟಕಕ್ಕೆ ಆನೆ ಯೋಜನೆಯಡಿ ಕಡಿಮೆ ಹಣ ಬಂದಿದೆ ಎಂಬ ಅಪಪ್ರಚಾರ ಸುಳ್ಳು ಎಂದು ಸ್ಪಷ್ಟಪಡಿಸಿದ ಅವರು, ಲಭ್ಯವಿರುವ ಅನುದಾನ ಬಳಸಿ ಹಾವಳಿ ತಡೆಗೆ ಕ್ರಮ ಕೈಗೊಳ್ಳಬೇಕು ಎಂದರು. ವನ್ಯಪ್ರಾಣಿಗಳು ಕಾಡಿನಲ್ಲಿಯೇ ಉಳಿಯುವಂತೆ ಮಾಡಲು ಅರಣ್ಯದಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸ ಬೇಕು ಎಂದು ಭೋಜೇಗೌಡ ಸಲಹೆ ನೀಡಿದರು. ಅರಣ್ಯ ಇಲಾಖೆಯಿಂದ ರೈತರಿಗೆ ಆಗುತ್ತಿರುವ ಕಿರುಕುಳ ನಿಲ್ಲಬೇಕು ಎಂದು ಸುಜಾ ಕುಶಾಲಪ್ಪ ಒತ್ತಾಯಿಸಿದರು. ಕೃಷಿ ಇಲಾಖೆಯು ಮುಂಬ ರುವ ದಿನಗಳಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಬೇಕು ಹಾಗೂ ಕಾಫಿ ಮಂಡಳಿಯ ಕೇಂದ್ರ ಸರ್ಕಾರದ ಯೋಜನೆಗಳನ್ನು ರೈತರಿಗೆ ತಲುಪಿಸಬೇಕು ಎಂದು ಸಂಸದರು ನಿರ್ದೇಶನ ನೀಡಿದರು.

# ಗೌರವಧನದ ಆಧಾರದಲ್ಲಿ ಮುಂದುವರಿಸಿ

ಚಾಮರಾಜನಗರ, ಗೌರವಧನದ ಆಧಾರದ ಮೇಲೆ ಮುಂದುವರಿಸುವಂತೆ ಒತ್ತಾಯಿಸಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರಾಷ್ಟ್ರೀಯನಗರ ಜೀವನೋಪಾಯ ಅಭಿಯಾನ(ಡೇ-ನಲ್ಮ್) ದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಮುಖಾಂತರ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕರಿಗೆ ಮನವಿ ಸಲ್ಲಿಸಿದರು. ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರಾಷ್ಟ್ರೀಯನಗರ ಜೀವನೋಪಾಯ ಅಭಿಯಾನ(ಡೇ-ನಲ್ಮ್) ದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ನಮ್ಮನ್ನು 15.06.2026 ರ ಪತ್ರದಲ್ಲಿ ಪಿ.ಎಂ.ಸ್ವ-ನಿಧಿ ಯೋಜನೆಯ ವಿಸ್ತೃತ ಕಾರ್ಯಾಚರಣಾ ವಿಧಾನ ಎಸ್ ಒಪಿ ಗಳ ಮಾರ್ಗಸೂಚಿಯಂತೆ ಸಂಪನ್ಮೂಲವ್ಯಕ್ತಿ ಆರ್ ಪಿ ಗಳಾಗಿ ತೊಡಗಿಸಿಕೊಳ್ಳುವಂತೆ ತಿಳಿಸಿರುತ್ತಾರೆ.

ಅದರಂತೆ 5 ನಗರಸ್ಥಳೀಯ ಸಂಸ್ಥೆಗಳಲ್ಲಿ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿಯಲ್ಲಿ ಗೌರವಧನದ ಮೇಲೆ ಆಯ್ಕೆಯಾಗಿ ಸುಮಾರು 4 ವರ್ಷಗಳಿಂದ ಕರ್ತವ್ಯನಿರ್ವಹಿಸುತ್ತಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ನಾವು ಕೇಂದ್ರ ಮತ್ತು ರಾಜ್ಯಸರ್ಕಾರದ ವಿವಿಧ ಯೋಜನೆಗಳಾದ ಡೇ-ನಲ್ಮ್, ಪಿ.ಎಂ. ಸ್ವ-ನಿಧಿ. ಸ್ವ-ನಿಧಿ ಸೇ ಸಮೃದ್ಧಿ, ಪಿ.ಎಂ.ಎಫ್.ಎಂ.ಇ. ಅಮೃತ್ ಮಿತ್ರ ಯೋಜನೆಗಳ ಅನುಷ್ಠಾನದ ಕಾರ್ಯದ ಜೊತೆಗೆಕ್ಷೇತ್ರದ ಮಟ್ಟದಲ್ಲಿ

ಮಹಿಳಾ ಸ್ವಸಹಾಯಸಂಘಗಳನ್ನು ರಚಿಸುವುದು ಮತ್ತು ಅವರ ಆರ್ಥಿಕ ಮಹಿಳಾಸಬಲೀಕರಣದ ಜೊತೆಗೆ ನಗರಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು ,ಮುಖ್ಯಾಧಿಕಾರಿಗಳು



ಸೂಚಿಸುವ ಸರ್ವೆ, ಚುನಾವಣೆ, ಗೃಹಲಕ್ಷ್ಮಿ ಮತ್ತು ಯುವನಿಧಿ, ಯೋಜನೆಗಳ ಜೊತೆಗೆ ಸ್ವಚ್ಛಭಾರತ್ ಮಿಷನ್, ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮುಂತಾದ ಕಲಸಗಳನ್ನು ನಿರ್ವಹಿಸುತ್ತಿದ್ದವೆ. ಪ್ರಸ್ತುತ 10 ಸಾವಿರ ರೂ. ಗೌರವಧನದ ಆಧಾರದಲ್ಲಿಯೇ ಈ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾ ಬಂದಿರುವುದರಿಂದ ನಮ್ಮನ್ನು ನಗರಸ್ಥಳೀಯ ಸಂಸ್ಥೆಗಳ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಅಥವಾ ಕೇಂದ್ರ ಪುರಸ್ಕೃತ ಯೋಜನೆಗಳು ಅಥವಾ ನಗರ ಸ್ಥಳೀಯ ಸಂಸ್ಥೆಗಳ ನಿಧಿಯಿಂದ ಗೌರವಧನ ಭರಿಸುವಂತೆ ಮತ್ತು ನಮ್ಮ ಸೇವೆಯನ್ನು ಗೌರವಧನದ ಆಧಾರದ ಮೇಲೆಯೆ ಮುಂದುವರೆಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಜಿಲ್ಲಾಧಿಕಾರಿ ಗಳು ಮುಖಾಂತರ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕರಿಗೆ ಸಲ್ಲಿಸಿರುವ ಮನವಿಯಲ್ಲಿ ಸಿಆರ್ ಪಿ ಗಳಾದ ನರ್ಗೀಸ್ ಬಾನು, ಜ್ಯೋತಿ, ರೂಪ,ಪಲ್ಲವಿ, ಸುಮಾ, ಶಬ್ರಿನ್, ಪೂಜಾ, ಪುಷ್ಪಲತಾ,ಜಯಶೀಲ ಒತ್ತಾಯಿಸಿದ್ದಾರೆ.

# ರೈತ ಸಂಘದಿಂದ ಬೃಹತ್ ಬೈಕ್ ರ‍್ಯಾಲಿ, ಪ್ರತಿಭಟನೆ

ಗುಂಡ್ಲುಪೇಟೆ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿದ್ಯುತ್ ವಲಯವನ್ನು ಖಾಸಗೀಕರಣ ಮಾಡಲು ಹೊರಟಿರುವುದನ್ನು ಖಂಡಿಸಿ ಹಾಗೂ ಈ ಮಾರಕ ಪ್ರಸ್ತಾವನೆಯನ್ನು ತಕ್ಷಣವೇ ಕೈಬಿಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘಟನೆಯ ಕಾರ್ಯಕರ್ತರು ಪಟ್ಟಣದಲ್ಲಿ ಬೃಹತ್ ಬೈಕ್ ರ‍್ಯಾಲಿ ಹಾಗೂ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪಟ್ಟಣದ ಹೊರವಲಯದ ಐತಿಹಾಸಿಕ ಕೆಬ್ಬೆ ಕಟ್ಟೆಯಿಂದ ನೂರಾರು ಬೈಕ್‌ಗಳ ಮೂಲಕ ಜಮಾವಣೆಗೊಂಡ ರೈತರು ಭರ್ಜರಿ ರ‍್ಯಾಲಿ ಆರಂಭಿಸಿದರು. ರಾಷ್ಟ್ರೀಯ ಹೆದ್ದಾರಿಯ ಮುಖ್ಯ ರಸ್ತೆಯ ಮೂಲಕ ಸಾಗಿದ ಬೃಹತ್ ಮೆರವಣಿಗೆಯು ತಾಲೂಕು ಕಚೇರಿಯ ಮುಂಭಾಗ ತಲುಪಿತು. ಈ ವೇಳೆ ಜಮಾವಣೆಗೊಂಡ ಪ್ರತಿಭಟನಾಕಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ವಿರೋಧಿ ಧೋರಣೆಯ ವಿರುದ್ಧ ತೀವ್ರ ಧಿಕ್ಕಾರದ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಹಿರಿಯ ರೈತ ಮುಖಂಡ ಹೊನ್ನೂರು ಬಸವಣ್ಣ ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಂಟಿಯಾಗಿ ವಿದ್ಯುತ್ ರಂಗವನ್ನು ಖಾಸಗಿ ಕಂಪನಿಗಳ ಕೈಗಿಟ್ಟು ರೈತರಿಂದ ಮತ್ತು ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ದೊಡ್ಡ ಹುನ್ನಾರ ನಡೆಸಿವೆ. ಕೃಷಿ ವಲಯಕ್ಕೆ ನೀಡಲಾಗುತ್ತಿರುವ ಉಚಿತ ಹಾಗೂ ರಿಯಾಯಿತಿ ದರದ ವಿದ್ಯುತ್



ಸೌಲಭ್ಯವನ್ನು ಕಿತ್ತುಕೊಳ್ಳುವ ಇಂತಹ ಮಾರಕ ಯೋಜನೆಗಳನ್ನು ಸರ್ಕಾರ ಯಾವುದೇ ಕಾರಣಕ್ಕೂ ಜಾರಿಗೊಳಿಸಬಾರದು ಎಂದು ಒತ್ತಾಯಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷರಾದ ವೀರನಪುರ ನಾಗಪ್ಪ ಅವರು ಮಾತನಾಡಿ ವಿದ್ಯುತ್ ಖಾಸಗೀಕರಣದಿಂದ ಕೇವಲ ರೈತರಿಗಷ್ಟೇ ಅಲ್ಲ, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ಸೇರಿದಂತೆ ಎಲ್ಲಾ ವರ್ಗದ ಜನರಿಗೂ ಭಾರಿ ಅನಾನುಕೂಲವಾಗುತ್ತದೆ. ವಿದ್ಯುತ್ ದರ ಗಗನಕ್ಕೇರಲಿದ್ದು, ಸಾಮಾನ್ಯರು ಬದುಕು ನಡೆಸುವುದು ದುಸ್ತರವಾಗುತ್ತದೆ. ಸಾರ್ವಜನಿಕರು ಮತ್ತು ರೈತರು ಒಟ್ಟಾಗಿ ಆಕ್ಷೇಪಣೆ ಸಲ್ಲಿಸುವ ಮೂಲಕ ಈ ಕಪ್ಪು ಕಾನೂನನ್ನು ಬಲವಾಗಿ ವಿರೋಧಿಸಬೇಕು ಎಂದು ಕರೆ ನೀಡಿದರು. ಪ್ರತಿಭಟನೆಯ ತರುವಾಯ ಸ್ಥಳಕ್ಕೆ ಆಗಮಿಸಿದ ಗುಂಡ್ಲುಪೇಟೆ ತಹಸೀಲ್ದಾರ್ ತನ್ಮಯ್ ಹಾಗೂ ಚೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸಿದ್ದಲಿಂಗಪ್ಪ ಅವರಿಗೆ ರೈತ ಮುಖಂಡರು ಜಂಟಿಯಾಗಿ ಮನವಿ ಪತ್ರ ಸಲ್ಲಿಸಿದರು. ಈ ಬೃಹತ್ ಪ್ರತಿಭಟನೆಯಲ್ಲಿ ರೈತ ಮುಖಂಡರಾದ ನಟರಾಜು, ಪ್ರಭುಸ್ವಾಮಿ, ಗಂಗಾಧರ್, ಬೆಳ್ಳಶೆಟ್ಟಿ, ಬಸಪ್ಪ, ನಾಗಭೂಷಣ್, ಮಂಜುನಾಥ್, ಗುರುಸ್ವಾಮಿ, ಮಾದಪ್ಪ, ಪುಟ್ಟೇಗೌಡ, ಗುರುಮಲ್ಲ ಶೆಟ್ಟಿ, ನಂಜುಂಡನಾಯಕ, ಗೋವಿಂದಚಾರಿ, ನಾಗರಾಜು, ಮಹದೇವಶೆಟ್ಟಿ ಸೇರಿದಂತೆ ತಾಲೂಕಿನ ವಿವಿಧ ಹಳ್ಳಿಗಳಿಂದ ಆಗಮಿಸಿದ್ದ ನೂರಾರು ರೈತ ಬಾಂಧವರು ಪಾಲ್ಗೊಂಡಿದ್ದರು.

# ಕಬಿನಿ ಜಲಾಶಯದ ಬಳಿ ಕಲುಷಿತ ಮಾಡಿದರೆ ಕ್ರಮ

ಎಚ್.ಡಿ.ಕೋಟೆ: ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯದ ಹಿನ್ನೀರಿಗೆ ಮಾನವ ಮಲ ಮತ್ತು ತ್ಯಾಜ್ಯ ನೀರು ಬಿಟ್ಟಿರುವ ಬಗ್ಗೆ ಅಂತರಸಂತೆ ಪೊಲೀಸ್ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮ ಜರಗಿಸುವಂತೆ ಒತ್ತಾಯ ಮಾಡಲಾಗಿದೆ ಎಂದು ಕಬಿನಿ ಜಲಾಶಯ ಉಪ ವಿಭಾಗದ ಕಾರ್ಯಪಾಲಕ ಅಭಿಯಂತರ ರಂಗಯ್ಯ ಹೇಳಿದರು.

ಬೀಚನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಕಬಿನಿ ಹಿನ್ನೀರಿನಲ್ಲಿ ತ್ಯಾಜ್ಯ ಸುರಿದಿದ್ದ ಸ್ಥಳ ಪರಿಶೀಲನೆ ನಡೆಸಿ ಮಾತನಾಡಿದ, ಮಾನವ ತ್ಯಾಜ್ಯ ಮತ್ತು ಇತರೆ ತ್ಯಾಜ್ಯವನ್ನ ಕಬಿನಿ ಹಿನ್ನೀರಿಗೆ ಸುರಿದಿರುವುದು ಸ್ಥಳ ಪರಿಶೀಲನೆ ವೇಳೆ ತಿಳಿದುಬಂದಿದೆ. ಕಬಿನಿ ಹಿನ್ನೀರಿಗೆ ತ್ಯಾಜ್ಯ ಸುರಿಯುವುದು, ನೀರು ಕಲುಷಿತಗೊಳಿಸುವುದು ಅಕ್ಷಮ್ಯ ಅಪರಾಧ. ಇದೊಂದು ಗಂಭೀರ ಪ್ರಕರಣವಾಗಿದ್ದು, ಈ ಸಂಬಂಧ ಪೊಲೀಸ್ ಠಾಣೆ ಜೊತೆಗೆ ಪರಿಸರ ಇಲಾಖೆಗೆ ಪತ್ರ ಬರೆಯಲಾಗಿದ್ದು, ಶೀಘ್ರವೇ ಕಿಡಿಗೇಡಿಗಳ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ. ಹೋಂ ಸ್ಟೇ ಮತ್ತು ರೆಸಾರ್ಟ್ ಗಳಿಂದ ತ್ಯಾಜ್ಯ ಹಾಗೂ ಮಾನವ ಮಲವನ್ನು ಕಬಿನಿ ಹಿನ್ನೀರಿಗೆ ಹರಿಯಬಿಡಲಾಗುತ್ತಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಕೆಲ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.



ಇದು ಸತ್ಯಕ್ಕೆ ದೂರವಾದದ್ದು. ತ್ಯಾಜ್ಯವನ್ನು ತಂದು ಸುರಿದಿರುವುದು ನಿಜ. ಆದರೆ ಅದು ಕಬಿನಿ ಹಿನ್ನೀರನ್ನು ಸೇರಿಲ್ಲ. ಕೇವಲ 20 ಮೀಟರ್ ನಷ್ಟೇ ದೂರ ಹರಿದಿದೆಯಷ್ಟೆ, ತ್ಯಾಜ್ಯ ಸುರಿದಿರುವ ಸ್ಥಳಕ್ಕೂ, ಕಬಿನಿ ನೀರು ಇರುವ ಸ್ಥಳಕ್ಕೂ ಅಂದಾಜು 100 ಮೀಟರ್ ದೂರ ಇದೆ. ಹೀಗಾಗಿ ಸುಳ್ಳು ಸುದ್ದಿ ಹಬ್ಬಿಸಿ, ಜನರಲ್ಲಿ ಆತಂಕ ಸೃಷ್ಟಿಸಬಾರದು ಎಂದು ರಂಗಯ್ಯ ಮನವಿ ಮಾಡಿದರು.

> ಯಾರು ಕೂಡ ಕಬಿನಿ ಹಿನ್ನೀರಿಗೆ ತ್ಯಾಜ್ಯ ಸುರಿದು ನೀರನ್ನ ಮಲಿನಗೊಳಿಸಬಾರದು. ಮದ್ಯದ ಬಾಟಲಿಗಳನ್ನು ಕಬಿನಿ ಹಿನ್ನೀರಿಗೆ ಎಸೆಯಬಾರದು. ಈ ರೀತಿ ಘಟನೆಗಳು ನಿಮ್ಮ ಗಮನಕ್ಕೆ ಬಂದ ತಕ್ಷಣ, ನಮ್ಮ ಆಫೀಸ್ ಅಥವಾ ನನ್ನ ಫೋನ್ ನಂಬರ್ ಗೆ ಕರೆ ಮಾಡಿ ಮಾಹಿತಿ ನೀಡಿದರೆ, ಕ್ರಮ ಜರುಗಿಸಲಾಗುವುದು.
>
> **ಗಣೇಶ್** ಸಹಾಯಕ ಕಾರ್ಯಪಾಲಕ ಇಂಜನಿಯರ್.

# ಖಾಸಗಿ ಕಂಪನಿಗೆ ವಿದ್ಯುತ್‌ಗೆ ವಿರೋಧ




ಕೊಳ್ಳೇಗಾಲ. ಟಾಟಾ ಪವರ್ ಕಂಪನಿಯವರು ಕರ್ನಾಟಕದಲ್ಲಿ ವಿತರಣೆ ನಿರ್ವಹಿಸಲು ಕೆ.ಇ.ಆರ್.ಸಿ ಗೆ ಸಲ್ಲಿಸಿರುವ ಅರ್ಜಿಯನ್ನು ವಿರೋಧಿಸಿ ಕೊಳ್ಳೇಗಾಲ ಉಪವಿಭಾಗದ ಅಧಿಕಾರಿಗಳು ಮತ್ತು ನೌಕರರು ಪ್ರತಿಭಟನೆ ನಡೆಸಿದರು.

ಪಟ್ಟಣದ ಉಪವಿಭಾಗ ಸೆಸ್ಕ್ ಕಚೇರಿಯ ಮುಂಭಾಗದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಸರ್ಕಾರವು ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಖಾಸಗೀಕರಣಕ್ಕೆ ಮುಂದಾಗಬಾರದು ಎಂದು ಆಗ್ರಹಿಸಿ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಬಳಿಕ ಪ್ರತಿಭಟನಾಕಾರರು ಮಾತನಾಡಿ, ಸಾರ್ವಜನಿಕ ವಲಯದ ವಿದ್ಯುತ್ ವಿತರಣಾ ಸಂಸ್ಥೆಗಳನ್ನು ಬಲಪಡಿಸುವ ಬದಲು ಖಾಸಗಿ ಕಂಪನಿಗಳಿಗೆ ಅವಕಾಶ ನೀಡುವುದು ಸರಿಯಲ್ಲ ಎಂದರು. ಈಗಾಗಲೇ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುತ್ತಿರುವ ಸರ್ಕಾರಿ ಸಂಸ್ಥೆಗಳ ಅಸ್ತಿತ್ವಕ್ಕೆ ಇದು ಧಕ್ಕೆ ಉಂಟುಮಾಡಬಹುದು ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದರು.ಉಪವಿಭಾಗ ಸೆಸ್ಕ್ ಕಾರ್ಯಪಾಲಕ ಅಭಿಯಂತರರು ತಬಸ್ಸುಮ್ ಅಪ್ಜಾ, ಕೊಳ್ಳೇಗಾಲ ಎಇಇ ಸುರೇಶ್ ಕುಮಾರ್, ಯಳಂದೂರು ಎಇಇ ಲಿಂಗರಾಜು, ಹನೂರು ರಂಗಸ್ವಾಮಿ, ವಿಭಾಗೀಯ ಕಚೇರಿ ಎಇಇ ಶ್ರೀನಿಧಿ, ಕೇಂದ್ರ ಕಾರ್ಯಕಾರಿಣಿ ಸದಸ್ಯರು ಕೆ.ಮಹದೇವ, ಲೆಕ್ಕಾಧಿಕಾರಿ ಕಂಪನಿ ಉಪಾಧ್ಯಕ್ಷರು ಎನ್. ಮಹೇಶ್ ಸೇರಿದಂತೆ ಎಲ್ಲಾ ನೌಕರರು ಇದ್ದರು.

## ಸಿಮ್ಸ್ ಕಾಲೇಜಿನಲ್ಲಿ 5ನೇ ಘಟಿಕೋತ್ಸವ ಸಮಾರಂಭ, 143 ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ

# ಭಾವಿ ವೈದ್ಯರು ಸೇವಾ ಮನೋಭಾವನೆ ಬೆಳಸಿಕೊಳ್ಳಿ: ಡಾ.ಸುದರ್ಶನ್

ಚಾಮರಾಜನಗರ, ವ್ಯದ್ಯಕೀಯ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿಯಾಗಿದ್ದು, ಎಂಬಿಬಿಎಸ್ ಪೂರ್ಣಗೊಳಿಸಿ ಭಾವಿ ವೈದ್ಯರಾಗಿ ಹೊರಹೊಮ್ಮಿರುವ ನೀವೆಲ್ಲರೂ ವೈದ್ಯಕೀಯ ಜ್ಞಾನದ ಜೊತೆಗೆ ನಿಸ್ವಾರ್ಥ ಸೇವಾ ಮನೋಭಾವ ಬೆಳೆಸಿಕೊಂಡು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯಕ ಎಂದು ಸಮಾಜ ಸೇವಕರು, ಆದಿವಾಸಿಗಳ ಪರ ಹೋರಾಟಗಾರರು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಪಡೆಯ ಮಾಜಿ ಅಧ್ಯಕ್ಷ ಪದ್ಮಶ್ರೀ ಡಾ. ಹೆಚ್.ಸುದರ್ಶನ್ ಹೇಳಿದರು.

ನಗರದ ಯಡಬೆಟ್ಟದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ನಡೆದ 5ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಿ ಮಾತನಾಡಿದರು.ಮುಂದೆ ನೀವು ಭಾರತದಲ್ಲಿ ವೈದ್ಯರಾಗಿ ನೋಂದಾಯಿಸಿಕೊಳ್ಳಲು ಕಡ್ಡಾಯವಾಗಿ ಒಂದು ವರ್ಷದ ಇಂಟರ್ ಶಿಪ್ ಮುಗಿಸಬೇಕು. ನಂತರ ತಮ್ಮ ವೃತ್ತಿಜೀವನವನ್ನು ಮುನ್ನಡೆಸಲು ವೈದ್ಯಕೀಯ ಅಭ್ಯಾಸ, ಸ್ನಾತಕೋತರ, ಪದವಿ, ಸಂಶೋಧನೆ ಮಾಡಬಹುದು. ಕೇವಲ ಆಸ್ಪತ್ರೆಗಳಿಗೆ ಸೀಮಿತವಾಗದೆ ಗ್ರಾಮೀಣ ಪ್ರದೇಶದ ಜನರಿಗೆ, ಬಡವರಿಗೆ ಉಚಿತ ಆರೋಗ್ಯ ಶಿಬಿರಗಳ ಮೂಲಕ ತಮ್ಮ ಸೇವೆ ಸಲ್ಲಿಸಬೇಕು.ನಿಮ್ಮ ಮುಂದಿನ ಜೀವನ ಸುಖಕರವಾಗಿರಲಿ ಎಂದು ಶುಭ ಕೋರಿದರು.



### ರೋಗಿಗಳೊಂದಿಗೆ ಸಂಯಮ, ಶಾಂತಿಯಿಂದ ವರ್ತಿಸಿ

ಅಧ್ಯಕ್ಷತೆ ವಹಿಸಿದ್ದ ಸಿಮ್ಸ್‌ನ ಡೀನ್ ಮತ್ತು ನಿರ್ದೇಶಕ ಹೆಚ್.ಜಿ. ಮಂಜುನಾಥ್ ಮಾತನಾಡಿ, ನಮ್ಮ ಕಾಲೇಜಿನಲ್ಲಿ 5ನೇ ಘಟೀಕೋತ್ಸವ ಸಮಾರಂಭ ನಡೆಯಿತು, 2016-17ನೇ ಸಾಲಿನಲ್ಲಿ ಮೆಡಿಕಲ್ ಕಾಲೇಜು ಆರಂಭವಾಯಿತು. 150 ವಿದ್ಯಾರ್ಥಿಗಳು ಕಾಲೇಜು ಪ್ರವೇಶ ಪಡೆದು ಕಠಿಣ ಅಭ್ಯಾಸ ಪೂರ್ಣಗೊಳಿಸಿ, ಜ್ಞಾನಾರ್ಜನೆ ಕೌಲಶ್ಯ ಬೆಳೆಸಿಕೊಂಡು ವ್ಯದ್ಯರಾಗಿ ಮುಂದಿನ ತರಗತಿಗಳಿಗೆ ಹೋಗುತ್ತಾರೆ. ಇಂದು 143 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು ಎಂದರು.

ಪದವಿ ಪಡೆದಿರುವ ವಿದ್ಯಾರ್ಥಿಗಳು ಮಂದೆ ಅಭ್ಯಾಸ ಮಾಡಬಹುದು. ಸಂಶೋಧನೆ ಮಾಡಬಹುದು. ಸಮಾಜಕ್ಕೆ ಉತ್ತಮ ವೈದ್ಯರಾಗಿ ಸೇವೆ ಸಲ್ಲಿಸಲಿ ಎಂದು ಶುಭ ಕೋರಲಾಯಿತು. ರೋಗಿಗಳ ಜೊತೆ ಸಂಯಮ, ಶಾಂತಿ ವರ್ತಿಸಿ ನಕ್ತಾನಕ್ತಾ ಚಿಕಿತ್ಸೆ ಕೊಡಿ, ಸಿಮ್ಸ್‌ಗೆ ಒಳ್ಳೆಯ ಹೆಸರು ತಂದುಕೊಡಿ ಎಂದು ವಿದ್ಯಾರ್ಥಿಗಳಿಗೆ ಹಿತವಚನ ನುಡಿದರು. ಆಸ್ಪತ್ರೆಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಂಶುಪಾಲ ಡಾ. ಕೆ.ಟಿ. ಅಜಯ್, ಜಿಲ್ಲಾ ವೈದ್ಯಕೀಯ ಅಧೀಕ್ಷಕ ಡಾ.ಸಿ.ವಿ.ಮಾರುತಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಂ.ಚಿನ್ನಬೋವಿ, ನಿವಾಸಿ ವೈದ್ಯಾಧಿಕಾರಿ ಡಾ. ಏಜಾಝುಲ್ಲಾ ಖಾನ್, ಡಾ.ಅಭಿಷೇಕ್, ಡಾ.ಪ್ರದೀಪ್, ಡಾ.ಚಂದ್ರಿಕಬಾಬು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ. ಎನ್.ಪಿ. ಅಭಿಲಾಷ ಆರ್ಥಿಕ ಸಲಹೆಗಾರ ರವಿ ಹೊಸಮನಿ, ವಿವಿಧ ವಿಭಾಗಗಳ ಮುಖ್ಯಸ್ಥರು, ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿ ವೃಂದ ಭಾಗವಹಿಸಿದ್ದರು.

# ಹುಲಿ ದಾಳಿಗೆ ಕುರಿಗಳ ಸಾವು

ಚಾಮರಾಜನಗರ: ತಾಲೂಕಿನ ಅಮಚವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ಧಲಿಂಗಪುರ ಗ್ರಾಮದಲ್ಲಿ ಕುರಿ ಮತ್ತು ಮೇಕೆಗಳ ಮೇಲೆ ಹುಲಿ ದಾಳಿ ನಡೆಸಿದ್ದು, 2 ಕುರಿ ಮತ್ತು 2 ಮೇಕೆ ಮರಿಗಳು ಮೃತಪಟ್ಟಿದೆ.

ಸಿದ್ದಲಿಂಗಪುರ ಗ್ರಾಮದ ಮಹೇಶ್ ಮತ್ತು ಶೇಷ ಎಂಬ ಸಹೋದರರಿಗೆ ಸೇರಿದ ಕುರಿ ಮತ್ತು ಮೇಕೆಗಳ ಮೇಲೆ ಹುಲಿ ದಾಳಿ ನಡೆಸಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಶೇಷ ಅವರು ಕಾಡಂಚಿನಲ್ಲಿ ಕುರಿ ಮತ್ತು ಮೇಕೆಗಳನ್ನು ಮೇಯಿಸುವಾಗ ದಾಳಿ ನಡೆಸಿದೆ ಎನ್ನಲಾಗಿದೆ. ಇತ್ತೀಚೆಗೆ ಇದೇ ಗ್ರಾಮದಲ್ಲಿ ಮೇಕೆಯೊಂದನ್ನು ಹುಲಿ ಬಲಿ ಪಡೆದಿತ್ತು. ಈಗ ಒಮ್ಮೆಲೇ ನಾಲ್ಕು ಕುರಿ ಮತ್ತು ಮೇಕೆಗಳನ್ನು ಬಲಿ ಪಡೆದಿರುವುದರಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಅರಣ್ಯ ಇಲಾಖೆಯವರು ಬೋನ್ ಇರಿಸಿ ಹುಲಿಯನ್ನು ಶೀಘ್ರದಲ್ಲೇ ಸೆರೆ ಹಿಡಯಬೇಕು ಎಂದು ಒತ್ತಾಯಿಸಿದ್ದಾರೆ.



# ಪಾವತಿಗೆ ಶೇ. 50 ರಷ್ಟು ಭರ್ಜರಿ ರಿಯಾಯಿತಿ

### ವಾಹನ ಸವಾರರಿಗೆ ಸುವರ್ಣಾವಕಾಶ ನೀಡಿದ ಸರ್ಕಾರ




ಮಡಿಕೇರಿ: ಸಾರಿಗೆ ಇಲಾಖೆಯ ದಂಡ ಬಾಕಿ ಹಾಗೂ ಪೊಲೀಸ್ ಇಲಾಖೆಯ ಇ-ಚಲನ್ ಮೂಲಕ ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ರಾಜ್ಯ ಸರ್ಕಾರವು ಶೇ. 50 ರಷ್ಟು ಭರ್ಜರಿ ರಿಯಾಯಿತಿ ಘೋಷಿಸಿದೆ. ಈ ವಿಶೇಷ ಅಭಿಯಾನವು ಜೂನ್ 21 ರಿಂದ ಜುಲೈ 10 ರವರೆಗೆ ನಡೆಯಲಿದ್ದು, ವಾಹನ ಸವಾರರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಡಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭ ಅವರು ಕರೆ ನೀಡಿದ್ದಾರೆ. ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥ ಪಡಿಸುವ ಈ ವಿಶೇಷ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

**ಹಳೆಯ ಬಾಕಿ ಪ್ರಕರಣಗಳ ವಿಲೇವಾರಿಗೆ ಮುಕ್ತ ಅವಕಾಶ**

ವಾಹನ ಸವಾರರು ತಮ್ಮ ಮೇಲಿರುವ ಭಾರಿ ಮೊತ್ತದ ದಂಡದ ಹೊರೆಯನ್ನು ಅರ್ಧದಷ್ಟು ಕಡಿಮೆ ಮಾಡಿಕೊಳ್ಳಲು ಸರ್ಕಾರವೇ ಈ ರಿಯಾಯಿತಿ ನೀಡಿದೆ. ಸಾರ್ವಜನಿಕರು ಯಾವುದೇ ರೀತಿಯ ಭಯ ಪಡದೆ ಸ್ವಯಂಪ್ರೇರಿತರಾಗಿ ಬಂದು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ನ್ಯಾಯಾಧೀಶರು ತಿಳಿಸಿದರು. ಈ ಅಭಿಯಾನದ ಮೂಲಕ ಸಾರಿಗೆ ಮತ್ತು ಸಂಚಾರ ಪೊಲೀಸ್ ಇಲಾಖೆಯಲ್ಲಿ ಹಲವು ವರ್ಷಗಳಿಂದ ಬಾಕಿ ಉಳಿದಿರುವ ಹಳೆಯ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದೆ.

**ವಿವಿಧ ದಾಖಲಾತಿ ರಹಿತ ಪ್ರಕರಣಗಳ ಇತ್ಯರ್ಥಕ್ಕೆ ಸಾರಿಗೆ ನಿರೀಕ್ಷಕರ ಸಲಹೆ**

ಸಾರಿಗೆ ಮೋಟಾರ್ ನಿರೀಕ್ಷಕರಾದ ಮೋಹನ್ ಕುಮಾರ್ ಅವರು ಮಾತನಾಡಿ, ಮೋಟಾರು ವಾಹನ ಕಾಯ್ದೆ ಉಲ್ಲಂಘನೆಗಾಗಿ ಸಾರಿಗೆ ಇಲಾಖೆಯಿಂದ ದಾಖಲಾಗಿರುವ ಪ್ರಕರಣಗಳಿಗೆ ಇದು ಅನ್ವಯಿಸಲಿದೆ ಎಂದರು. ವಾಹನ ಚಾಲನಾ ಪರವಾನಗಿ (ಡಿಎಲ್), ಇನ್ಶೂರೆನ್ಸ್, ಎಮಿಷನ್ ಟೆಸ್ಟ್ (ಹೊಗೆ ತಪಾಸಣೆ) ಸೇರಿದಂತೆ ಮತ್ತಿತರ ಅಗತ್ಯ ದಾಖಲಾತಿಗಳಿಲ್ಲದೆ ನಿಯಮ ಉಲ್ಲಂಘಿಸಿ ದಂಡ ಬಾಕಿ ಉಳಿಸಿಕೊಂಡವರು ಈ ಸಂದರ್ಭದಲ್ಲಿ ಸುಲಭವಾಗಿ ತಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು. ಮೇ 2026 ಕ್ಕಿಂತ ಮುಂಚಿತವಾಗಿ ಪೊಲೀಸ್ ಇಲಾಖೆಯಿಂದ ದಾಖಲಾಗಿರುವ ಎಲ್ಲಾ ಬಾಕಿ ಟ್ರಾಫಿಕ್ ಇ-ಚಲನ್ ದಂಡಗಳಿಗೂ ಈ ಶೇ. 50 ರಷ್ಟು ರಿಯಾಯಿತಿ ದೊರೆಯಲಿದೆ ಎಂದು ಅವರು ಸ್ಪಷ್ಟಪಡಿಸಿದರು.

ಈ ಮಹತ್ವದ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಸಾರಿಗೆ ಇಲಾಖೆಯ ಅಧೀಕ್ಷಕರಾದ ಮೋಹನ್, ಸಲೀಮಾ ಹಾಗೂ ಪ್ರಧಾನ ಕಾನೂನು ನೆರವು ಅಭಿರಕ್ಷಕರಾದ ಮೈಮೂನ ಉಪಸ್ಥಿತರಿದ್ದರು. ಇವರೊಂದಿಗೆ ಜಿಲ್ಲೆಯ ಹಲವಾರು ಹಿರಿಯ ವಕೀಲರು ಹಾಗೂ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಆಡಳಿತ ಸಹಾಯಕರಾದ ಜಯಪ್ಪ ಅವರು ನೆರೆದಿದ್ದ ಗಣ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ, ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರೂಪಿಸಿದರು.

## ಸುಸಜ್ಜಿತ ಕಟ್ಟಡ ಬಾಡಿಗೆಗೆ ಒದಗಿಸಿ

ಮಡಿಕೇರಿ: ನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯಾಚರಣೆಯಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಮಡಿಕೇರಿ ಇಲ್ಲಿಗೆ 100 ಸಂಖ್ಯಾಬಲಕ್ಕೆ ಅನುಗುಣವಾಗಿ ಸುಸಜ್ಜಿತ ಕಟ್ಟಡ ಬಾಡಿಗೆಗೆ ಬೇಕಾಗಿದೆ. ಕಟ್ಟಡವು ಮೂಲಭೂತ ಸೌಕರ್ಯಗಳಾದ ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ಕಾಂಪೌಂಡ್, ಶೌಚಾಲಯ, ಸ್ನಾನದ ಗೃಹಗಳನ್ನು ಹೊಂದಿರಬೇಕು. ಕಟ್ಟಡವು ವಿದ್ಯುತ್ ಕಂಬಗಳಿಂದ ಸೂಕ್ತವಾದ ಅಂತರದಲ್ಲಿರಬೇಕು ಹಾಗೂ ಕಟ್ಟಡವು ವಿದ್ಯುತ್ ತಂತಿಗಳಿಂದ ಸುರಕ್ಷತೆ ಕಾಯ್ದುಕೊಂಡಿರಬೇಕು. ಕಟ್ಟಡಕ್ಕೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಹೊಂದಿರುವ ಆಸಕ್ತಿ ಇರುವ ಕಟ್ಟಡ ಮಾಲೀಕರು ಮಾಹಿತಿಗೆ ಮೊ.ಸಂ. 9632225847 ನ್ನು ಸಂಪರ್ಕಿಸಬಹುದು ಎಂದು ಮಡಿಕೇರಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ದೀಪಕ್ ಅವರು ತಿಳಿಸಿದ್ದಾರೆ.

# ದೈಹಿಕ ಸದೃಡತೆಗೆ ಯೋಗಾ




ಚಾಮರಾಜನಗರ: ತಾಲ್ಲೂಕಿನ ಹರವೆ ಗ್ರಾಮದ ಚನ್ನಬಸವೇಶ್ವರ ಆಂಗ್ಲಮಾಧ್ಯಮ ಶಾಲೆಯಲ್ಲಿ 12 ನೇ ಅಂತಾರಾಷ್ಟ್ರಿಯ ಯೋಗ ದಿನಾಚರಣೆ ಆಚರಿಸಲಾಯಿತು.

ಯೋಗದಿನಾಚರಣೆಗೆ ಚಾಲನೆ ನೀಡಿದ ಹರವೆ ವಿರಕ್ತಮಠದ ಸರ್ಪಭೂಷಣಸ್ವಾಮೀಜಿ ಮಾತನಾಡಿ, ಯೋಗ ಪ್ರಾಚೀನಕಲೆಯಾಗಿದ್ದು. ಇದು ನಮ್ಮಗಳ ಮಾನಸಿಕ ಹಾಗೂ ದೈಹಿಕ ಸದೃಡತೆಗೆ ಸಹಕಾರಿಯಾಗಲಿದೆ. ಏಕಾಗ್ರತೆ ಜತೆಗೆ ವ್ಯಕ್ತಿಯ ವ್ಯಕ್ತಿತ್ವ ವಿಕಸನವಾಗಲು ಯೋಗಾಭ್ಯಾಸ ನೆರವಾಗಲಿದೆ. ಆಧುನಿಕತೆಯ ಕಾಲಘಟ್ಟದಲ್ಲಿ ಮನುಷ್ಯ ಸದಾ ಒತ್ತಡದಿಂದ ಬದುಕುತ್ತಿದ್ದಾನೆ. ಇದರಿಂದ ಪಾರಾಗಲು ನಾವು ದಿನದಲ್ಲಿ ಒಂದು ಗಂಟೆಯಾದರೂ ಯೋಗ ಮಾಡುವ ಮನೋಭಾವ ರೂಢಿಸಿಕೊಳ್ಳಬೇಕು ಎಂದರು.

ಶಾಲಾವಿದ್ಯಾರ್ಥಿಗಳು ಕೂಡಾ ಓದುವುದರ ಜತೆಗೆ ಯೋಗ ಮಾಡುವ ಪ್ರವೃತ್ತಿ ಹೊಂದಬೇಕು, ಭಾರತ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು. ಅದರ ಮಹತ್ವ ಎಷ್ಟಿದೆ ಎಂಬುದನ್ನು ಪ್ರತಿಯೊಬ್ಬ ನಾಗರೀಕರು ಅರಿಯಬೇಕು ಎಂದರು. ಮೈಸೂರು ಮಹಾರಾಜ ಆಯು ರ್ವೇದ ಕಾಲೇಜಿನ ಯೋಗ ಶಿಕ್ಷಕ ಡಾ. ಸುಪ್ರಿಯಾ," ವಿದ್ಯಾರ್ಥಿಗಳ ಜತೆ ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿ. ನೆರೆದಿದ್ದವರ ಗಮನ ಸೆಳೆದರು. ಚನ್ನಬಸವೇಶ್ವರ ಪ್ರತಿಷ್ಠಾನದ ಕಾರ್ಯದರ್ಶಿ ಎಚ್.ಎಸ್.ಗಿರೀಶ್, ಪ್ರೌಢ ಶಾಲಾ ಮುಖ್ಯ ಶಿಕ್ಷಕ ರಾಜು, ಪೋಷಕರಾದ ಮೂಡ್ನಾಕೂಡು ಮಹೇಶ್, ಹಿರಿಯ ಪ್ರಾಥಮಿಕ ಶಾಲಾಶಿಕ್ಷಕರು. ಸಿಬ್ಬಂದಿ ಹಾಜರಿದ್ದರು.

# ವಕೀಲರ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ಯಳಂದೂರರು, ತಾಲೂಕು ವಕೀಲರ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎಂ.ಜೈ ಶಂಕರ್, ಉಪಾಧ್ಯಕ್ಷರಾಗಿ ಎಂ.ಮುತ್ತುರಾಜು ಬೂದಿತಿಟ್ಟು, ಕಾರ್ಯದರ್ಶಿ ಯಾಗಿ ಜಿ.ಎನ್.ಸಂಪತ್ ಅವಿರೋಧವಾಗಿ ಆಯ್ಕೆಯಾದರು.

ಇದಕ್ಕೂ ಮುನ್ನ ವಕೀಲರ ಸಂಘದ ಸಭಾ ಭವನದಲ್ಲಿ ಸಂಘದ ಅಡಕ್ ಸಮಿತಿ ಅಧ್ಯಕ್ಷರಾದ ಗೌಡಹಳ್ಳಿ ಮಹೇಶ್ ಅವರ ಅಧ್ಯಕ್ಷತೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆಗೆ ಸಂಬಂಧಿಸಿದಂತೆ ಸಭೆ ನಡೆಯಿತು. ಈ ಸಭೆಯಲ್ಲಿ ಸರ್ವಸದಸ್ಯರು ಅವಿ ರೋಧ ಆಯ್ಕೆಗೆ ಸೂಚಿಸಿದ್ದರಿಂದ ಅಂತಿಮವಾಗಿ ಜೈಶಂಕರ್ ಅಧ್ಯಕ್ಷರಾಗಿಯೂ, ಎಂ.ಮುತ್ತುರಾಜು ಬೂದಿತಿಟ್ಟು ಉಪಾಧ್ಯಕ್ಷರಾಗಿ, ಜಿ.ಎನ್.ಸಂಪತ್ ಕಾರ್ಯದರ್ಶಿಯಾಗಿ, ಮೇಘ ಜಂಟಿ ಕಾರ್ಯದರ್ಶಿಯಾಗಿ, ರಂಜಿತ ಖಜಾಂಚಿಯಾಗಿ ಆಯ್ಕೆ ಯಾದರು. ನೂತನ ಪದಾಧಿಕಾರಿಗಳಿಗೆ ಹಿರಿಯ ವಕೀಲರಾದ ಬಿ.ಎಂ.ಮಹದೇವಸ್ವಾಮಿರವರು ಪ್ರತಿಜ್ಞಾ ವಿಧಿ ಬೋಧಿಸಿದರು.ನಂತರ ಮಾತನಾಡಿದ ನೂತನ ಅಧ್ಯಕ್ಷ ಎಂ.ಜೈಶಂಕರ್, ತಾಲೂಕು ವಕೀಲರ ಸಂಘಕ್ಕೆ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದ್ದು, ಸಂಘದ ಸರ್ವಸದಸ್ಯರಿಗೂ ಆಭಾರಿಯಾಗಿರುತ್ತೇನೆ. ನಮ್ಮ ಅವಧಿಯಲ್ಲಿ ಯಳಂ ದೂರು ವಕೀಲರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು. ವಕೀಲರು ಹಾಗೂ ಸಿಬ್ಬಂದಿಗಳ ಜೊತೆಗೆ ಉತ್ತಮ ಬಾಂಧವ್ಯ ವೃದ್ಧಿಸಿ ಯಳಂದೂರು ವಕೀಲರ ಸಂಘವನ್ನು ಮಾದ 'ರಿಯಾಗಿ ರೂಪಿಸಲು ಶ್ರಮಿಸಲಾಗುವುದು ಎಂದರು.

ಉಪಾಧ್ಯಕ್ಷ ಎಂ.ಮುತ್ತುರಾಜು ಮಾತನಾಡಿ, ಯಳಂದೂರು ವಕೀಲರ ಸಂಘದ ಅಭಿವೃದ್ಧಿಯೇ ನಮ್ಮ ಪ್ರಥಮ ಆದ್ಯತೆಯಾಗಿದ್ದು, ಸಂಘದ ಅಭಿವೃದ್ಧಿಗೆ ಉತ್ತಮ ಕೆಲಸ ಮಾಡುವಂತೆ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಸದಸ್ಯರ ನಿರೀಕ್ಷೆಯನ್ನೂ ಮೀರಿ ಯಳಂದೂರು ವಕೀಲರ ಸಂಘದ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡಲಾಗುವುದು ಎಂದರು. ಕಾರ್ಯದರ್ಶಿ ಜಿ.ಎನ್.ಸಂಪತ್ ಮಾತನಾಡಿ, ಯಳಂದೂರು ವಕೀಲರ ಸಂಘವನ್ನು ಮಾದರಿಯಾಗಿ ರೂಪಿಸುವುದಲ್ಲದೇ ಮುಂದಿನ ದಿನಗಳಲ್ಲಿ ಉತ್ತಮ ಕೆಲಸ ಕಾರ್ಯಗಳನ್ನು ಮಾಡುವ ಮೂಲಕ ಸಂಘವನ್ನು ಬಲಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ವಕೀಲರಾದ ಬಿ.ಎಂ.ಮಹದೇವಸ್ವಾಮಿ, ಸಿ.ನಾಗರಾಜ್, ಸಿ.ಸಿದ್ದರಾಜು, ಎನ್.ಕೃಷ್ಣ, ರಾಜಣ್ಣ, ಸಿ.ಮಹದೇವಸ್ವಾಮಿ, ಶ್ರೀನಿವಾಸಮೂರ್ತಿ, ಶಶಿಧರ, ರವೀಶ, ಅಶ್ವಿನ್ ಕುಮಾರ್, ಎಂ.ನಾಗರಾಜ್, ನಾಗರತ್ನ, ಪರಶಿವಮೂರ್ತಿ, ನಂಜುಂಡಸ್ವಾಮಿ, ಕಾಂತರಾಜು, ಚಂದನಾ, ಎಂ.ಕುಮಾರಸ್ವಾಮಿ, ಶಾಂತರಾಜು, ಆರ್.ಕುಮಾರಸ್ವಾಮಿ, ಕುಮಾರ್ ವೈ.ಸಿ ಇದ್ದರು.

# ಯೋಗದ ಜಾಗೃತಿ ಮೂಡಿಸೋಣ

## ಜಿಲ್ಲಾಧಿಕಾರಿ ಶ್ರೀರೂಪ ಕರೆ | 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಚಾಮರಾಜನಗರ: ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ 5 ರಿಂದ 10 ನಿಮಿಷಗಳ ಕಾಲ ಯೋಗ ಮತ್ತು ಧ್ಯಾನ ಮಾಡುವ ಮೂಲಕ ಅದನ್ನು ತಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ಸಲಹೆ ನೀಡಿದ್ದಾರೆ.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಆಯುಷ್ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳು ಮತ್ತು ಯೋಗ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಬಾರಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ವಿಶೇಷ ಘೋಷವಾಕ್ಯದೊಂದಿಗೆ ಯೋಗ ದಿನವನ್ನು ಆಚರಿಸಲಾಗುತ್ತಿದ್ದು, ಚಿಕ್ಕವರಿಂದ ವೃದ್ಧರವರೆಗೂ ಯೋಗದ ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

**ಪರೀಕ್ಷಾ ಒತ್ತಡ ನಿವಾರಣೆಗೆ ಯೋಗವೇ ಸಂಜೀವಿನಿ**

ಯೋಗವು ದೇಹ ಮತ್ತು ಮನಸ್ಸಿಗೆ ನವಚೈತನ್ಯ ತುಂಬುವ ಮೂಲಕ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಪೂರಕ ಶಕ್ತಿ ಒದಗಿಸಲಿದೆ ಎಂದು ಜಿಲ್ಲಾಧಿಕಾರಿಗಳು ಅಭಿಪ್ರಾಯಪಟ್ಟರು. ಇತ್ತೀಚಿನ ದಿನಗಳಲ್ಲಿ ದೇಶದ ಪ್ರತಿಷ್ಠಿತ ವ್ಯಕ್ತಿಗಳು ಸಹ ಜಿಮ್ ಬಿಟ್ಟು ಯೋಗದ ಕಡೆಗೆ ಒಲವು ತೋರುತ್ತಿದ್ದಾರೆ. ಇನ್ನು ಎಸ್‌ಎಸ್‌ಎಲ್‌ಸಿ, ನೀಟ್, ಜೆಇಇ ನಂತಹ ಪರೀಕ್ಷೆಗಳ ಒತ್ತಡ ತಾಳಲಾರದೆ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಇಂತಹ ವಿದ್ಯಾರ್ಥಿಗಳು ಪರೀಕ್ಷಾ ಒತ್ತಡ ನಿವಾರಣೆಗಾಗಿ ದಿನನಿತ್ಯ ಕನಿಷ್ಠ 10 ನಿಮಿಷ ಯೋಗ ಮಾಡಿದರೆ ಏಕಾಗ್ರತೆ ಹೆಚ್ಚಿ, ಯಶಸ್ಸು ತಾನಾಗಿಯೇ ಒಲಿಯಲಿದೆ. ಒತ್ತಡ ನಿರ್ವಹಣೆಗೆ ಯೋಗಕ್ಕಿಂತ ಪರಿಣಾಮಕಾರಿ ಪರ್ಯಾಯ ಮಾರ್ಗ ಬೇರೊಂದಿಲ್ಲ ಎಂದು ಅವರು ಕಿವಿಮಾತು ಹೇಳಿದರು.

ಈ ಭವ್ಯ ಸಮಾರಂಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ನಗರಸಭೆ ಪೌರಾಯುಕ್ತ ಪರಶುರಾಮ್ ಛಲವಾದಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಪಿ. ಸತೀಶ್‌ಕುಮಾರ್, ಆಯುಷ್ ವೈದ್ಯಾಧಿಕಾರಿ ಪುನೀತ್ ಬಾಬು ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚಂದ್ರಪಾಟೀಲ್ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



### ಆಕರ್ಷಕ ಸಾಮೂಹಿಕ ಯೋಗ ಪ್ರದರ್ಶನ

ವೇದಿಕೆ ಕಾರ್ಯಕ್ರಮದ ಮುಕ್ತಾಯದ ನಂತರ ಮೈದಾನದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಆಯೋಜಿಸಲಾಗಿತ್ತು. ಮೈಸೂರಿನ ಆಯುಷ್ ಪ್ರಕೃತಿ ಚಿಕಿತ್ಸಾಲಯದ ವೈದ್ಯರಾದ ಡಾ. ಮನೋಜ್ ಹಾಗೂ ವಿದ್ಯಾರ್ಥಿಗಳಾದ ಗಗನ್ ಮತ್ತು ರಜತ್ ಅವರು ವಿವಿಧ ಕಠಿಣ ಯೋಗಭಂಗಿಗಳನ್ನು ಪ್ರದರ್ಶಿಸಿ ನೆರೆದಿದ್ದವರ ಗಮನ ಸೆಳೆದರು. ಜಿಲ್ಲಾಧಿಕಾರಿ ಶ್ರೀರೂಪ ಸೇರಿದಂತೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ನೂರಾರು ಗಣ್ಯರು, ಅಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಸಾಮೂಹಿಕವಾಗಿ ಯೋಗಾಭ್ಯಾಸ ಮಾಡಿ ಯೋಗ ದಿನವನ್ನು ಯಶಸ್ವಿಗೊಳಿಸಿದರು.

### ತೋಳ್ಬಲ, ಮನೋಬಲ ವೃದ್ಧಿಗೆ ಯೋಗದ ಅಗತ್ಯ

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್ ಅವರು, ಮಾನವನ ಜೀವನದಲ್ಲಿ ಯೋಗಕ್ಕೆ ಸಾಕಷ್ಟು ಬಗೆಯ ಪರಿಕಲ್ಪನೆಗಳಿವೆ ಎಂದರು. ಪೂಜೆ ಮಾಡಿದರೆ ಅದು ಭಕ್ತಿಯೋಗ, ಭೌತಿಕವಾಗಿ ದೇಹ ದಂಡಿಸಿದರೆ ಹಠಯೋಗ, ನಿಷ್ಠೆಯಿಂದ ಕಾಯಕ ಮಾಡಿದರೆ ಕರ್ಮಯೋಗ ಎಂದು ವಿವರಿಸಿದ ಅವರು, ನಾವೆಲ್ಲರೂ ದೈನಂದಿನ ಜೀವನದಲ್ಲಿ ಯಾವುದೋ ಒಂದು ರೀತಿಯಲ್ಲಿ ಯೋಗಕ್ಕೆ ಶರಣಾಗಿದ್ದೇವೆ ಎಂದರು. ಮನುಷ್ಯ ಆರೋಗ್ಯಯುತ ಜೀವನ ನಡೆಸಲು ತೋಳ್ಬಲ, ಆತ್ಮಬಲ ಹಾಗೂ ಮನೋಬಲದ ಅಗತ್ಯವಿದ್ದು, ಇವುಗಳ ವೃದ್ಧಿಗೆ ಯೋಗ ಅತ್ಯಂತ ಅವಶ್ಯಕವಾಗಿದೆ. ಯೋಗವು ದೇಹವನ್ನು ಹಾಗೂ ಧ್ಯಾನವು ಮನಸ್ಸನ್ನು ನಿಯಂತ್ರಿಸುವುದರಿಂದ ವಿದ್ಯಾರ್ಥಿಗಳು ಓದಿನಲ್ಲಿ ಏಕಾಗ್ರತೆ ಸಾಧಿಸಲು ಯೋಗವನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

# ಎಸ್.ಡಿ.ಪಿ.ಐ ಬಲವರ್ಧನೆ, ಜಿಲ್ಲಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ



**ರಾಮನಗರ:** ಎಸ್.ಡಿ.ಪಿ.ಐ ಸಂಘಟನೆಯನ್ನು ಜಿಲ್ಲೆಯಲ್ಲಿ ಮತ್ತಷ್ಟು ಬಲಪಡಿಸಲು ಸಂಘಟನೆಯ ಕಾರ್ಯಕರ್ತರು ಕೈಗೊಂಡಿದ್ದಾರೆ.

ನಗರದಲ್ಲಿರುವ ಹೀನಾ ಪ್ಯಾಲೆಸ್‌ನಲ್ಲಿ ನಡೆದ ಜಿಲ್ಲಾ ಪ್ರತಿನಿಧಿ ಸಮಿತಿಯಲ್ಲಿ (ಡಿ.ಆರ್.ಸಿ 2026) ಸಂಘಟನೆಯ ವಿಚಾರದಲ್ಲಿ ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಅಕ್ರಂ ಮೌಲಾನಾ ಹಾಗೂ ರಾಜ್ಯ ಖಜಾಂಚಿ ಮಜೀದ್ ಖಾನ್ (ಮೈಸೂರು) ಉಪಸ್ಥಿತರಿದ್ದು, ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಮಾರ್ಗದರ್ಶನ ನೀಡಿದರು.

ಎಸ್.ಐ.ಆರ್ ಬಗ್ಗೆ ಜನಜಾಗೃತಿ

ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ ಮತ್ತು ಕನಕಪುರ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ಜನಸಾಮಾನ್ಯರ ಪ್ರಮುಖ ಸಮಸ್ಯೆಗಳ ಕುರಿತು ಸಮಗ್ರ ಚರ್ಚೆ ನಡೆದು, ಅವುಗಳ ಪರಿಹಾರಕ್ಕಾಗಿ ಹಲವು ಮಹತ್ವದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಪ್ರಸ್ತುತ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್.ಐ.ಆರ್) ವಿಷಯದ ಕುರಿತು ವಿಸ್ತೃತ ಚರ್ಚೆ ನಡೆಸಿ, ಜನಜಾಗೃತಿ ಹಾಗೂ ಸಂಘಟನಾ ಚಟುವಟಿಕೆಗಳನ್ನು ತೀವ್ರಗೊಳಿಸುವ ಬಗ್ಗೆ ತೀರ್ಮಾನಿಸಲಾಯಿತು.

ಇದೇ ವೇಳೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಯಶಸ್ವಿಯಾಗಿ ಎದುರಿಸಿ ಗೆಲುವು ಸಾಧಿಸುವ ನಿಟ್ಟಿನಲ್ಲಿ ಪಕ್ಷದ ಕಾರ್ಯತಂತ್ರ, ಯೋಜನೆಗಳು ಹಾಗೂ ಸಂಘಟನಾ ಬಲವರ್ಧನೆ ಕುರಿತು ಚರ್ಚೆ ನಡೆಸಲಾಯಿತು. ಸಭೆಯು ಪಕ್ಷದ ಮುಂದಿನ ರಾಜಕೀಯ ಮತ್ತು ಸಂಘಟನಾ ಚಟುವಟಿಕೆಗಳಿಗೆ ಹೊಸ ದಿಕ್ಕು ನೀಡುವಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ಜಿಲ್ಲೆಯಾದ್ಯಂತ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸುವ ಸಂಕಲ್ಪದೊಂದಿಗೆ ಸಮಾರೋಪಗೊಂಡಿತು. ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಾದ ರಾಮನಗರ, ಚನ್ನಪಟ್ಟಣ, ಕನಕಪುರ ಹಾಗೂ ಮಾಗಡಿ ಘಟಕಗಳ ಜಿಲ್ಲಾ ಮತ್ತು ವಿಧಾನಸಭಾ ಮಟ್ಟದ ನಾಯಕರು ಹಾಗೂ ಪ್ರತಿನಿಧಿಗಳು ಭಾಗವಹಿಸಿದ್ದರು.

# ರೋಟರಿಗೆ ಹೈಯೆಸ್ಟ್ ಪ್ರೋಗ್ರಾಮ್ ಪ್ರಾಜೆಕ್ಟ್ ಪ್ರಶಸ್ತಿ




ಚಾಮರಾಜನಗರ, ಚಾಮರಾಜನಗರ ರೋಟರಿ ಸಂಸ್ಥೆಗೆ ಡೈಮಂಡ್ ಪ್ಲಸ್ ಪ್ರಶಸ್ತಿ, ಹೈಯೆಸ್ಟ್ ಪ್ರೋಗ್ರಾಮ್ ಪ್ರಾಜೆಕ್ಟ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಯೂನಿಯನ್ ರೆಸಾರ್ಟ್ ನಲ್ಲಿ ಅಂತರಾಷ್ಟ್ರೀಯ 3181 ರೋಟರಿ ಸಂಸ್ಥೆ ವತಿಯಿಂದ ನಡೆದ ಅನುಬಂಧ ಅವಾರ್ಡ್ಸ್ ನೈಟ್ಸ್ ಕಾರ್ಯಕ್ರಮದಲ್ಲಿ ಜಿಲ್ಲಾ ಗೌರ್ನರ ಪಿ.ಕೆ.ರಾಮಕೃಷ್ಣ, ಸತೀಶ್ ಬೌಲರ್, ಯಶ್ವಸಿ ಸೋಮಶೇಖರ್, ವಿಕ್ರಂದತ್ತ ಅವರು ಚಾಮರಾಜನಗರ ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರುಗೆ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಸ್ವೀಕರಿಸಿದ ಕಾಗಲವಾಡಿ ಚಂದ್ರು ಮಾತನಾಡಿ, ನಮ್ಮ ಒಂದು ವರ್ಷದ ಅವಧಿಯಲ್ಲಿ 303 ಸೇವಾ ಕಾರ್ಯಕ್ರಮಗಳನ್ನು ಮಾಡಲಾಗಿತ್ತು ಅದನ್ನು ಗುರುತಿಸಿ ಅಂತರಾಷ್ಟ್ರೀಯ ರೋಟರಿಸಂಸ್ಥೆಯು 3181 ರ ಡೈಮಂಡ್ ಪ್ಲಸ್ ಪ್ರಶಸ್ತಿ, ಅತಿಹೆಚ್ಚು ಕಾರ್ಯಕ್ರಮ ಪ್ರಶಸ್ತಿ ನೀಡಿ ಗೌರವಿಸಿರುವುದು ಸಂತಸವಾಗಿದ್ದು, ಜಿಲ್ಲೆಗೆ ಹೆಮ್ಮೆ ವಿಚಾರವಾಗಿದೆ ಎಂದು ತಿಳಿಸಿದರು.

ಚಾಮರಾಜನಗರ ರೋಟರಿ ಸಂಸ್ಥೆಯಲ್ಲಿ ನಮ್ಮ ಅವಧಿಯಲ್ಲಿ ಹೆಚ್ಚಿನ ಸೇವಾ ಕಾರ್ಯಕ್ರಮಗಳ ಮಾಡಲು ಸಹಕರಿಸಿದ ರೋಟರಿ ಸಂಸ್ಥೆ ಪದಾಧಿಕಾರಿಗಳು, ಸದಸ್ಯರು, ಇತರ ಸಂಘ-ಸಂಸ್ಥೆಗಳ ಮುಖ್ಯಸ್ಥರು ಹಾಗೂ ಚಾಮರಾಜನಗರ ರೋಟರಿ ಸಂಸ್ಥೆಯ ಸೇವಾ ಕಾರ್ಯಕ್ರಮಗಳನ್ನು ಗುರುತಿಸಿ ಎರಡು ಪ್ರಶಸ್ತಿಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಿಡಿಜಿ ಡಾ.ನಾಗರಾರ್ಜುನ್, ಜಿ.ಆರ್,ಆಶ್ವಥ್ ನಾರಾಯಣ್, ಪ್ರಭಾಕರ್, ಪ್ರಕಾಶ್, ಸುರೇಶ್, ಅಬ್ದುಲ್‌ಅಜೀಜ್ ದೀನಾ, ಅಂಕಶೆಟ್ಟಿ, ಶ್ರೀನಿವಾಸನ್, ರಾಮು, ಸಂಜಯ್ ಕುಮಾರ್ ಜೈನ್ ಹಾಜರಿದ್ದರು

**ಜೆ.ಎಸ್.ಎಸ್. ಮಹಿಳಾ ಕಾಲೇಜು ಆವರಣದಲ್ಲಿ**

# ಚಾಮರಾಜನಗರ: 650 ವಿದ್ಯಾರ್ಥಿಗಳಿಂದ ಏಕ ಕಾಲದಲ್ಲಿ ಯೋಗಾಭ್ಯಾಸ

ಚಾಮರಾಜನಗರ, ವಿಶ್ವ ಯೋಗ ದಿನಾಚರಣೆ ಅಂಗವಾಗಿ ನಗರದ ಜೆ.ಎಸ್.ಎಸ್ ಮಹಿಳಾ ಕಾಲೇಜು ಆವರಣದಲ್ಲಿ ಶ್ರೀಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿಯ ಯೋಗಬಂಧುಗಳು ಹಾಗೂ 650 ಕ್ಕೂ ಹೆಚ್ಚು ವಿಧ್ಯಾರ್ಥಿಗಳು ಸಾಮೂಹಿಕ ಯೋಗಭ್ಯಾಸ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು.

ನಗರದ ಶ್ರೀಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿಯ ಸಹಯೋಗದೊಂದಿಗೆ ಪ್ರತಿ ವರ್ಷದಂತೆ ಈ ಬಾರಿ 12 ನೇ ವರ್ಷದ ವಿಶ್ವ ಯೋಗ ದಿನಾಚಾರಣೆ ಕಾರ್ಯಕ್ರಮವನ್ನು ಜೆ.ಎಸ್.ಎಸ್. ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಉಮೇಶ್ ಸಮ್ಮುಖದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ

ಪ್ರಾಂಶುಪಾಲ ಉಮೇಶ್ ಮಾತನಾಡಿ, ಜೆ.ಎಸ್.ಎಸ್.ಗುರು ಪರಂಪರೆಯನ್ನು ನೆನೆದು ಇಂದು ನಮ್ಮ ಶಾಲಾ ಆವರಣದಲ್ಲಿ ಪ್ರತಿ ವರ್ಷದಂತೆ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಣೆ ಮಾಡುತ್ತಿದ್ದು, ಪ್ರತಿಯೊಬ್ಬರು ನಿತ್ಯ ಯೋಗಭ್ಯಾಸವನ್ನು ನಿರಂತರವಾಗಿ ಮಾಡುತ್ತಾ ಬಂದಲ್ಲಿ ನೀವು ತುಂಬ ಚೈತನ್ಯದಿಂದ ಇರಲು ಸಾಧ್ಯ. ಯಾವುದೇ ರಂಗದಲ್ಲಿಯೂ ಯಶಸ್ಸು ಸಾಧಿಸಲು ಸಹಕಾರಿ ಎಂದರು. ದೈನಂದಿನ ಕೆಲಸ ಕಾರ್ಯಗಳನ್ನು ಲವಲವಿಕೆಯಿಂದ ಮಾಡಲು ಯೋಗ ಸಹಕಾರಿಯಾಗಿದೆ. ಎಲ್ಲರು ಪ್ರತಿದಿನ ಕನಿಷ್ಟ ಒಂದು ಗಂಟೆಯಾದರು ಯೋಗಭ್ಯಾಸ ಮಾಡುವುದನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು.



ನಂತರ ಶ್ರೀಪತಂಜಲಿ ಯೋಗ ಶಿಕ್ಷಣಾ ಸೇವಾ ಸಮಿತಿಯ ಉಪಾಧ್ಯಕ್ಷ ಯೋಗ ದೊರೆಸ್ವಾಮಿ ಮಾತನಾಡಿ, ಭಾರತ ದೇಶವು ಇಡೀ ವಿಶ್ವಕ್ಕೆ ಯೋಗವನ್ನು ಪರಿಚಯಿಸಿದೆ. ಸಂಸ್ಕಾರ, ಸಂಘಟನೆ ಮತ್ತು ಸೇವೆ ಎಂಬ 3 ಧ್ಯೇಯಗಳನ್ನಿಟ್ಟುಕೊಂಡು ಹಲವಾರು ವರ್ಷಗಳಿಂದ ನಮ್ಮ ಸಮಿತಿ ವತಿಯಿಂದ ಉಚಿತವಾಗಿ ಯೋಗಶಿಕ್ಷಣವನ್ನು ನೀಡುತ್ತಿದ್ದೇವೆ. ಪ್ರತಿಯೊಬ್ಬ ಮನುಷ್ಯನು ಪ್ರತಿದಿನ ಕನಿಷ್ಟ ಒಂದು ಗಂಟೆಗಳ ಕಾಲ ಯೋಗಭ್ಯಾಸ ಮಾಡಿದರೆ ಈ ದೇಹಕ್ಕೆ ಹಲವಾರು ಲಾಭಗಳು ಸಿಗುತ್ತದೆ. ಪ್ರತಿದಿನ ಸದಾ ಚಟುವಟಿಕೆಯಿಂದ ಲವಲವಿಕೆಯಿಂದ ಚೈತನ್ಯದಿಂದ ಇರಲು ಯೋಗಭ್ಯಾಸ ತುಂಬ ಸಹಕಾರಿಯಾಗಿದೆ. ಆಗಾಗಿ 12 ವರ್ಷದ ಅಂತರರಾಷ್ಟಿಯ ಯೋಗ ದಿನದ ಈ ವರ್ಷದ ವೇಧಘೋಷ ?ಆರೋಗ್ಯಕರ ವೃದ್ಯಾಪ್ಯಕ್ಕಾಗಿ ಯೋಗ? ಎಂಬುದು ತುಂಬ ಸಮಯೋಚಿತವಾಗಿದೆ. ಎಲ್ಲರಿಗೂ ವಯಸ್ಸಾಗುವುದು ಸಹಜ, ಆದರೆ ಆರೋಗ್ಯವಂತರಾಗಿ ಜೀವನದ ಅಂತಿಮದಿನಗಳ ಕಡೆಗೆ ಹೋಗಬೇಕು ಎಂಬುದು ಪ್ರತಿಯೊಬ್ಬರ ಬಯಕೆ. ಆ ನಿಟ್ಟಿನಲ್ಲಿ ಎಲ್ಲಾ ವಯೋಮಾನದವರು ಸಹ ಪ್ರತಿದಿನ ಬೆಳಿಗ್ಗೆ ಒಂದು ಗಂಟೆ ಯೋಗಭ್ಯಾಸ ಮಾಡುವುದು ಭವಿಷ್ಯದ ಆರೋಗ್ಯದೃಷ್ಟಿಯಿಂದ ತುಂಬ ಒಳ್ಳೆಯದು ಹಾಗೂ ವಿದ್ಯಾರ್ಥಿಗಳು ವಿದ್ಯಾರ್ಥಿ ಜೀವನದಿಂದದೇ ರೂಢಿಸಿಕೊಂಡರೆ ತಾವುಗಳು ಮುಂದೆ ಬರುವಂತ ದಿನಗಳಲ್ಲಿ ಯಶಸ್ಸು ಸಾಧ್ಯ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಯೋಗಬಂದು ರವಿ, ದೈಹಿಕ ಶಿಕ್ಷಕ. ಮಂಜು, ಉಮೇಶ್,ಶಿಕ್ಷಕ ಕುಮಾರಸ್ವಾಮಿ, ಸುಮರಾಣಿ, ಚೈತ್ರ, ಆಯುಷ್ಯ, ಮಂಜುನಾಥ, ದೇವಕಿ, ವಿಮಲ, ವಿನೂತ, ಅಮೂಲ್ಯ, ಆಶಾರಾಣಿ, ಹಜೀರ, ಭಾನುಮತಿ ಇತರರು ಭಾಗವಹಿಸಿದ್ದರು

# ಕರ್ನಾಟಕ ಸಂಘದಿಂದ ಪಿ.ಎನ್.ಜವರಪ್ಪಗೌಡ ಪತ್ರಿಕಾ ಪ್ರಶಸ್ತಿ




**ಮಂಡ್ಯ:** ಕರ್ನಾಟಕ ಸಂಘದಿಂದ ಪಿ.ಎನ್.ಜವರಪ್ಪ ಗೌಡ ಪತ್ರಿಕಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೂ.26ರಂದು ಬೆಳಗ್ಗೆ 11 ಗಂಟೆಗೆ ನಗರದ ಕೆವಿಎಸ್ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಪೋಷಕ ತಗ್ಗಹಳ್ಳಿ ವೆಂಕಟೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭದಲ್ಲಿ 'ರಾಜಕೀಯ ಪರಿಚಾರಕ ಪಿ.ಎನ್.ಜವರಪ್ಪ ಗೌಡ' ಪುಸ್ತಕವನ್ನು ಮಾಜಿ ಸಚಿವ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಬಿಡುಗಡೆ ಮಾಡಲಾಗುವುದು ಎಂದರು.

ಪಿ.ಎನ್.ಜವರಪ್ಪಗೌಡ ಪತ್ರಿಕಾ ಪ್ರಶಸ್ತಿಗೆ ಕನ್ನಡಪ್ರಭ ಉಪಸಂಪಾದಕ ಕಾಡೇನಹಳ್ಳಿ ವೀರಣ್ಣಗೌಡ ಅವರನ್ನು ಆಯ್ಕೆ ಮಾಡಲಾಗಿದ್ದು, ಮಿತ್ರ ಫೌಂಡೇಷನ್ ಅಧ್ಯಕ್ಷ ವಿಜಯ್ ರಾಮೇಗೌಡ ಪ್ರಶಸ್ತಿ ಪ್ರದಾನ ಮಾಡುವರು. ಪಿ.ಎನ್.ಜವರಪ್ಪಗೌಡ ಅವರ ಪುತ್ರ ಪಿ.ಜೆ.ಚೈತನ್ಯಕುಮಾರ್ ಉಪಸ್ಥಿತರಿರುವರು ಎಂದು ಹೇಳಿದರು.

ಕವಯತ್ರಿ ಭವಾನಿ ಲೋಕೇಶ್ ಮಾತನಾಡಿ ತತ್ವ ಪದಗಳ ತಾತ್ವಿಕ ಸಂಗಮ ಕಾಯಕ್ರಮವು ಜೂ.24 ರಂದು ಸಂಜೆ 5 ಗಂಟೆಗೆ ನಗರದ ಕೆವಿಎಸ್ ಶತಮಾನೋತ್ಸವ ಭವನದಲ್ಲಿ ನಡೆಯಲಿದೆ. ಕೆರಗೋಡು ಶಿವಮ್ಮ ಮತ್ತು ತಂಡದಿಂದ ತತ್ವಪಗಳ ಗಾಯನದ ಮೂಲಕ ಗುರುಸ್ಮರಣೆ ನೆರವೇರಲಿದೆ ಎಂದು ಮಾಹಿತಿ ನೀಡಿದರು.

ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಅಧ್ಯಕ್ಷತೆ ವಹಿಸುವರು. ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತಾ.ಚಿಕ್ಕಣ್ಣ ಉದ್ಘಾಟಿಸುವರು. ಸಿರಿ ಇಎನ್‌ಟಿ ಕ್ಲಿನಿಕ್‌ನ ಡಾ.ಶ್ರೇಯಸ್ ಉಪಸ್ಥಿತರಿರಲಿದ್ದು, ಜನಪದ ಗಾಯಕರಾದ ಗಾಮನಹಳ್ಳಿ ಸ್ವಾಮಿ, ಹನುಮಂತು ಶಿಬಿರದ ನಿರ್ದೇಶಕರಾಗಿ ಭಾಗವಹಿಸುವರು ಎಂದು ವಿವರಿಸಿದರು.

ತತ್ವ ಪದಗಳ ತಾತ್ವಿಕ ಸಂಗಮ ಕಾಯಕ್ರಮವು ವರ್ಷವಿಡಿ ನಡೆಸುವ ಸಲುವಾಗಿ 12 ತಂಡಗಳ ಆಯ್ಕೆ ಮಾಡಲಾಗಿದೆ. ಪ್ರತಿ ತಂಡದಲ್ಲಿ 6ರಿಂದ 10 ಜನರು ಭಾಗವಹಿಸುವರು. 2ನೇಯದಾಗಿ ಕೀಲಾರ, 3ನೇಯದಾಗಿ ಮಳವಳ್ಳಿ, ನಾಲ್ಕನೇಯದಾಗಿ ಕಾರಸವಾಡಿ ತಂಡಗಳು ಭಾಗವಹಿಸಲಿವೆ ಎಂದು ಮಾಹಿತಿ ಹಂಚಿಕೊಂಡರು.

ಗೋಷ್ಠಿಯಲ್ಲಿ ಸಂಘದ ಕಾಯದರ್ಶಿ ಎಚ್.ಡಿ.ಸೋಮಶೇಖರ್, ಜನಪದ ಗಾಯಕರಾದ ಗಾಮನಹಳ್ಳಿ ಸ್ವಾಮಿ, ಹನುಮಂತು ಇದ್ದರು.

# ನವೆಂಬರ್‌ನಲ್ಲಿ ಮಂಡ್ಯ ಸಾಹಿತ್ಯ ಸಂಭ್ರಮ




**ಮಂಡ್ಯ:** ಎಂ.ಆರ್.ಎಂ ಪ್ರಕಾಶನದಿಂದ ನವೆಂಬರ್ ತಿಂಗಳಲ್ಲಿ ಆಯೋಜಿಸಲಾಗುವ ಮಂಡ್ಯ ಸಾಹಿತ್ಯ ಸಂಭ್ರಮ ಹಾಗೂ ಕಥಾ ಸ್ಪರ್ಧೆಗಾಗಿ ಕಥೆಗಳನ್ನು ಆಹ್ವಾನಿಸಲಾಗಿದೆ ಎಂದು ಪ್ರಕಾಶನದ ಪ್ರಕಾಶಕ ಚಂದ್ರಶೇಖರ ದ.ಕೋ.ಹಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂ.ಆರ್.ಎಂ ಪ್ರಕಾಶನ ಅಸ್ತಿತ್ವಕ್ಕೆ ಬಂದು ಒಂದು ವರ್ಷ ಕಳೆದಿದೆ. ಯಶಸ್ವಿಯಾಗಿ ಅರ್ಥಪೂರ್ಣ ಕಾಯಕ್ರಮಗಳ ಆಯೋಜಿಸಲಾಗಿದ್ದು, ನವೆಂಬರ್ ತಿಂಗಳಲ್ಲಿ ಮಂಡ್ಯ ಸಾಹಿತ್ಯ ಸಂಭ್ರಮದ ಹೆಸರಿನಲ್ಲಿ ಒಂದು ದಿನದ ಸಾಹಿತ್ಯ ಚಟುವಟಿಕೆಗಳನ್ನು ನಡೆಸಲಾಗುವುದು ಎಂದರು.

ಕನ್ನಡ ಕಥಾ ಜಗತ್ತಿಜ ಕಥೆಗಾರರನ್ನು ಪ್ರೋತ್ಸಾಹಿಸಿ ಉತ್ತೇಜಿಸಲು ಕಥಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಉತ್ತರ, ದಕ್ಷಿಣ ಹಾಗೂ ಕರಾವಳಿ ಭಾಗದ ಹೆಸರಾಂತ ಸಾಹಿತಿಗಳು ತೀರ್ಪುಗಾರರಾಗಿ ಕಾಯನಿರ್ವಹಿಸಲಿದ್ದಾರೆ. ವಿಜೇತ ಕಥೆಗಳಿಗೆ ಪ್ರಥಮ 10 ಸಾವಿರ, ದ್ವಿತೀಯ 7 ಸಾವಿರ, ತೃತೀಯ 5 ಸಾವಿರ ರೂ.ಗಳ ಬಹುಮಾನ ನೀಡಲಾಗುವುದು. ಆ.15ರೊಳಗೆ ಕಥೆಗಳನ್ನು ಸ್ಪರ್ಧೆಗೆ ಪ್ರಸ್ತುತಪಡಿಸಬೇಕೆಂದು ಹೇಳಿದರು.

ಕಥೆಗಾರರ ಕಥೆಗಳು ಸ್ವತಂತ್ರ ರಚನೆಯಾಗಿರಬೇಕು, ಯಾವುದೇ ಪತ್ರಿಕೆ, ನಿಯತಕಾಲಿಕ, ಸಾಮಾಜಿಕ ಮಾಧ್ಯಮ, ಬ್ಲಾಗ್, ಆಕಾಶವಾಣಿ, ದೃಶ್ಯ ಮಾಧ್ಯಮ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರವಾಗಿರಬಾದರು. ಗರಿಷ್ಠ 2 ಸಾವಿರ ಪದಗಳ ಮಿತಿಯಿರಬೇಕು. ಕಥೆ ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿರಬೇಕು. ಕಥೆಗಾರರ, ತಮ್ಮ ಹೆಸರು, ಅಂಚೆ ವಿಳಾಸ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ, ಇತ್ತೀಚೆಗಿನ ಭಾವಚಿತ್ರ ಸೇರಿದಂತೆ 80 ಪದಗಳು ಮೀರದಂತೆ ಕಿರುಪರಿಚಯವನ್ನು ಪ್ರತ್ಯೇಕವಾಗಿ ಕಥೆಯ ಜತೆ ಕಳುಹಿಸಬೇಕು. ಆ ಕಥೆಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ. ಆಯ್ಕೆಯಾಗುವ ಕಥೆಗಳನ್ನು ಪ್ರಕಾಶನವು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸಿಕೊಳ್ಳುವ ಹಕ್ಕುಗಳನ್ನು ಕಾಯ್ದಿರಿಸಿಕೊಂಡಿದೆ. ತೀರ್ಪುಗಾರರ ಮತ್ತು ಸಂಪಾದಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಕಥೆಗಳನ್ನು mrmpublications25@gmail.com ಗೆ ಕಳುಹಿಸುವುದು. ಹೆಚ್ಚಿನ ಮಾಹಿತಿಗೆ 9449495941ಗೆ ಸಂಪರ್ಕಿಸುವಂತೆ ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಸಾಹಿತಿ ಕೊತ್ತತ್ತಿ ರಾಜು, ಕನ್ನಡ ಉಪನ್ಯಾಸಕ ಉಮೇಶ್ ದಡಮಹಳ್ಳಿ, ವಕೀಲ ದೇವರಾಜ ಎಸ್.ಪಂಡಿತ್ ಇದ್ದರು.

# 24ಕ್ಕೆ ರಂಗಗೀತೆಗಳ ಕಲಿಕಾ ಶಿಬಿರ



**ಮೈಸೂರು:** ಏಕತಾರಿ ಸಾಂಸ್ಕೃತಿಕ ಸಂಘಟನೆಯಿಂದ ನಗರದ ಕಿರು ರಂಗಮಂದಿರದಲ್ಲಿ ಜೂನ್ 24ರಂದು ಸಂಜೆ 6.30ಕ್ಕೆ ರಂಗಗೀತೆಗಳ ಕಲಿಕಾ ಶಿಬಿರ ಸಮಾರೋಪ ನಡೆಯಲಿದೆ ಎಂದು ಶಿಬಿರ ನಿರ್ದೇಶಕ ಕೆ.ಕೆ.ದೇವಾನಂದ ವರಪ್ರಸಾದ್ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಂಗಭೀಷ್ಮ ಬಿ.ವಿ.ಕಾರಂತ, ಗಾಯಕ ಜನಾರ್ಧನ (ಜನ್ನಿ) ಸಂಯೋಜಿಸಿರುವ ರಂಗಗೀತೆಗಳನ್ನು ಶಿಬಿರದಲ್ಲಿ ಕಲಿಸಲಾಗಿದೆ. ಸಮಾರಂಭವನ್ನು ರಂಗಕರ್ಮಿ ಟಿ.ಎಸ್.ನಾಗಾಭರಣ ಉದ್ಘಾಟಿಸುವರು. ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ ಕುಲಪತಿ ಕೆ. ರಾಮಕೃಷ್ಣಯ್ಯ, ರಂಗಕರ್ಮಿ ಶಿವಾಜಿ ರಾವ್ ಜಾದವ್ ಉಪಸ್ಥಿತರಿರುವರು. ಶಿಬಿರಾರ್ಥಿಗಳಿಂದ ರಂಗಗೀತೆಗಳ ಗಾಯನ ನಡೆಯಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಜನಾರ್ಧನ (ಜನ್ನಿ), ಸಂಘಟನೆ ಸದಸ್ಯರಾದ ಜ್ಯೋತಿ, ಸುಮಲತಾ, ಶ್ರೀವತ್ಸ ಇದ್ದರು.

# ಕೇಂದ್ರದ ಸ್ಪಂದನೆಗೆ ವೇದಿಕೆ ಸ್ವಾಗತ



**ಮೈಸೂರು:** ದೆಹಲಿಯಲ್ಲಿ ಜನಜಾತಿ ಸುರಕ್ಷಾ ವೇದಿಕೆಯಿಂದ ಈಚೆಗೆ ನಡೆದ ಜನಜಾತಿ ಸಮಾಗಮವು ಯಶಸ್ವಿಯಾಗಿದ್ದು ನಮ್ಮ ಬೇಡಿಕೆಗಳಿಗೆ ಕೇಂದ್ರ ಸರ್ಕಾರವು ಸ್ಪಂದಿಸಿದೆ ಎಂದು ಗಿರಿಜನ ಸುರಕ್ಷಾ ವೇದಿಕೆ ಅಧ್ಯಕ್ಷ ಎ.ಜಿ.ತಮ್ಮಯ್ಯ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಾದ್ಯಂತ 500ಕ್ಕೂ ಹೆಚ್ಚು ಜನ ಜಾತಿ ಸಮುದಾಯಗಳಿಂದ ಲಕ್ಷಾಂತರ ಜನ ಭಾಗವಹಿಸಿದ್ದರು. ಅನುಸೂಚಿತ ಜನಜಾತಿಗೆ ಕಾನೂನುಬದ್ಧ ವ್ಯಾಖ್ಯಾನ ನೀಡಬೇಕು, ಮತಾಂತರ ಹೊಂದಿದವರನ್ನು ಜನಜಾತಿ ಸದಸ್ಯರೆಂದು ಪರಿಗಣಿಸಬಾರದು ಹಾಗೂ ಸಮುದಾಯದ ಸಾಂಸ್ಕೃತಿಕ ನಂಬಿಕೆ, ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗೆ ದೀರ್ಘಕಾಲಿಕ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು. ಈ ಬಗ್ಗೆ ಪ್ರಧಾನಿ ಹಾಗೂ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ರಾಜ್ಯ ಉಸ್ತುವಾರಿ ದೊಂಡು ಪಾಟೀಲ, ಗಣೇಶ್, ಪ್ರಾಂತ್ಯ ಸದಸ್ಯ ರಾಜು ಎಸ್.ಇರುಳಿಗ ಇದ್ದರು.

# ಜೂ.24ಕ್ಕೆ ಸಂಗೀತ ಸಂಜೆ ಕಾರ್ಯಕ್ರಮ




**ಮೈಸೂರು:** ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್‌ನಿಂದ 12ನೇ ವಾರ್ಷಿಕೋತ್ಸವ ಪ್ರಯುಕ್ತ ಇಲ್ಲಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ಜೂನ್ 24ರಂದು ಸಂಜೆ 5ಕ್ಕೆ ಮರೆಯದ ಮಹಾಗಾಯಕರು ಶೀರ್ಷಿಕೆಯಲ್ಲಿ ಕನ್ನಡ ಮತ್ತು ಹಿಂದಿ ಹಾಡುಗಳ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾಯಕ ರೇವಣ್ಣ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಡಿ.ರವಿಶಂಕರ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಚ್.ಪಿ.ಮಂಜುನಾಥ್ ಅಧ್ಯಕ್ಷತೆ ವಹಿಸುವರು. ಮುಖ್ಯಮಂತ್ರಿ ಚಿನ್ನದ ಪದಕ ಪಡೆದ ಅಶೋಕಪುರಂ ಠಾಣೆ ಎಎ ಎಸ್.ಶಿವಕುಮಾರ್ ಅವರನ್ನು ಗೌರವಿಸಲಾಗುವುದು. ಸರ್ವರಿಗೂ ಉಚಿತ ಪ್ರವೇಶವಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಬಿ.ಎಸ್.ಶ್ರೀಕಂಠ ರಾವ್, ಪ್ರಮಥ ಮಂಜುನಾಥ್, ರೇಣುಕಾ ಆರಾಧ್ಯ, ಗೀತಾ ಶ್ರೀಧರ್ ಇದ್ದರು.

# 5ಕೋಟಿ ರೂ. ಕಾಮಗಾರಿಗಳಿಗೆ ಶಾಸಕ ಹರೀಶ್ ಗೌಡ ಚಾಲನೆ



**ಮೈಸೂರು:** ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 5ರ ವಾರ್ಡ್ ನಂ.20 ವಿಜಯನಗರ ವ್ಯಾಪ್ತಿಯಲ್ಲಿ ಪಾಲಿಕೆಯ ಅನುದಾನದಡಿ 5.20ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಎದುರಿನ ಪಾರ್ಕ್ ನ ಯೋಗ ಮಂಟಪದ ಮುಂಭಾಗ ಗುದ್ದಲಿಪೂಜೆ ನೆರವೇರಿಸಿದರು.

ಸ್ನೇಕ್ ಶ್ಯಾಮ್ ರಸ್ತೆಯ 2ನೇ ಅಡ್ಡರಸ್ತೆ, 21ನೇ ಇ ಅಡ್ಡರಸ್ತೆ, 10ನೇ ಅಡ್ಡರಸ್ತೆಯಲ್ಲಿನ ಮೇಧಾವಿ ಕಿಂಡರ್ ಗಾರ್ಟನ್ ಹಿಂದಿನ ರಸ್ತೆ ಹಾಗೂ ಕೊಂಕಣ್ ಭವನ ಮುಂಭಾಗದ ರಸ್ತೆ ಅಭಿವೃದ್ಧಿ,2ನೇ ಹಂತದ 19ನೇ ಮುಖ್ಯರಸ್ತೆ ಹೊಂದಿಕೊಂಡಿರುವ 5ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆಯ 7, 8, 10ನೇ ಅಡ್ಡರಸ್ತೆ ಹಾಗೂ 20ನೇ ಮುಖ್ಯರಸ್ತೆಯ 1ನೇ ಅಡ್ಡರಸ್ತೆಯಲ್ಲಿ ಚರಂಡಿ ಅಭಿವೃದ್ಧಿ,2ನೇ ಹಂತದ 19ನೇ ಮುಖ್ಯರಸ್ತೆಯ ಉದ್ಯಾನವನ ಹಾಗೂ 1ನೇ ಹಂತದ ಬಸವ ಸಮಿತಿ ಪಕ್ಕದ ಉದ್ಯಾನವನದಲ್ಲಿ ಗಜಿಬೋ, ಮಕ್ಕಳ ಆಟಿಕೆ ಸಲಕರಣೆಗಳ ಅಳವಡಿಕೆ ಹಾಗೂ ಯು.ಜಿ.ಡಿ. ಕಾಮಗಾರಿಯಲ್ಲಿ ವಿಜಯನಗರ 1ನೇ ಹಂತದ 11ನೇ ಕ್ರಾಸ್, ಜನರಲ್ ತಿಮ್ಮಯ್ಯ ರಸ್ತೆಯಿಂದ ಅಂಬರೀಶ್ ರಸ್ತೆಯವರೆಗೆ ಹಾಗೂ ರಘುಲಾಲ್ ಮೆಡಿಕಲ್ ಹತ್ತಿರದ 10ನೇ ಮುಖ್ಯ ರಸ್ತೆ, 8, 10ನೇ ಅಡ್ಡರಸ್ತೆಗಳಲ್ಲಿ ಒಳಚರಂಡಿ ಕೊಳವೆಮಾರ್ಗ ಅಳವಡಿಕೆ ಹಾಗೂ ಯಂತ್ರಗುಂಡಿಗಳ ನಿರ್ಮಾಣ ಕಾಮಗಾರಿಯಾಗಿದೆ, ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೆ. ಹರೀಶ್ ಗೌಡ ಅವರು, "ವಿಜಯನಗರ ಬಡಾವಣೆಯ ಸಮಗ್ರ ಅಭಿವೃದ್ಧಿಗೆ ನಾನು ಬದ್ಧವಾಗಿದೆ. ರಸ್ತೆ, ಚರಂಡಿ, ಉದ್ಯಾನವನ ಸೇರಿದಂತೆ ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ. ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಾರ್ವಜನಿಕರ ಸಹಕಾರ ಅತ್ಯಗತ್ಯ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಹೋಟೇಲು ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ವಿಜಯನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನಂಜಯ್ಯ, ನರಸೇಗೌಡ, ಐಶ್ವರ್ಯ ಫೌಂಡೇಶನ್ ಅಧ್ಯಕ್ಷ ಗೋಪಾಲಸ್ವಾಮಿ, ಮುಖಂಡರಾದ ನಾಗರಾಜು, ಶ್ರೀನಿವಾಸ್, ಕುಮಾರ್, ಡೆಲ್ಲಿ ರವಿ, ಪಾಲಿಕೆ ಮಾಜಿ ಸದಸ್ಯರಾದ ಸುಬ್ಬಯ್ಯ, ವಾರ್ಡ್ ಅಧ್ಯಕ್ಷ ಪ್ರಶಾಂತ್, ಪಾಲಿಕೆ ಅಭಿವೃದ್ಧಿ ಅಧಿಕಾರಿ ಹಿತೇಂದ್ರ, ಇಂಜಿನಿಯರ್ ಅಭಿಲಾಷ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಶುಶ್ರುತ್, ಇಂಜಿನಿಯರ್ ನಟೇಶ್ ಸೇರಿ ಇನ್ನಿತರರು ಭಾಗವಹಿಸಿದ್ದ.

# ಅಂತರಶಿಸ್ತೀಯ ಸಂಶೋಧನೆ ಆರೋಗ್ಯ ಕ್ಷೇತ್ರದ ಭವಿಷ್ಯ ರೂಪಿಸಲಿದೆ: ಗೆಹ್ಲೋಟ್






**ನಾಗಮಂಗಲ:** ಆಧುನಿಕ ಆರೋಗ್ಯ ಕ್ಷೇತ್ರದ ಸಂಕೀರ್ಣ ಸವಾಲುಗಳನ್ನು ಎದುರಿಸಲು ಅಂತರಶಿಸ್ತೀಯ ಸಹಯೋಗ ಮತ್ತು ಅನುವಾದ ಸಂಶೋಧನೆ ಅತ್ಯಗತ್ಯವಾಗಿದ್ದು, ಆರೋಗ್ಯ ವಿಜ್ಞಾನಗಳ ಭವಿಷ್ಯವು ವಿವಿಧ ವಿಭಾಗಗಳ ಜ್ಞಾನ ಮತ್ತು ತಂತ್ರಜ್ಞಾನಗಳ ಸಮನ್ವಯದಲ್ಲಿದೆ ಎಂದು ಕರ್ನಾಟಕದ ಮಾನ್ಯ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಹೇಳಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯ, ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್ (AIMM) ವತಿಯಿಂದ ನಾಗಮಂಗಲದ ಬಿಜಿಎಸ್ ಸಭಾಂಗಣದಲ್ಲಿ ಆಯೋಜಿಸಿದ್ದ "ಅನುವಾದ ಸಂಶೋಧನೆಗಾಗಿ ಆರೋಗ್ಯ ವಿಜ್ಞಾನಗಳಲ್ಲಿ ಅಂತರಶಿಸ್ತೀಯ ವಿಧಾನಗಳು" ವಿಷಯದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರು ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಐತಿಹಾಸಿಕ ಹಾಗೂ ಸಾಮಾಜಿಕ ಕೊಡುಗೆಗಳನ್ನು ಸ್ಮರಿಸಿದ ರಾಜ್ಯಪಾಲರು "ಸುಮಾರು 1800 ವರ್ಷಗಳ ಇತಿಹಾಸ ಹೊಂದಿರುವ ಈ ಮಠವು ಶಿಕ್ಷಣ, ಆರೋಗ್ಯ, ಸಾಮಾಜಿಕ ಸಮಾನತೆ ಹಾಗೂ ರಾಷ್ಟ್ರ ನಿರ್ಮಾಣ ಕ್ಷೇತ್ರಗಳಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದೆ. 71ನೇ ಪೀಠಾಧಿಪತಿಗಳಾಗಿದ್ದ ಪರಮಪೂಜ್ಯ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಶಿಕ್ಷಣ, ಆರೋಗ್ಯ ಹಾಗೂ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದ ಅವರು, ಪ್ರಸ್ತುತ ಪೀಠಾಧಿಪತಿಗಳಾದ ಜಗದ್ಗುರು ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಾರ್ಶನಿಕ ನಾಯಕತ್ವದಲ್ಲಿ ಸಂಸ್ಥೆಯು ಉನ್ನತ ಶಿಕ್ಷಣ, ವೈಜ್ಞಾನಿಕ ಸಂಶೋಧನೆ, ಆರೋಗ್ಯ ಸೇವೆ, ಕೌಶಲ್ಯಾಭಿವೃದ್ಧಿ ಮತ್ತು ಸಮುದಾಯ ಕಲ್ಯಾಣ ಕ್ಷೇತ್ರಗಳಲ್ಲಿ ಮತ್ತಷ್ಟು ಪ್ರಗತಿ ಸಾಧಿಸುತ್ತಿದೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

"ಇಂದಿನ ಆರೋಗ್ಯ ಕ್ಷೇತ್ರದಲ್ಲಿ ಕ್ಯಾನ್ಸರ್, ಮಧುಮೇಹ, ಹೃದ್ರೋಗ, ಸಾಂಕ್ರಾಮಿಕ ರೋಗಗಳು ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳಂತಹ ಸವಾಲುಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಏಕಶಿಸ್ತೀಯ ವಿಧಾನಗಳಿಂದ ಪರಿಹಾರ ಸಾಧ್ಯವಿಲ್ಲ. ವೈದ್ಯಕೀಯ ವಿಜ್ಞಾನ, ಜೈವಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಜೈವಿಕ ಮಾಹಿತಿ ವಿಜ್ಞಾನ, ಸಾರ್ವಜನಿಕ ಆರೋಗ್ಯ ಹಾಗೂ ಎಂಜಿನಿಯರಿಂಗ್ ಕ್ಷೇತ್ರಗಳ ಪರಿಣಿತರ ಸಹಯೋಗದಿಂದ ಮಾತ್ರ ಪರಿಣಾಮಕಾರಿ ಪರಿಹಾರಗಳನ್ನು ಕಂಡುಹಿಡಿಯಲು ಸಾಧ್ಯ" ಎಂದು ಅವರು ಹೇಳಿದರು.

"ಕೃತಕ ಬುದ್ಧಿಮತ್ತೆ ಮತ್ತು ದೊಡ್ಡ ದತ್ತಾಂಶ ವಿಶ್ಲೇಷಣೆಯು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಪರಿವರ್ತನೆ ತರಲಿದ್ದು, ಆರಂಭಿಕ ರೋಗನಿರ್ಣಯ, ಔಷಧ ಅಭಿವೃದ್ಧಿ ಹಾಗೂ ರೋಗ ಮುನ್ನರಿವು ಕ್ಷೇತ್ರಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ವಿಜ್ಞಾನಿಗಳು, ವೈದ್ಯರು, ಜೈವಿಕ ತಂತ್ರಜ್ಞಾನ ತಜ್ಞರು, ಸಂಖ್ಯಾಶಾಸ್ತ್ರಜ್ಞರು ಮತ್ತು ನೀತಿ ನಿರೂಪಕರ ಸಾಮೂಹಿಕ ಪ್ರಯತ್ನದಿಂದ ದಾಖಲೆಯ ಅವಧಿಯಲ್ಲಿ ಲಸಿಕೆ ಅಭಿವೃದ್ಧಿಯಾಗಿರುವುದು ಅಂತರಶಿಸ್ತೀಯ ಸಂಶೋಧನೆಯ ಯಶಸ್ವಿ ಉದಾಹರಣೆ ಎಂದು ಅವರು ಹೇಳಿದರು.

"ವಿಕಸಿತ ಭಾರತ-2047" ಗುರಿ ಸಾಧನೆಯಲ್ಲಿ ಆರೋಗ್ಯ ಸಂಶೋಧನೆ ಪ್ರಮುಖ ಪಾತ್ರ ವಹಿಸಲಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ-2020 ಬಹುಶಿಸ್ತೀಯ ಮತ್ತು ಅಂತರಶಿಸ್ತೀಯ ಶಿಕ್ಷಣಕ್ಕೆ ಒತ್ತು ನೀಡಿರುವುದು ಸಂಶೋಧನೆಗೆ ಹೊಸ ದಿಕ್ಕುಗಳನ್ನು ನೀಡುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ICMR), ಜೈವಿಕ ತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ವಿವಿಧ ವಿಶ್ವವಿದ್ಯಾಲಯಗಳು ಜೀನೋಮಿಕ್ಸ್, ಕಾಂಡಕೋಶ ಸಂಶೋಧನೆ, ನ್ಯಾನೋಮೆಡಿಸಿನ್, ಟೆಲಿಮೆಡಿಸಿನ್ ಮತ್ತು ಡಿಜಿಟಲ್ ಆರೋಗ್ಯ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡುತ್ತಿವೆ ಎಂದು ಅವರು ಹೇಳಿದರು.

ಆಯುರ್ವೇದ, ಯೋಗ ಮತ್ತು ಆಧುನಿಕ ವೈದ್ಯಕೀಯ ವಿಜ್ಞಾನಗಳ ಸಮನ್ವಯದ ಮೂಲಕ ಸಮಗ್ರ ಆರೋಗ್ಯ ಸೇವೆಗೆ ಹೊಸ ಸಾಧ್ಯತೆಗಳು ಮೂಡುತ್ತಿದ್ದು, ಇದು ಆರೋಗ್ಯ ಕ್ಷೇತ್ರವನ್ನು ಇನ್ನಷ್ಟು ಮಾನವೀಯ ಮತ್ತು ಪರಿಣಾಮಕಾರಿಯಾಗಿಸಲಿದೆ. ಹೊಕ್ಕೈಡೋ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳ ವಿಜ್ಞಾನಿಗಳು ಹಾಗೂ ಸಂಶೋಧಕರು ಭಾಗವಹಿಸಿರುವುದು ಜಾಗತಿಕ ವೈಜ್ಞಾನಿಕ ಸಹಭಾಗಿತ್ವದ ಮಹತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ರಾಜ್ಯಪಾಲರು ಹೇಳಿದರು.

ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್ ಕಳೆದ ಒಂದು ದಶಕದಲ್ಲಿ ಬಯೋಮೆಡಿಕಲ್ ಸಂಶೋಧನೆ, ಅನುವಾದ ವೈದ್ಯಕೀಯ, ಕ್ಯಾನ್ಸರ್ ಜೀವಶಾಸ್ತ್ರ, ಮಾಲಿಕ್ಯುಲರ್ ಡಯಾಗ್ನೋಸ್ಟಿಕ್ಸ್ ಹಾಗೂ ಆರೋಗ್ಯ ನಾವೀನ್ಯತೆ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿರುವುದನ್ನು ರಾಜ್ಯಪಾಲರು ಶ್ಲಾಘಿಸಿದರು.

ಈ ಸಮ್ಮೇಳನವು ಹೊಸ ಆಲೋಚನೆಗಳಿಗೆ ಪ್ರೇರಣೆ ನೀಡುವುದರ ಜೊತೆಗೆ ಅಂತರರಾಷ್ಟ್ರೀಯ ಸಹಯೋಗ, ತಾಂತ್ರಿಕ ನಾವೀನ್ಯತೆ ಹಾಗೂ ಆರೋಗ್ಯ ವಿಜ್ಞಾನಗಳ ಪ್ರಗತಿಗೆ ಮಹತ್ವದ ಕೊಡುಗೆ ನೀಡಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಸಮ್ಮೇಳನದ ಯಶಸ್ಸಿಗೆ ಶುಭ ಹಾರೈಸಿದರು.

ಸಚಿವ ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ್, ಶಾಸಕ ಎನ್. ಚೆಲುವರಾಯಸ್ವಾಮಿ, ಪ್ರಾಧ್ಯಾಪಕ ಕೆ.ಎನ್. ಗಣೇಶ್, ಕುಲಪತಿ ಡಾ. ಎಸ್.ಎನ್. ಶ್ರೀಧರ್, ಕುಲಸಚಿವ ಡಾ. ಸಿ.ಕೆ. ಸುಬ್ಬರಾಯ, ಪ್ರಾಧ್ಯಾಪಕ ಕೆ.ಎಸ್. ರಂಗಪ್ಪ, ಜಪಾನ್‌ನ ಪ್ರಾಧ್ಯಾಪಕ ಶಿನ್-ಇಚಿರೊ ನಿಶಿಮುರಾ, ಂಖಒಓ ನಿರ್ದೇಶಕ ಡಾ. ಶೋಬಿತ್ ಸೇರಿದಂತೆ ದೇಶ-ವಿದೇಶಗಳ ವಿಜ್ಞಾನಿಗಳು, ಸಂಶೋಧಕರು, ಶಿಕ್ಷಣ ತಜ್ಞರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿವಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಆಗ್ರಹ

**ಮೈಸೂರು:** ಮೈಸೂರು ವಿಶ್ವವಿದ್ಯಾಲಯವು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಎಸ್‌ಸಿ, ಎಸ್‌ಟಿ ವಿಶೇಷ ಘಟಕದಿಂದ ಶಿಷ್ಯವೇತನ ನೀಡದೆ ತೊಂದರೆ ಮಾಡುತ್ತಿದ್ದು, ಸರ್ಕಾರವು ಕೂಡಲೇ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಂಡು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ದಲಿತ ಚಳವಳಿ ನವ ನಿರ್ಮಾಣ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಹರಿಹರ ಆನಂದ ಸ್ವಾಮಿ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2026- 27ನೇ ಸಾಲಿನ ಶಿಷ್ಯವೇತನಕ್ಕೆ 96 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅವರಲ್ಲಿ ಕೇವಲ 21 ಮಂದಿಗೆ ಮಾತ್ರ ಶಿಷ್ಯವೇತನ ಮಂಜೂರು ಮಾಡಲಾಗುವುದು ಎಂದು ಕುಲಪತಿಗಳು ಹೇಳುತ್ತಿದ್ದಾರೆ. ಈ ತಾರತಮ್ಯದ ವಿರುದ್ಧ ಕಳೆದ ಏಳು ದಿನಗಳಿಂದ ವಿದ್ಯಾರ್ಥಿಗಳು ಧರಣಿ ನಡೆಸುತ್ತಿದ್ದರೂ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಹೀಗೆಯೇ ಮುಂದುವರಿದರೆ ವೇದಿಕೆಯಿಂದ ವಿದ್ಯಾರ್ಥಿಗಳಿಗೆ ಬೆಂಬಲ ನೀಡಿ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಅಹಿಂದ ಜವರಪ್ಪ, ಪ್ರಗತಿಪರ ಚಿಂತಕರಾದ ಸೋಮಯ್ಯ ಮಲೆಯೂರು, ಕೆ.ಆರ್.ಗೋಪಾಲಕೃಷ್ಣ, ವೇದಿಕೆ ಸಂಚಾಲಕ ಸತೀಶ್ ಇದ್ದರು.



## ಕ್ರಮ ವಹಿಸಲು ರಾಜ್ಯ ಸರಕಾರ ಮುಂದಾಗಬೇಕು: ಅರುಣ್‌ಕುಮಾರ್

# ರೈತರಿಗೆ ರಸಗೊಬ್ಬರ ಪೂರೈಕೆಗೆ ಅಗತ್ಯ




**ಮಂಡ್ಯ:** ರೈತರಿಗೆ ರಸಗೊಬ್ಬರ ಪೂರೈಕೆಗೆ ಅಗತ್ಯ ಕ್ರಮ ವಹಿಸಲು ರಾಜ್ಯ ಸರಕಾರ ಮುಂದಾಗಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯ ಸಂಘಟನಾ ಕಾಯದರ್ಶಿ ಅರುಣ್‌ಕುಮಾರ್ ಒತ್ತಾಯಿಸಿದರು.

ರಾಜ್ಯದಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ನಿರಂತರ ವ್ಯತ್ಯಾಸವಾಗುತ್ತಿದೆ. ಕೃತಕ ಅಭಾವ ಸೃಷ್ಟಿಸಿ ಸಬ್ಸಿಡಿ ವ್ಯಾಪ್ತಿಎ ಬರುವ ಯೂರಿಯಾ, ಡಿಎಪಿ ರಸಗೊಬ್ಬರವನ್ನು ಅವುಗಳ ಎಂಆರ್‌ಪಿ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಪ್ರತಿವರ್ಷ ಕರ್ನಾಟದಲ್ಲಿ 2ಸಾವಿರ ಕೋಟಿ ಯಷ್ಟು ಹಣ ರೈತರಿಂದ ದೋಚಲಾಗುತ್ತಿದೆ ಎಂದು ಆರೋಪಿಸಿದರು.

ಅಗತ್ಯಕ್ಕಿಂತ ಹೆಚ್ಚಿನ ರಸಗೊಬ್ಬರ ದಾಸ್ತಾನು ನಮ್ಮ ದೇಶದಲ್ಲಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು ಉತ್ತರಿಸಿದ್ದಾರೆ. ಕೃಷಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಅಕ್ರಮ ಮಾಡುತ್ತಿರುವ ಡೀಲರ್‌ಗಳಿಗೆ ಮತ್ತು ರಸಗೊಬ್ಬರ ಕಂಪನಿಗಳಿಗೆ ಬೆಂಬಲ ನೀಡುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕಿದೆ ಎಂದು ಹೇಳಿದರು.

ರಾಜ್ಯ ಸರಕಾರ ಕೂಡಲೇ ಅಗತ್ಯವಿರುವ ರಸಗೊಬ್ಬರ ಪೂರೈಕೆ ಮಾಡಬೇಕು. ಮಾರಾಟಗಾರು ಎಫ್‌ಸಿಓ 1985ರ ಷರತ್ತುಗಳ ಪ್ರಕಾರ ಬೆಲೆ, ದಾಸ್ತಾನು ಇತ್ಯಾದಿ ಮಾಹಿತಿ ಪ್ರದರ್ಶಿಸಬೇಕು. ಎಂಆರ್‌ಪಿಗಿಂತ ಹೆಚ್ಚಿನ ಬೆಲೆಗೆ ಮಾರದಂತೆ ಕ್ರಮ ವಹಿಸಬೇಕು. ಈ ಬಗ್ಗೆ ದೂರು ನೀಡಲು ತಾಲೂಕುವಾರು ಸಹಾಯಕ ಕೃಷಿ ಅಧಿಕಾರಿಗಳ ಮೊಬೈಲ್ ಸಂಖ್ಯೆಯನ್ನು ಫಲಕದಲ್ಲಿ ನಮೂದಿಸಬೇಕು. ಕಂಪನಿಗಳು ಮಾರಾಟಗಾರರ ಅಂಗಡಿ ಬಾಗಿಲಿಗೆ ತಲುಪುವುದನ್ನು ಖಾತ್ರಿಗೊಳಿಸಬೇಕು. ಬಲವಂತವಾಗಿ ಲಿಂಕ್ ಉತ್ಪನ್ನಗಳನ್ನು ಮಾರುವುದನ್ನು ನಿಲ್ಲಿಸಬೇಕು. ನಿಯಮಗಳು ಮೀರಿದಲ್ಲಿ ಡೀಲರ್ ಪರವಾನಗಿ ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ರಸಗೊಬ್ಬರ ಅಕ್ರಮಗಳ ಬಗ್ಗೆ ಮಾಹಿತಿ ನೀಡಲು ರೈತರು ಕೆಆರ್‌ಎಸ್ ಪಕ್ಷದ 7349577130 ಸಂಖ್ಯೆಯನ್ನು ಸಂಪರ್ಕಿಸುವಂತೆ ಮನವಿ ಮಾಡಿದರು.

ಪಕ್ಷದ ಜಿಲ್ಲಾ ಉಸ್ತುವಾರಿ ರಮೇಶ್‌ಗೌಡ, ಜಿಲ್ಲಾಧ್ಯಕ್ಷ ಮಲ್ಲೇಶ್, ಪ್ರಧಾನ ಕಾಯದರ್ಶಿ ನಾಗರಾಜು, ಮುಖಂಡರಾದ ಹರೀಶ್, ಮಲ್ಲೇಶ್, ಮಲ್ಲಯ್ಯ ಇದ್ದರು.

# ತನುವೆರಡು ಮನ ಒಂದಾದ

## ದೇವರ ದಾಸಿಮಯ್ಯ ಮತ್ತು ದುಗ್ಗಳೆ ದಂಪತಿಗಳು

ಉಪೇಕ್ಷಿತ ವಚನಕಾರರು

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರೆಸುವಳು



। ವೀಣಾ ಹೇಮಂತ್‌ಗೌಡ ಪಾಟೀಲ್

ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ ಎಂದು ತನ್ನ ಪತ್ನಿಯ ಕುರಿತು ಒಂದು ವಚನದಲ್ಲಿ ಹೇಳಿದ್ದಾರೆ. ಮನೆಗೆ ಬಂದುದನ್ನು ಅರಿತು ಅವಶ್ಯಕತೆಗೆ ತಕ್ಕಂತೆ ಬಳಸುವ ಉಳಿಸುವ ಹೆಣ್ಣುಮಗಳು ದುಗ್ಗಳೆ. ಆಕೆಯ ಜೊತೆಗಿದ್ದರೆ ಬೇರೆ ಯಾರದೇ ನೆನಪು ಬರುವುದಿಲ್ಲ ಅಂದರೆ ಬಂಧು ಬಳಗವನ್ನು ಮರೆಸುವಳು ಎಂಬ ಅರ್ಥದಲ್ಲಿ ಹೇಳಿದ್ದಾರೆ. ಇಂತಹ ದುಗ್ಗಳೆಯನ್ನು ಮದುವೆಯಾಗಿ ತನ್ನ ಬದುಕಿಗೆ ಕರೆತಂದು ನಾನು ಕೂಡ ಬದುಕಿದೆನು ಎಂದು ಅತ್ಯಂತ ಸಂತಸದಿಂದ ತಮ್ಮ ವಚನದಲ್ಲಿ ಹೇಳಿಕೊಂಡಿದ್ದಾರೆ ದೇವರ ದಾಸಿಮಯ್ಯ ನವರು.


ದೇವರ/ಜೇಡರ ದಾಸಿಮಯ್ಯನವರು ಮೂಲತಃ ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಗ್ರಾಮದ ಜೇಡರ/ನೇಕಾರ ಮನೆತನದ ಸಾತ್ವಿಕ ದಂಪತಿಗಳಾದ ಶಂಕರಿ ಮತ್ತು ರಾಮಯ್ಯನವರಿಗೆ ಮಗನಾಗಿ ಚೈತ್ರ ಶುದ್ಧ ಪಂಚಮಿಯಂದು ಜನಿಸಿದರು. ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಬೇರೆ ಬೇರೆ ಎಂಬ ಹಲವಾರು ವಾದಗಳು ಇದ್ದರೂ ಅದಕ್ಕೆ ಮೂಲ ಪುರಾವೆಗಳು ಇನ್ನು ಸ್ಪಷ್ಟವಾಗಿ ದೊರಕಿಲ್ಲ ಎಂಬುದು ಸರ್ವವಿದಿತ.

ಮುದನೂರಿಗೆ ಸಮೀಪದಲ್ಲಿರುವ ಶ್ರೀಶೈಲದ ಶೈವ ಕೇಂದ್ರವಾದ ಚಂದ್ರಗುಂಡ ಶಿವಾಚಾರ್ಯ ಗುರುಕುಲದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿದರು.ವಿದ್ಯೆಯ ಜೊತೆ ಜೊತೆಗೆ ಉತ್ತಮ ಸಂಸ್ಕಾರ ಪಡೆದ ದೇವರ ದಾಸಿಮಯ್ಯನವರು ನಿಖರ ಮತ್ತು ನಿಷ್ಠುರವಾದವನ್ನು ಸೌಮ್ಯವಾಗಿ ಪ್ರತಿಪಾದಿಸುವವರಾಗಿದ್ದರು. ಶಿವ ಭಕ್ತರಾಗಿದ್ದ ದೇವರ ದಾಸಿಮಯ್ಯನವರು ದುಗ್ಗಳೆಯನ್ನು ವಿವಾಹವಾಗಿ ಸಂತೃಪ್ತ ಜೀವನವನ್ನು ಸಾಗಿಸಿದರು. ದುಗ್ಗಳೇ ಕೂಡ ಓರ್ವ ಉತ್ತಮ ಸಂಸ್ಕಾರವಂತ ಹೆಣ್ಣು ಮಗಳಾಗಿದ್ದಳು. ದಾಸಿಮಯ್ಯನವರು ದುಗ್ಗಳೆಯನ್ನು ಮೊದಲ ಬಾರಿ ನೋಡಲು ಹೋದಾಗ ಆಕೆಗೆ ಮರಳಿನಲ್ಲಿ ಪಾಯಸ ಮಾಡಲು ಹೇಳಿದರಂತೆ. ಕೊಂಚವೂ ಬೆಚ್ಚದೆ ಬೆದರದೆ ಆಕೆ ಅದನ್ನು ಮಾಡಿ ಪೂರೈಸಿದಳು. ಮುಂದೆ ಮದುವೆಯಾದ ನಂತರ ಎಂದೂ ಪತಿಗೆ ಎದುರಾಡದ ಆಕೆ ನಿಜ ಅರ್ಥದಲ್ಲಿ ಸತಿಶಿರೋಮಣಿಯಾಗಿದ್ದಳು.

ದೇವರ ದಾಸಿಮಯ್ಯನವರು ತಮ್ಮ ಮದುವೆಯಾದ ನಂತರ ಪತ್ನಿಗೆ ಒಂದು ಬಟ್ಟಲು ಮತ್ತು ಒಂದು ಸೂಜಿಯನ್ನು ತಾವು ಪ್ರತಿದಿನವೂ ಊಟಕ್ಕೆ ಕೂರುವಾಗ ತಮ್ಮ ಪಕ್ಕದಲ್ಲಿ ಇರಿಸಲು ಕೇಳಿಕೊಂಡಿದ್ದರು. ಇದನ್ನು ಆಕೆ ತನ್ನ ಜೀವಿತದವರೆಗೂ ಪಾಲಿಸಿಕೊಂಡು ಬಂದಳು. ಇದನ್ನು ಕುರಿತು ದೇವರ ದಾಸಿಮಯ್ಯನವರನ್ನು ಕೇಳಿದಾಗ ಊಟಕ್ಕೆ ಬಡಿಸುವಾಗ ಆಕೆ ಏನಾದರೂ ಅನ್ನವನ್ನು ಚೆಲ್ಲಿದರೆ ಅದನ್ನು ಸೂಜಿಯಿಂದ ಬಟ್ಟಲಿಗೆ ಹಾಕಿ ತೊಳೆದು ತಿನ್ನುವ ಯೋಜನೆ ನನ್ನದಾಗಿತ್ತು. ಆದರೆ ಅದರ ಅವಶ್ಯಕತೆ ಎಂದೂ ಬರಲಿಲ್ಲ. ದುಗ್ಗಳೆ ಎಂದೂ ಆಹಾರವನ್ನು ಬಡಿಸುವಾಗ ತಟ್ಟೆಯ ಹೊರಗೆ ಚೆಲ್ಲಲಿಲ್ಲ ಎಂದು ಬಲು ಸಾತ್ವಿಕ ಹೆಮ್ಮೆಯಿಂದ ಹೇಳಿದ್ದಾರೆ.

ಮೂಲತಃ ನೇಕಾರ ವೃತ್ತಿಯವರಾದ ದಾಸಿಮಯ್ಯನವರು

ಒಂದು ಬಾರಿ ಶಿವನಿಗೆ ಅರ್ಪಿಸಲು ಒಂದು ಬೆಲೆ ಬಾಳುವ ರೇಷ್ಮೆಯ ದಿವ್ಯಾಂಬರವನ್ನು




ನೇಯಲಾರಂಭಿಸಿದರು. ಅತ್ಯಂತ ಸುಂದರವಾಗಿ ತಯಾರಾದ ಅಂಗವಸ್ತ್ರವನ್ನು ಇನ್ನೇನು ನಾಳೆಯ ದಿನ ಅರ್ಪಿಸಬೇಕು ಎಂಬಷ್ಟರಲ್ಲಿ ಕಡು ಚಳಿಗಾಲದ ಆ ದಿನಗಳಲ್ಲಿ ಮನೆಯ ಹೊರಗೆ ಓರ್ವ ನಿರ್ಗತಿಕ ಬಂದು ನಿಂತನು. ಕಡುಚಳಿಯಿಂದ ನಡುಗುತ್ತಿದ್ದ ಮೈ ಮೇಲೆ ತುಂಡು ಬಟ್ಟೆಯನ್ನು ಮಾತ್ರ ಹೊಂದಿದ ಕೃಶದೇಹಿಯನ್ನು ಕಂಡು ಮರುಕಗೊಂಡ ದುಗ್ಗಳೆ ಮನೆಯ ಒಳಗೆ ಹೋಗಿ ಮರುದಿನ ಮಹಾದೇವನಿಗೆ ಅರ್ಪಿಸಲೆಂದು ಎತ್ತಿಟ್ಟ ದಿವ್ಯಾಂಬರವನ್ನು ತಂದು ಆತನಿಗೆ ಕೊಟ್ಟಳು. ನಡುಗುತ್ತಿದ್ದ ಆ ವ್ಯಕ್ತಿ ಆ ವಸ್ತ್ರವನ್ನು ಹೊದೆದು ಆಕೆಯನ್ನು ತುಂಬು ಹೃದಯದಿಂದ ಹಾರೈಸಿ ಹೊರಟು ಹೋದನು. ನಂತರ ಮನೆಗೆ ಬಂದ ಪತಿ ದಾಸಿಮಯ್ಯ ನವರಿಗೆ ಮಡದಿ ದುಗ್ಗಳೆ ಈ ವಿಷಯವನ್ನು ಅರುಹಿದಳು. ಎಲ್ಲವನ್ನು ಕೇಳಿದ ದಾಸಿಮಯ್ಯನವರು ಭಲೇ ದುಗ್ಗಳೇ.... ನಿನ್ನ ಭಕ್ತಿಯ ಸೇವೆ ಆ ಮಹಾದೇವನಿಗೆ ಸಂದಿತು ಎಂದು ಆಕೆಯನ್ನು ಮನದೊಂಬಿ ಹಾರೈಸಿದರು. ಇದು ಅವರಿಬ್ಬರಲ್ಲಿದ್ದ ಸಾಮರಸ್ಯಕ್ಕೆ ಮತ್ತೊಂದು ಉದಾಹರಣೆ.

ಮತ್ತೊಂದು ಘಟನೆಯಲ್ಲಿ, ಮನೆಯಲ್ಲಿ ಯಾವುದೇ ರೀತಿಯ ದವಸ ಧಾನ್ಯಗಳ ವ್ಯವಸ್ಥೆ ಇಲ್ಲದೆ ಇದ್ದಾಗ ಮನೆಗೆ ಬಂದ ಹಸಿವಿನಿಂದ ಬಳಲುತ್ತಿದ್ದ ಶಿವಶರಣರನ್ನು ಕೂರಿಸಿ ತನ್ನ ತವರಿನ ಉಡುಗೊರೆಯಾದ ಚಿನ್ನದ ಕಂಕಣವನ್ನು ಬಂಗಾರದ ಅಂಗಡಿಯಲ್ಲಿ ಮಾರಿ ಮನೆಗೆ ದವಸ ಧಾನ್ಯಗಳನ್ನು ತಂದು ಅವರಿಗೆ ಔತಣ ಮಾಡಿಸಿ ಕಳುಹಿಸಿದಳು. ಅದು ಕೂಡ ದಾಸಿಮಯ್ಯನವರ ಮೆಚ್ಚುಗೆಗೆ ಒಳಪಟ್ಟಿತು.

ದೇವರ ದಾಸಿಮಯ್ಯನವರೇ ಬರೆದ ಒಂದು ವಚನದಂತೆ

ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿಯು ಅಮೃತದೊಳು
ವಿಷ ಬೆರೆದಂತೆ ಕಾಣಾ ರಾಮನಾಥಾ

ಎಂಬಂತೆಯೇ ಅವರಿಬ್ಬರೂ ಜೀವಿಸಿದರು. ದುಗ್ಗಳೆ ಪತಿಯ ನೆರಳಿನಲ್ಲಿಯೇ ಜೀವಿಸಿದರು ಕೂಡ ತನ್ನದೇ ಆದ ಸ್ವಂತ ವ್ಯಕ್ತಿತ್ವವನ್ನು ಹೊಂದಿದ್ದಳು. ಕಾಯಕ ದಾಸೋಹಗಳಲ್ಲಿ ಪತಿಗೆ ಸರ್ವ ರೀತಿಯ ಸಹಕಾರ ನೀಡುತ್ತಿದ್ದ ಆಕೆ ದಾಸಯ್ಯ ಪ್ರಿಯ ರಾಮನಾಥ ಎಂಬ ಅಂಕಿತನಾಮದಲ್ಲಿ ವಚನಗಳನ್ನು ರಚಿಸಿದ್ದಳು.

ಬಸವಣ್ಣ ಭಕ್ತ, ಪ್ರಭುದೇವ ಜಂಗಮ
ಸಿದ್ದರಾಮಯ್ಯ ಯೋಗಿ,
ಚೆನ್ನಬಸವಣ್ಣ ಭೋಗಿ
ಅಜಗಣ್ಣ ಐಕ್ಯನಾದವನು,
ಇಂಥಹವರ ಕರುಣ ಪ್ರಸಾದವ
ಕೊಂಡು ಸತ್ತ ಹಾಗಿರಬೇಕಲ್ಲದೆ,
ತತ್ವದ ಮಾತು ತನಗೇಕರ ದಾಸಯ್ಯ
ಪ್ರಿಯ ರಾಮನಾಥ ಎಂದು ಆಕೆ ತನ್ನ ವಚನದಲ್ಲಿ ಹೇಳಿದ್ದಾಳೆ.

ಇಡೀ ಶರಣ ಸಂಕುಲವು ಈ ದಂಪತಿಗಳ ಅನ್ಯೋನ್ಯತೆಯನ್ನು, ದಾಸೋಹ, ಕಾಯಕವನ್ನು ಮೆಚ್ಚುತ್ತಿತ್ತು. ದಾಂಪತ್ಯ ಹೇಗಿರಬೇಕು ಎಚಿದರೆ ಇವರಿಬ್ಬರನ್ನು ತೋರಿಸುವಂತಿತ್ತು ಅವರ ನಡವಳಿಕೆ. ಆದ್ದರಿಂದಲೇ ಅವರಿಬ್ಬರೂ ತನುವೆರಡು ಮನವೊಂದಾದ ದಂಪತಿಗಳ ಸಾಲಿನಲ್ಲಿ ಮಂಚೂಣಿಯಲ್ಲಿ ನಿಲ್ಲುತ್ತಾರೆ. ಎಲ್ಲ ದಂಪತಿಗಳಿಗೂ ಪ್ರೇರಕ ಶಕ್ತಿಯಾಗಿದ್ದಾರೆ. ಇಚಿಥವರ ಸಚಿತತಿ ಸಾವಿರವಾಗಲಿ ಎಚಿದು ಭಕ್ತಿಯಿಚಿದ ನಮಿಸುತ್ತ ಅವರು ತೋರಿದ ಹಾದಿಯಲ್ಲಿ ಸತಿಪತಿಗಳಿಬ್ಬರು ನಡೆಯಲಿ ಎಂಬ ಆಶಯದೊಂದಿಗೆ

---

# ಶ್ರೀರಾಮನೇ ನನ್ನ ಕಕ್ಷಿದಾರನಾಗಿದ್ದಾಗ, ನಾನು ಪಾದರಕ್ಷೆ ಧರಿಸಿ ವಾದ ಮಾಡುವುದೇ, ಮೈ ಲಾರ್ಡ್



। ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಕೆಲವು ವ್ಯಕ್ತಿತ್ವಗಳು ತಮ್ಮ ಸಾಧನೆಗಳಿಂದ ಮಾತ್ರವಲ್ಲ, ತಮ್ಮ ಮೌಲ್ಯಗಳಿಂದಲೂ ಇತಿಹಾಸದಲ್ಲಿ ಅಚ್ಚಳಿಯದ ಗುರುತು ಮೂಡಿಸುತ್ತವೆ. ಜ್ಞಾನ, ಅನುಭವ, ವಿನಯ, ಭಕ್ತಿ ಮತ್ತು ಕರ್ತವ್ಯನಿಷ್ಠೆ ಒಂದೇ ವ್ಯಕ್ತಿಯಲ್ಲಿ ಒಂದಾಗುವುದು ಅಪರೂಪ. ಅಂತಹ ಅಪರೂಪದ ಮಹನೀಯರಲ್ಲಿ ಹಿರಿಯ ವಕೀಲರಾದಂತ ಕೆ. ಪರಾಸರನ್ ಅವರ ಹೆಸರು ಗೌರವದಿಂದ ಉಚ್ಚರಿಸಲ್ಪಡುತ್ತದೆ.



ಜೀವನದಲ್ಲಿ ಯಶಸ್ಸು ಗಳಿಸುವುದು ಒಂದು ಸಾಧನೆ. ಆದರೆ ಯಶಸ್ಸಿನ ಶಿಖರ ತಲುಪಿದ ಬಳಿಕವೂ ವಿನಯವನ್ನು ಉಳಿಸಿಕೊಳ್ಳುವುದು ಮತ್ತೊಂದು ದೊಡ್ಡ ಸಾಧನೆ. ಕೆ. ಪರಾಶರನ್ ಅವರು ಈ ಎರಡೂ ಗುಣಗಳನ್ನು ತಮ್ಮ ಬದುಕಿನಲ್ಲಿ ಸಾಕಾರಗೊಳಿಸಿದವರು. ಅವರು ಕೇವಲ ನ್ಯಾಯಾಲಯದ ವಾದಗಾರರಲ್ಲ; ಅವರು ಭಾರತೀಯ ಸಂಸ್ಕೃತಿ, ಧಾರ್ಮಿಕ ಮೌಲ್ಯಗಳು ಮತ್ತು ನೈತಿಕತೆಯ ಪ್ರತಿನಿಧಿಯೂ ಆಗಿದ್ದರು.

ರಾಮಜನ್ಮಭೂಮಿ ಪ್ರಕರಣವು ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಮತ್ತು ಸೂಕ್ಷ್ಮವಾದ ಪ್ರಕರಣಗಳಲ್ಲಿ ಒಂದಾಗಿದೆ. ದಶಕಗಳ ಕಾಲ ದೇಶದ ಗಮನ ಸೆಳೆದ ಈ ಪ್ರಕರಣದಲ್ಲಿ ಕಾನೂನು, ಇತಿಹಾಸ, ಧರ್ಮ, ಸಂಸ್ಕೃತಿ ಮತ್ತು ಭಾವನೆಗಳು ಒಂದಕ್ಕೊಂದು ಬೆಸೆದುಕೊಂಡಿದ್ದವು. ಇಂತಹ ಮಹತ್ವದ ಸಂದರ್ಭದಲ್ಲಿ ಶ್ರೀರಾಮನ ಪರವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸುವ ಜವಾಬ್ದಾರಿ ಕೆ. ಪರಾಶರನ್ ಅವರ ಹೆಗಲೇರಿತು.

ಆಗ ಅವರ ವಯಸ್ಸು ತೊಂಬತ್ತರ ಗಡಿಯನ್ನು ದಾಟಿತ್ತು. ಸಾಮಾನ್ಯವಾಗಿ ಆ ವಯಸ್ಸಿನಲ್ಲಿ ವಿಶ್ರಾಂತಿ ಜೀವನವನ್ನು ಆಯ್ಕೆ ಮಾಡಿಕೊಳ್ಳುವವರು ಹೆಚ್ಚು. ಆದರೆ ಅವರು ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿ ಗಂಟೆಗಟ್ಟಲೆ ನಿಂತು ವಾದ ಮಂಡಿಸಿದರು. ಅವರ ಮಾತುಗಳಲ್ಲಿ ಕೇವಲ ಕಾನೂನಿನ ಜ್ಞಾನವಿರಲಿಲ್ಲ; ನಂಬಿಕೆಯ ಶಕ್ತಿ ಮತ್ತು ಕರ್ತವ್ಯದ ಬದ್ಧತೆಯೂ ಇತ್ತು.

ಒಮ್ಮೆ ನ್ಯಾಯಾಲಯದಲ್ಲಿ ಅವರಿಗೆ ಕುಳಿತುಕೊಂಡೇ ವಾದ ಮಂಡಿಸಲು ಅವಕಾಶ ನೀಡಲಾಯಿತು. ಅದು ಅವರ ವಯಸ್ಸಿಗೆ ನೀಡಿದ ಗೌರವವೂ ಆಗಿತ್ತು. ಆದರೆ ಅವರು ವಿನಯದಿಂದ ಅದನ್ನು ನಿರಾಕರಿಸಿದರು. ಆಗ ಅವರು ಹೇಳಿದ ಮಾತು ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯಿತು: "ಶ್ರೀರಾಮನೇ ನನ್ನ ಕಕ್ಷಿದಾರನಾಗಿದ್ದಾಗ, ನಾನು ಪಾದರಕ್ಷೆ ಧರಿಸಿ ವಾದ ಮಾಡುವುದೇ, ಮೈ ಲಾರ್ಡ್?"

ಈ ಮಾತು ಕೇವಲ ಒಂದು ಉತ್ತರವಾಗಿರಲಿಲ್ಲ. ಅದು ಅವರ ಮನಸ್ಸಿನ ಭಕ್ತಿಯ ಪ್ರತಿಬಿಂಬವಾಗಿತ್ತು. ಅವರ ದೃಷ್ಟಿಯಲ್ಲಿ ನ್ಯಾಯಾಲಯವು ಕೇವಲ ಕಾನೂನಿನ ವೇದಿಕೆಯಲ್ಲ; ಅವರು ಪ್ರತಿನಿಧಿಸುತ್ತಿದ್ದ ಕಕ್ಷಿದಾರನು ಕೇವಲ ಒಂದು ಹೆಸರು ಅಲ್ಲ. ಅದು ಅವರ ನಂಬಿಕೆಯ ಕೇಂದ್ರವಾಗಿದ್ದ ಶ್ರೀರಾಮ.

ಇಂದು ನಾವು ಬದುಕುತ್ತಿರುವ ಜಗತ್ತಿನಲ್ಲಿ ಭಕ್ತಿ ಮತ್ತು ನಂಬಿಕೆಗಳು ಅನೇಕ ಬಾರಿ ಕೇವಲ ಆಚರಣೆಗಳಿಗೆ ಸೀಮಿತವಾಗಿವೆ. ದೇವಾಲಯಕ್ಕೆ ಹೋಗುವುದು, ಪೂಜೆ ಮಾಡುವುದು, ಹಬ್ಬಗಳನ್ನು ಆಚರಿಸುವುದು ಭಕ್ತಿಯ ಒಂದು ಭಾಗವಾಗಬಹುದು. ಆದರೆ ನಿಜವಾದ ಭಕ್ತಿ ನಮ್ಮ ನಡೆ-ನುಡಿಗಳಲ್ಲಿ ಕಾಣಿಸಬೇಕು. ನಮ್ಮ ಕರ್ತವ್ಯದಲ್ಲಿ, ಪ್ರಾಮಾಣಿಕತೆಯಲ್ಲಿ ಮತ್ತು ಮೌಲ್ಯಗಳಲ್ಲಿ ಅದು ಪ್ರತಿಫಲಿಸಬೇಕು.

ಕೆ. ಪರಾಸರನ್ ಅವರ ಜೀವನ ಇದೇ ಸಂದೇಶವನ್ನು ಸಾರುತ್ತದೆ. ಅವರು ಭಕ್ತಿಯನ್ನು ಪ್ರದರ್ಶನದ ವಿಷಯವಾಗಿಸಲಿಲ್ಲ. ತಮ್ಮ ವೃತ್ತಿಪರ ಕರ್ತವ್ಯದಲ್ಲೇ ಅದನ್ನು ಬದುಕಿದರು. ಅವರಲ್ಲಿ ಭಕ್ತಿ ಮತ್ತು ವೃತ್ತಿಪರತೆ ಪರಸ್ಪರ ವಿರೋಧಿಗಳಾಗಿರಲಿಲ್ಲ; ಅವು ಒಂದಕ್ಕೊಂದು ಪೂರಕವಾಗಿದ್ದವು.

ಇಂದಿನ ಸಮಾಜದಲ್ಲಿ ಅನೇಕರು ಯಶಸ್ಸಿನ ಹಿಂದೆ ಓಡುತ್ತಿದ್ದಾರೆ. ಹಣ, ಹುದ್ದೆ, ಹೆಸರು ಮತ್ತು ಖ್ಯಾತಿಯನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಆದರೆ ಆ ಪ್ರಯಾಣದಲ್ಲಿ ಮೌಲ್ಯಗಳನ್ನು ಕಳೆದುಕೊಳ್ಳಬಾರದು. ಏಕೆಂದರೆ ಯಶಸ್ಸು ತಾತ್ಕಾಲಿಕವಾಗಿರಬಹುದು; ಮೌಲ್ಯಗಳು ಶಾಶ್ವತವಾಗಿರುತ್ತವೆ.

ಕೆ. ಪರಾಸರನ್ ಅವರ ಬದುಕು ನಮಗೆ ಮತ್ತೊಂದು ಪಾಠವನ್ನು ಕಲಿಸುತ್ತದೆ. ಅದು ವಿನಯದ ಪಾಠ. ಎಷ್ಟೇ ಜ್ಞಾನವಿದ್ದರೂ, ಎಷ್ಟೇ ಸಾಧನೆ ಮಾಡಿದ್ದರೂ, ವಿನಯವನ್ನು ಉಳಿಸಿಕೊಳ್ಳುವುದು ಮಹತ್ವದ ಗುಣ. ಅವರ ಮಟ್ಟದ ವ್ಯಕ್ತಿಗೆ ಅಹಂಕಾರ ಬರಬಹುದಾಗಿತ್ತು. ಆದರೆ ಅವರು ಸದಾ ಸರಳತೆಯನ್ನು ಆರಿಸಿಕೊಂಡರು.

ನಮ್ಮ ಸಮಾಜದಲ್ಲಿ ಇಂದು ಯುವಜನತೆಗೆ ಆದರ್ಶ ವ್ಯಕ್ತಿಗಳ ಅಗತ್ಯ ಹೆಚ್ಚಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕ್ಷಣಿಕ ಖ್ಯಾತಿ ಗಳಿಸುವವರಿಗಿಂತ, ಮೌಲ್ಯಗಳನ್ನು ಬದುಕಿದ ಮಹನೀಯರ ಬದುಕು ಹೆಚ್ಚು ಪ್ರೇರಣಾದಾಯಕವಾಗಿದೆ. ಕೆ. ಪರಾಶರನ್ ಅವರಂತಹ ವ್ಯಕ್ತಿತ್ವಗಳು ಯುವಕರಿಗೆ ಒಂದು ದಿಕ್ಕು ತೋರಿಸುತ್ತವೆ. ಜ್ಞಾನ ಗಳಿಸಿ, ಸಾಧನೆ ಮಾಡಿ, ಆದರೆ ನಿಮ್ಮ ಮೌಲ್ಯಗಳನ್ನು ಎಂದಿಗೂ ಬಿಟ್ಟುಕೊಡಬೇಡಿ ಎಂಬ ಸಂದೇಶವನ್ನು ನೀಡುತ್ತವೆ.


ಒಬ್ಬ ವ್ಯಕ್ತಿಯ ಮಹತ್ವವನ್ನು ಅವನ ಹುದ್ದೆ ನಿರ್ಧರಿಸುವುದಿಲ್ಲ; ಅವನ ಗುಣಗಳು ನಿರ್ಧರಿಸುತ್ತವೆ. ನ್ಯಾಯಾಲಯದಲ್ಲಿ ವಾದ ಮಂಡಿಸಿದ ಸಾವಿರಾರು ವಕೀಲರು ಇದ್ದಾರೆ. ಆದರೆ ಎಲ್ಲರೂ ಇತಿಹಾಸದಲ್ಲಿ ಉಳಿಯುವುದಿಲ್ಲ. ಉಳಿಯುವುದು ತಮ್ಮ ಜೀವನದ ಮೂಲಕ ಮೌಲ್ಯಗಳನ್ನು ಪ್ರತಿಪಾದಿಸಿದವರು ಮಾತ್ರ.

ಕೆ. ಪರಾಸರನ್ ಅವರ ಈ ಘಟನೆ ನಮಗೆ ನೆನಪಿಸುವುದು ಏನೆಂದರೆ, ಭಕ್ತಿ ಎಂದರೆ ಕೇವಲ ಮಾತುಗಳಲ್ಲ. ಅದು ನಮ್ಮ ಬದುಕಿನ ವಿಧಾನ. ನಂಬಿಕೆ ಎಂದರೆ ಕೇವಲ ಆಚರಣೆಗಳಲ್ಲ. ಅದು ನಮ್ಮ ವ್ಯಕ್ತಿತ್ವದ ಅಡಿಪಾಯ. ಕರ್ತವ್ಯ ಎಂದರೆ ಕೇವಲ ಹೊಣೆಗಾರಿಕೆಯಲ್ಲ. ಅದು ನಮ್ಮ ಆತ್ಮಸಾಕ್ಷಿಗೆ ನೀಡುವ ಉತ್ತರ.

ಇಂದಿನ ವೇಗದ ಯುಗದಲ್ಲಿ ಮನುಷ್ಯರು ಅನೇಕ ವಿಷಯಗಳನ್ನು ಕಲಿಯುತ್ತಿದ್ದಾರೆ. ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಆದರೆ ಕೆಲವು ಶಾಶ್ವತ ಮೌಲ್ಯಗಳನ್ನು ಮರೆಯಬಾರದು. ಗೌರವ, ವಿನಯ, ನಿಷ್ಠೆ, ಭಕ್ತಿ ಮತ್ತು ಕರ್ತವ್ಯಪ್ರಜ್ಞೆ ಇವು ಯಾವ ಕಾಲದಲ್ಲೂ ತಮ್ಮ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ.

"ಶ್ರೀರಾಮನೇ ನನ್ನ ಕಕ್ಷಿದಾರನಾಗಿದ್ದಾಗ, ನಾನು ಪಾದರಕ್ಷೆ ಧರಿಸಿ ವಾದ ಮಾಡುವುದೇ, ಮೈ ಲಾರ್ಡ್?" ಎಂಬ ವಾಕ್ಯ ಕೇವಲ ಒಂದು ನೆನಪಲ್ಲ. ಅದು ಭಕ್ತಿ, ವಿನಯ ಮತ್ತು ಕರ್ತವ್ಯನಿಷ್ಠೆಯ ಜೀವಂತ ಪಾಠವಾಗಿದೆ. ಮುಂದಿನ ಪೀಳಿಗೆಗಳಿಗೂ ಇದು ಪ್ರೇರಣೆಯ ದೀಪವಾಗಿರಲಿದೆ.

ಮಹಾನ್ ವ್ಯಕ್ತಿಗಳು ತಮ್ಮ ಮಾತುಗಳಿಂದ ಮಾತ್ರವಲ್ಲ, ತಮ್ಮ ಬದುಕಿನಿಂದಲೂ ಸಮಾಜಕ್ಕೆ ದಾರಿ ತೋರಿಸುತ್ತಾರೆ. ಕೆ. ಪರಾಸರನ್ ಅವರ ಜೀವನವೂ ಅಂತಹ ದಾರಿದೀಪಗಳಲ್ಲಿ ಒಂದು. ಅವರ ನಿಷ್ಠೆ, ಭಕ್ತಿ ಮತ್ತು ಮೌಲ್ಯಗಳ ಬದ್ಧತೆ ನಮಗೆಲ್ಲರಿಗೂ ಪ್ರೇರಣೆಯಾಗಲಿ.



---

# ಕಂಗಳಲಿ ಕಣ್ಣೀರು ಹಿಡಿದು ಸಾಗೋಣ ನೆನಪುಗಳ ಬುತ್ತಿ ಹೊತ್ತು




। ಆನಂದ ಜಿ ಎನ್. ದಾಂಡೇಲಿ. (ಉ.ಕ.)

ಬದುಕಿನ ಪಯಣದಲ್ಲಿ ಆಗಾಗ ಅನಿವಾರ್ಯತೆಯಲ್ಲಿ ಒದಗಿ ಬರುವ ಅತ್ಯಂತ ಸಂದಿಗ್ಧ ಪರಿಸ್ಥಿತಿಗಳು ಸಿಹಿ ಮತ್ತು ಕಹಿಯಾದ ಅನುಭವ ನೀಡುತ್ತಾ ನೆನಪುಗಳ ಬುತ್ತಿ ಹೊತ್ತು ಹರಿಯುವ ನದಿಯಂತೆ ಸಾಗುವ ನಮ್ಮ ಬದುಕಿನ ಒಂದು ಪುಟದ ಒಂದು ಭಾಗವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಬಯಕೆ.

ಮೊದಲೇ ನಿರ್ಧಾರವಾದಂತೆ ನಮ್ಮ ಪಯಣ ಹಳಿಯಾಳದಿಂದ ಸವಣೂರತ್ತ ಸಾಗಿತ್ತು ಬೆಳ್ಳಂಬೆಳಿಗ್ಗೆ. ಸಾಗುವಾಗ ಕಳೆದ ನಾಲ್ಕು ವರ್ಷದುದ್ದಕ್ಕೂ ಸಾಗಿದ್ದ ದಾರಿ ಇವತ್ತು ನಮ್ಮೊಂದಿಗೆ ಅದೆಷ್ಟೋ ಹಳೆಯ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿತ್ತು. ಪ್ರತಿ ಬಾರಿ ಎರಡು ಗಂಟೆಗೆ ತಲುಪುವ ನಮ್ಮ ಪಯಣ ಇಂದು ಮೂರು ಗಂಟೆ ತೆಗೆದುಕೊಂಡಾಗ ಅದರ ಅನುಭವವೇ ಬೇರೆಯಾಗಿತ್ತು. ಕಂಗಳು ಮೌನದಲ್ಲೇ ಮಾತನಾಡುತ್ತ ಪ್ರಕೃತಿ ಸೊಬಗಲ್ಲಿ ಕಣ್ಣೀರು ಚೆಲ್ಲುತ್ತಾ ಕಳೆದು ಹೋದ ದಿನಗಳಲ್ಲೊಂದು ಪಯಣ ಮಾಡಿದ ಅನುಭವ ಅವಿಸ್ಮರಣೀಯ.

ಅಂತೂ ಇವತ್ತು ಸವಣೂರು ಯಾಕೋ ನಮಗೆ ತುಂಬಾ ದೂರದ ಊರಿನಂತೆ ಕೇವಲ ಕ್ಷಣಿಕ ಸಮಯದ ಅತಿಥಿಯಂತೆ ಭಾಸವಾಗುತ್ತಾ ಮನಸ್ಸನ್ನು ಕಿವುಚಲು ಆರಂಭಿಸಿತ್ತು. ಈ ದಿನ ಭಾರವಾದ ಭಾವನೆಗಳನ್ನು ಹೊತ್ತು ಶಾಲೆಗೆ ತಲುಪುತ್ತಲೇ ಓಡೋಡಿ ಬಂದು ಬಿಗಿದಪ್ಪಿ ಟೀಚರ್-ಟೀಚರ್, ಸರ್ -ಸರ್ ಎನ್ನುವ ಆ ಮುಗ್ಧ ಕುಸುಮಗಳ ಭಾವನೆ ಕಂಡಾಗ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡದ್ದು ಮತ್ತಷ್ಟು ಹೆಮ್ಮೆ ಅನ್ನಿಸಿಬಿಟ್ಟಿತ್ತು. ಆ ಮಕ್ಕಳ ಗದ್ದಲ ಕೂಗಾಟದ ಧ್ವನಿ ಕೇಳಿ ಒಳಗಡೆಯಿಂದ ಹೊರ ಬಂದ ಶಿಕ್ಷಕರ ಬಳಗ ಎದುರಿಗಿದ್ದರು ಕಳಚಿ ಬೀಳುವ ಕೊಂಡಿಯಂತಾ ಅನುಭವ ನೀಡಲಾರಂಭಿಸಿತ್ತು. ಅದರ ಮಧ್ಯಯೇ ನಾಲ್ಕು ವರ್ಷದ ನಮ್ಮ ಶಾಲೆ ನಾವು ಓಡಾಡಿ ಪಾಠ ಮಾಡಿದ ಕೋಣೆಗಳು ದೂರವಾಗುವ ವರ್ಣಿಸಲಾಗದ ಅನುಭವದ ನಡುವೆ ಮನಸ್ಸು ತುಂಬಾ ತೋಳಲಾಟದಲ್ಲಿ ಸಾಗುವಾಗ ಅಳುವಿನ ಮೊಗದಲ್ಲಿ ಸ್ವಾಗತ ಕೋರುವ ಅವರ ಮುಖಗಳು ಅದೆಷ್ಟೋ ವಿಷಯವನ್ನು ಕಣ್ಣ ಸನ್ನೆಯಲ್ಲೇ ತಿಳಿಸಿತ್ತು.



ಇನ್ನು ಬಿಡುವಿಲ್ಲದ ಒತ್ತಡದಲ್ಲಿ ಸಾಗುತ್ತಿದ್ದ ಶಾಲಾ ಮುಖ್ಯೋಪಾಧ್ಯಾಯರು ಹಳೆಯ ಸಿಬ್ಬಂದಿಯಾದ ನಮ್ಮನ್ನು ಅತ್ಯಂತ ಆತ್ಮೀಯತೆಯಲ್ಲಿ ಬರಮಾಡಿಕೊಂಡು ಮಾತನಾಡಿದ ಪರಿ ಹೇಳಲಸಾಧ್ಯ.ಅತ್ಯಂತ ಕಡಿಮೆ ಸಮಯದಲ್ಲಿ ಎಲ್ಲ ಸಿಬ್ಬಂದಿಗಳನ್ನು ಒಂದೆಡೆ ಸೇರಿಸಿ ಪುಟ್ಟ ಬೀಳ್ಕೊಡುಗೆ ಕಾರ್ಯಕ್ರಮಕ್ಕೆ ಅಣಿ ಮಾಡುವಾಗ ಅವರ ಮುಖದಲ್ಲಿ ಕಂಡ ಆ ದುಃಖದ ಛಾಯೆಯು ನಮಗೆ ಮನೆಯವರನ್ನು ಬಿಟ್ಟು ಹೋಗುವ ನೋವಿನ ಮನೆ ಕಾಣತೊಡಗಿತ್ತು.

ವೃತ್ತಿ ಬದುಕಿನ ಮೊದಲ ಸರಕಾರಿ ಕೆಲಸ ಸೇರಿ ಅದಕ್ಕೆ ತನ್ನೂರು ಬಿಟ್ಟಾಗಲೂ ಆಗದ ನೋವು ವೇದನೆ ತನ್ನವರಿಲ್ಲದ ಅಂದಿನ ಊರು ಇಂದು ತನ್ನದಾಗಿ ಕಣ್ಣೀರು ಹರಿಯುವಂತೆ ಮಾಡುವ ಈ ಕ್ಷಣಕ್ಕೆ ಮನಸ್ಸು ಮೌನವಾಗತೊಡಗಿತ್ತು. ಇದೆಲ್ಲದರ ನಡುವೆ ಆಗೊಮ್ಮೆ ಈಗೊಮ್ಮೆ ಪುಟಾಣಿಗಳು ಶಿಕ್ಷಕರ ಕೋಣೆಗೆ ಇಣುಕಿ ಇಣುಕಿ ನೋಡುತ್ತಾ ಕಣ್ಣೀರಿನೊಂದಿಗೆ ಸಾಗುವುದನ್ನು ಕಂಡಾಗ ವೃತ್ತಿ ಬದುಕಿನ ಉನ್ನತ ಸ್ಥಾನಕ್ಕೇರಿದ ಅನುಭವ ಜೊತೆಗೆ ಆ ಮಕ್ಕಳನ್ನು ಆಗಲಿ ಮತ್ತೊಂದು ಶಾಲೆಗೆ ಸಾಗುವ ಅನಿವಾರ್ಯತೆ ಅನೇಕ ಮೌನ ಮಾತುಗಳು,ಅದೆಷ್ಟು ಹಳೆಯ ನೆನಪಿನ ಬುತ್ತಿ ಬಿಚ್ಚಿಟ್ಟಿತ್ತು.

ಸದಾ ನಗುನಗುತ ಮಾತನಾಡುವ ಸಹೋದ್ಯೋಗಿಗಳು ಇಂದು ಕಣ್ಣೆದುರಿಗಿದ್ದರೂ ಯಾಕೋ ದೂರಕ್ಕೆ ಸರಿಯುವಂತೆ ಭಾಸವಾಗುತ್ತಿತ್ತು. ಅವರ ಒಡನಾಟ ಅವರೊಂದಿಗೆ ಹಂಚಿಕೊಂಡ ಅದೆಷ್ಟೋ ಸಿಹಿ ಕಹಿ ಅನುಭವಗಳನ್ನು ಇನ್ನಾರೊಂದಿಗೆ ಹಂಚಿಕೊಳ್ಳಬೇಕು ಎನ್ನುತ್ತಾ ಕೂಗುತ್ತಿರುವ ನಮ್ಮ ಒಳ ಮನಸ್ಸಿಗೆ ಹೇಗೆ ಸಾಂತ್ವನ ಹೇಳುವುದು ಎನ್ನವ ನಮ್ಮ ಜೀವ ಒಂದೆಡೆಯಾದರೆ, ಸದಾ ಕಿತ್ತಾಡುತ್ತಾ ಊಟಕ್ಕೆ ಕೇಳುವ ಸಹೋದ್ಯೋಗಿಗಳ ಎದುರಲ್ಲಿ ಒಳ್ಳೊಳ್ಳೆ ರುಚಿಕರ ಊಟ ಅಣಿಯಾಗಿ ಇದ್ದರು ಅದನ್ನು ಸವಿಯುವ ಮನಸ್ಸಿಲ್ಲದ ಈ ಕ್ಷಣದ ಭಾವ ಹೇಳಲಾಗದು. ಅರಿಯದೆ ಬಂದು ಅನೇಕ ಸಂಬಂಧಗಳನ್ನು ಗೊತ್ತಿಲ್ಲದೇ ಬೆಸೆದುಕೊಂಡು ಅನಿವಾರ್ಯತೆಯಲ್ಲಿ ಅಗಲುವಿಕೆಯ ಈ ಕ್ಷಣಕ್ಕೆ ನಮ್ಮ ಬದುಕಿನ ಪಯಣದಲ್ಲಿ ಹೊಸ ತಿರುವಿಗೆ ಶುಭಾಶಯಗಳನ್ನು ಕೋರುತ್ತಾ ಒಲ್ಲದ ಮನಸ್ಸಿನಿಂದ ಸಾಗುವ ಗಳಿಗೆಯನ್ನು ಅನುಭವಿಸಿ ಅದರ ಭಾಗವಾಗುವ ನಮ್ಮ ಬದುಕನ್ನು ಕರುಣಿಸಿದ ಆ ದೇವರಿಗೆ ಕೃತಜ್ಞತೆ ಸಲ್ಲಿಸೋಣ ಹಾಗೂ ಹೊಸ ಹುರುಪು ಹೊಸ ಉತ್ಸಾಹದೊಂದಿಗೆ ಕಂಗಳಲಿ ಕಣ್ಣೀರು ಹಿಡಿದು ಸಾಗೋಣ ಜೊತೆ ಜೊತೆಗೆ ನೆನಪುಗಳ ಬುತ್ತಿ ಹೊತ್ತು ಮರಳಿ ಹಳಿಯಾಳಕ್ಕೆ ತಲುಪುವುದರಲ್ಲಿ ರಾತ್ರಿ 8 ಗಂಟೆ. ಅನೇಕ ಸಿಹಿಕಹಿ ಅನುಭವಗಳ ಬುತ್ತಿ ಕಟ್ಟಿಕೊಂಡು ನಾವುಗಳು ನಮ್ಮ ಮುಂದಿನ ಬಾಳ ಪಯಣವನ್ನು ಸಾಗಿಸೋಣ ಎನ್ನುವ ನಮ್ಮ ಮನಸ್ಸು ತುಂಬಾ ಭಾರವಾಗಿದೆ ಇಂದು.

ಇಂತಹ ಭಾವನಾತ್ಮಕ ಗಳಿಗೆಗಳು ಪ್ರತಿ ವ್ಯಕ್ತಿಯ ದಾರಿಯಲ್ಲಿ ಬರುವುದು ಸಹಜ ಅದರಲ್ಲಿ ನಾವುಗಳು ಕಹಿಯನ್ನು ದೂರ ತಳ್ಳಿ ಸಿಹಿ ಅನುಭವಗಳನ್ನು ನಮ್ಮೊಂದಿಗೆ ಕೊಂಡು ಹೋಗೋಣ ಅಲ್ವೇ..

---

# ಅನಿರುದ್ಧ್: ಟೀಕೆಗಳನ್ನು ಮೆಟ್ಟಿಲು ಮಾಡಿದ ಛಲಗಾರ



। ಡಾ.ಸುಧಾಕರ.ಜಿ.ಲಕ್ಕವಳ್ಳಿ


ಸ್ಫೂರ್ತಿ ಸುಧೆ - 50

ಇಂದಿನ ಭಾರತೀಯ ಚಿತ್ರರಂಗದ ಸಂಗೀತ ಲೋಕದಲ್ಲಿ ಗಮನ ಸೆಳೆಯುವ ಹೆಸರು ಅನಿರುದ್ಧ್ ರವಿಚಂದರ್.ಕೇವಲ 21ನೇ ವಯಸ್ಸಿನಲ್ಲಿ ಕೊಲವೆರಿ ಡಿ ಹಾಡಿನ ಮೂಲಕ ಜಗತ್ತಿನ ಗಮನ ಸೆಳೆದ ಅವರು,ಯಶಸ್ಸಿನ ಬೆಳಕಿನ ಹಿಂದೆ ಕಠಿಣ ಪರಿಶ್ರಮದ ನೆರಳನ್ನು ಹೊತ್ತಿದ್ದಾರೆ.ಪ್ರಭಾವಿ ಹಿನ್ನೆಲೆ ಇದ್ದರೂ ಆರಂಭದ ದಿನಗಳಲ್ಲಿ ಅವರ ಪ್ರತಿಭೆಗೆ ಟೀಕೆಗಳ ಕೊರತೆ ಇರಲಿಲ್ಲ.

ವಿಮರ್ಶಕರು ಅವರನ್ನು ಒಂದು ಹಾಡಿನ ಅದೃಷ್ಟವಂತ ಎಂದು ಕರೆದರು.ಶಿಫಾರಸಿನಿಂದ ಬಂದವರು ಹೆಚ್ಚು ಕಾಲ ಉಳಿಯುವುದಿಲ್ಲ ಎಂಬ ಮಾತುಗಳು ಕೇಳಿಬಂದವು. ಆದರೆ ಅನಿರುದ್ಧ್ ಆ ಮಾತುಗಳಿಗೆ ಕುಗ್ಗಲಿಲ್ಲ.ಬದಲಾಗಿ ಅವನ್ನೇ ಸವಾಲಾಗಿ ಸ್ವೀಕರಿಸಿದರು.ದಿನರಾತ್ರಿ ಸ್ಟುಡಿಯೋದಲ್ಲಿ ಶ್ರಮಿಸಿ, ಸಂಗೀತದಲ್ಲಿ ಹೊಸ ಶೈಲಿ ಮತ್ತು ಪ್ರಯೋಗಗಳನ್ನು ರೂಪಿಸಿದರು. ಅದರ ಫಲವಾಗಿ ವಿಕ್ರಮ್, ಜೈಲರ್, ಜವಾನ್ ಮೊದಲಾದ ಚಿತ್ರಗಳ ಹಿನ್ನೆಲೆ ಸಂಗೀತವು ಅವರಿಗೆ ಅಪಾರ ಗುರುತನ್ನು ತಂದಿತು.

ಅವರ ಪಯಣ ಯುವಕರಿಗೆ ಸ್ಪಷ್ಟ ಸಂದೇಶ ನೀಡುತ್ತದೆ.ಟೀಕೆಗಳು ನಿಮ್ಮನ್ನು ತಡೆಯಲು ಅಲ್ಲ, ನಿಮ್ಮನ್ನು ರೂಪಿಸಲು ಬರಬಹುದು. ಮಾತುಗಳಿಗೆ ಉತ್ತರ ಶ್ರಮವಾಗಿರಲಿ.ವಯಸ್ಸು ಅಥವಾ ಹಿನ್ನೆಲೆ ಯಶಸ್ಸಿನ ಅಳತೆಗೋಲಲ್ಲ. ಶ್ರದ್ಧೆ,ಪರಿಶ್ರಮ ಮತ್ತು ನಿರಂತರ ನವೀಕರಣವೇ ಉತ್ತುಂಗಕ್ಕೆ ಕರೆದೊಯ್ಯುವ ಹಾದಿ.

ಶೂನ್ಯದಿಂದ ಆರಂಭಿಸಿ ಸಂಗೀತ ಲೋಕದಲ್ಲಿ ತನ್ನದೇ ಸಾಮ್ರಾಜ್ಯ ಕಟ್ಟಿರುವ ಅನಿರುದ್ಧ್, ಪ್ರತಿಯೊಬ್ಬ ಯುವಕನಿಗೂ ನಿಮ್ಮ ಕೆಲಸವೇ ನಿಮ್ಮ ಉತ್ತರ ಎಂಬ ಸ್ಫೂರ್ತಿಯ ಪಾಠವನ್ನು ನೀಡುತ್ತಾರೆ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,